بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 44

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

12 ನವೆಂಬರ್ 2020, 12 ನಬುವ್ವತ್ 1399 ಹಿಜರಿ ಶಮ್‌ಸಿ,
25 ರಬಿಉಲ್ ಅವ್ವಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ

## ಅಲ್ಲಾಹನ ಉಪದೇಶ

وَمَنۡ یَّکۡسِبۡ خَطِیۡٓـَٔۃً
اَوۡ اِثۡمًا ثُمَّ یَرۡمِ بِہٖ بَرِیۡٓـًٔا
فَقَدِ احۡتَمَلَ بُہۡتَانًا وَّ اِثۡمًا مُّبِیۡنًا ○

*(ಅನ್ನಿಸಾಅ್:112)*

ಅಂದರೆ: . ಯಾವನಾದರೂ ಒಂದು ಕೆಡುಕನ್ನು ಮಾಡಿದರೆ, ಅವನು ತನ್ನ ಆತ್ಮಕ್ಕೆ ದೋಷಕರವಾಗಿಯೇ ಅದನ್ನು ಮಾಡುತ್ತಾನೆ. ಅಲ್ಲಾಹನು ಎಲ್ಲ ಬಲ್ಲವನೂ ಬುದ್ಧಿಶಾಲಿಯೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಜುಮುಅ ದಿವಸ ಸ್ನಾನ ಮಾಡುವುದು, ಮಿಸ್ವಕ್ ಮಾಡುವುದು ಮತ್ತು ಸುಗಂಧ ಹಚ್ಚುವ ಶ್ರೇಷ್ಠತೆ

* ಹಝ್‌ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ನಿಮ್ಮಲ್ಲಿ ಯಾರಾದರೂ ಜುಮಅ ದಿವಸ ಪಡೆಯುವವರಾದರೆ ಅವರು ಸ್ನಾನ ಮಾಡಬೇಕು.

* ಹಝ್‌ರತ್ ಇಬ್ನ ಸಯೀದ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ಜುಮಅ ದಿವಸ ಸ್ನಾನ ಮಾಡುವುದು ಪ್ರತಿಯೊಬ್ಬ ವಯಸ್ಕನ ಮೇಲೆ ಕಡ್ಡಾಯವಾಗಿದೆ.

* ಹಝ್‌ರತ್ ಅಬೂ ಸಯೀದ್ ಖುದ್‌ರಿ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ಪ್ರತಿಯೊಬ್ಬ ವಯಸ್ಕ ಸ್ನಾನ ಮಾಡುವುದು ಕಡ್ಡಾಯವಾಗಿದೆ. ಮಿಸ್ವಾಕ್ ಸಹ ಮಾಡಬೇಕಾಗಿದೆ. ಮತ್ತು ಸುಗಂಧವು ದೊರೆತರೆ ಹಚ್ಚಿಕೊಳ್ಳಬೇಕು.

(ಹಝ್‌ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಅಲ್ಲಾಹ್ ಶಾಹ್ ಸಾಹಿಬ್ ಹೇಳುತ್ತಾರೆ. ಜುಮುಅ ದಿವಸದ ಶ್ರೇಷ್ಠತೆಯ ಕಾರಣ ಗುಸುಲ್ (ಸ್ನಾನ) ಮಾಡುವುದು ವಾಜಿಬ್ (ಕಡ್ಡಾಯ)ವಾಗಿದೆ. ಅದೇ ರೀತಿ ಮಿಸ್ವಾಕ್ ಮಾಡುವುದು. ಸುಗಂಧ ಹಚ್ಚುವುದು ಸಹ. ಇವೆಲ್ಲ ಮಾತುಗಳು ಶ್ರೇಷ್ಠತೆಯ ಕಾರಣದಿಂದಾಗಿ ಅನಿವಾರ್ಯವಾಗಿದೆಯೇ ಹೊರತು ಅದರ ಬದಲು ನಮಾಝ್ ನಿರ್ವಹಿಸದಂತೆ ಫರ್ಜ್ ಏನಲ್ಲ)
**(ಸಹೀ ಬುಖಾರಿ ಕಿತಾಬುಲ್ ಜುಮುಅ, ಮುದ್ರಣ ಖಾದಿಯಾನ್ 2006)**

**ಝಾಹಿರ್ ಪರಸ್ತಿ (ಬಾಹ್ಯಾ ಆಡಂಬರ) ದಿಂದಾಗಿ ಯಹೂದ್ಯರ ಮೇಲೆ ಆಪತ್ತು ಬಂದೆರಗಿತು. ಅದರಿಂದಾಗಿ ಅವರು ಮಸೀಹ್(ಅ) ರವರನ್ನು ತಿರಸ್ಕರಿಸಿದರು. ಅದೇ ಆಪತ್ತು ನಮ್ಮ ಕಾಲದ ಮೌಲ್ವಿಗಳು ಮತ್ತು ಮುಲ್ಲಾಗಳು ಎದುರಿಸುತ್ತಿದ್ದಾರೆ, ಮಸೀಹ್ ಮಹದಿ ಬಂದು ಯುದ್ಧ ಮಾಡುವವರೆಂದು ನಿರೀಕ್ಷಿಸುತ್ತಿದ್ದಾರೆ. ಆದರೆ ಅದು ಅಲ್ಲಾಹನ ಆಶಯವಾಗಿರಲಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಅಬೂ ಲಹಬ್ ಮತ್ತು ಹಮ್ಮಾ ಲತಲ್ ಹತಬ್-ರ ತಾತ್ಪರ್ಯ

ಅಬೂ ಲಹಬ್ ಎಂಬುದು ಪವಿತ್ರ ಖುರ್‌ಆನ್‌ನಲ್ಲಿ ಸರ್ವ ಸಾಮಾನ್ಯ ಪದವಾಗಿದೆಯೇ ಹೊರತು ವಿಶೇಷ ಪದ ಅಲ್ಲ. ತಾತ್ಪರ್ಯವೇನೆಂದರೆ ವಿದ್ವೇಷಾಗ್ನಿ ಪ್ರೋಚೋದನೆ ನೀಡುವ ಗುಣ ಹೊಂದಿದ ವ್ಯಕ್ತಿ ಎಂದರ್ಥ. ಅದೇ ರೀತಿ **ಹಮ್ಮಾ ಲತಲ್ ಹತಬ್-** ಇಂಧನವನ್ನು ಹೋರುವ ಮಹಿಳೆ ಎಂದರ್ಥ. ಚಾಡಿಕೋರ. ಅಗ್ನಿ ಹಚ್ಚುವ ಚಾಡೀಕೋರ ಮಹಿಳೆಯು ಪುರುಷರಲ್ಲಿ ಪಿತೂರಿತನವನ್ನು ಹೆಚ್ಚಿಸುತ್ತಾಳೆ........

ಲೋಕದ ಐಶ್ವರ್ಯ ಮತ್ತು ಆಡಳಿತದ ಮೇಲೆ ಮೋಹ ಹೊಂದುವುದು ಮುಖ್ಯವಲ್ಲ. ಬದಲು ಪ್ರಾರ್ಥನೆ ಮುಖ್ಯವಾದ ಸ್ಥಾನ ಹೊಂದಿರುತ್ತದೆ. ಇಂದು ನಾನು ಉಪಸ್ಥಿತ, ಅನುಪಸ್ಥಿತ, ನೆನಪಾದ ಅಥವಾ ಅವರ ರೂಪ ನೆನೆದು, ಬಂಧುಗಳೆಲ್ಲರಿಗೆ ತುಂಬ ಪ್ರಾರ್ಥಿಸಿದ್ದೇನೆ. ಎಷ್ಟೊಂದು ನೊಂದು ಅತ್ತು ಪ್ರಾರ್ಥಿಸಿದ್ದೇನೆಂದರೆ ಅಂತಹ ಒಂದು ಪ್ರಾರ್ಥನೆ. ಒಂದು ಶುಷ್ಕ ಕಟ್ಟಿಗೆಯ ಮೇಲೆ ಮಾಡಿದ್ದರೆ ಅದು ಹಸುರಾಗಿ ಚಿಗುರತೊಡಗುತ್ತಿತ್ತು. ನಮ್ಮ ಬಂಧುಗಳಿಗೆ ಅದೊಂದು ದೊಡ್ಡ ದೃಷ್ಟಾಂತವಾಗಿದೆ.

ಬಾಹ್ಯ ಆಡಂಬರವು ಪಥ ಭ್ರಷ್ಟತೆಗೆ ಕಾರಣವಾಗುತ್ತದೆ. ಬಾಹ್ಯ ಆಡಂಬರದಿಂದಾಗಿಯೇ ಯಹೂದ್ಯರ ಮೇಲೆ ಆಪತ್ತು ಬಂದೆರಗಿತು. ಆ ಕಾರಣದಿಂದಲೇ ಅವರು ಮಸೀಹ್(ಅ) ರನ್ನು ತಿರಸ್ಕರಿಸಿದರು. ಅಷ್ಟೇ ಅಲ್ಲ ನಮ್ಮ ನಬಿ(ಸ) ರವರನ್ನೂ ಸಹ ತಿರಸ್ಕರಿಸಿದರು. ಅವರ ಪ್ರಕಾರ ಮಸೀಹರು ಬಾದಶಾಹರಾಗಿ ಬರುವರು ಮತ್ತು ತುಂಬ ವೈಭವ ಘನತೆ ಗೌರವಗಳೊಂದಿಗೆ ಸಿಂಹಾಸನ ಅಲಂಕರಿಸುವರು. ಅವರ ಆಗಮನಕ್ಕಿಂತ ಮುಂಚೆ ಈಲಿಯಾ ಆಕಾಶದಿಂದ ಇಳಿದು ಬರುವರು. ಆದರೆ ಮಸೀಹರು ಬಂದ ಮೇಲೆ ಅವರು ಮೋಹವನ್ನೇ ಕಲಿಮ ಎಂದು ಮತ್ತು ಎಂತಹ ವಿನಯ ತೋರಿದರೆಂದರೆ ಅವರಿಗೆ ಯಾರೂ ಸಹ ಹೀಗಿರುವಾಗ ಬಾಹ್ಯ ಆಡಂಬರ ನೆಚ್ಚಿಕೊಂಡವರು, ಹೇಗೆ? ನಂಬಲು ಸಾಧ್ಯ. ಬದಲಾಗಿ ಅವರನ್ನು ನಿರಾಕರಿಸಿದರು ಮತ್ತು ಇಂದಿನವರೆಗೂ ಬಂದಿರುತ್ತಾರೆ. ಅದೇ ಆಪತ್ತು ನಮ್ಮ ಕಾಲಘಟ್ಟದ ಮೌಲ್ವಿಗಳಿಗೆ ಮತ್ತು ಮುಲ್ಲಾಗಳಿಗೆ ಎದುರಾಗಿದೆ. ಅವರು ಯುದ್ಧ ಸಾರುವ ಮಹದಿ ಮಸೀಹರನ್ನು ನಿರೀಕ್ಷಿಸುತ್ತಿದ್ದಾರೆ. ಆದರೆ ಅಲ್ಲಾಹನು ಆ ಆಶಯವೇ ಹೊಂದಿರಲಿಲ್ಲ. ಬುಖಾರಿಯಲ್ಲಿ "ಯಝುಮ್ ಹರಬ್" ಎಂದು ಹೇಳಿ ಆ ಕಥೆಯೇ ಮುಗಿಸಿಬಿಡಲಾಗಿದೆ. ಆದರೂ ಸಹ ಅವರು ಶಾಂತಿ ಸಂದೇಶ ಹೊತ್ತು ಬಂದವರನ್ನು ನಂಬಲು ಸಿದ್ಧರಿಲ್ಲ.

**(ಮಲ್ಫೂಝೂತ್, ಸಂಪುಟ 1, ಪುಟ 220-221, ಮುದ್ರಣ ಖಾದಿಯನ್ 2018)**

**ಇಸ್ಲಾಮ್‌ನ ಉಪದೇಶ ಪ್ರಕಾರ. ನಿಮಗೆ ಯುದ್ಧದಲ್ಲಿ ಮಹಿಳೆಯರು, ಮಕ್ಕಳು, ಹಾಗು ವೃದ್ಧರನ್ನು ಹತ್ಯೆ ಮಾಡುವ ಅನುಮತಿ ಇಲ್ಲ. ವಚನ ದ್ರೋಹ, ವಂಚನೆ, ಮೃತರ ಕಿವಿ, ಮೂಗು ಕತ್ತರಿಸುವ, ಪಾದರಿ, ಪಂಡಿತರಿಗೆ ಮತ್ತು ಜ್ಞಾನಿಗಳನ್ನು ಹತ್ಯೆ ಮಾಡುವ ಅನುಮತಿ ಇಲ್ಲ. ಯಾವ ಉದ್ಯಾನವನ ಕತ್ತರಿಸುವ, ಯಾವುದೇ ಕಟ್ಟಡ ಧ್ವಂಸಗೊಳಿಸುವ ಅಥವಾ ಬೆಂಕಿ ಹಚ್ಚಲು ಅನುಮತಿ ಇಲ್ಲ. ಎಂದಾದರೂ ಈ ನಿರ್ದೇಶನಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ರಸೂಲುಲ್ಲಾಹ್(ಸ) ಕಠಿಣವಾದ ವಿರೋಧ (ಅಸಂತುಷ್ಟ) ವ್ಯಕ್ತಪಡಿಸುತ್ತಾರೆ.**

ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ.

ಲೌಕಿಕ ಸರಕಾರಗಳು ಯಾವುದೇ ದೇಶ ಪ್ರವೇಶಿಸಿದರೆ ಅಲ್ಲಿ ಯೋಜನೆ ರಹಿತ ದೌರ್ಜನ್ಯಗಳನ್ನು ಪ್ರಾರಂಭಿಸುವರು. ಏಕೆಂದರೆ ಆ ಮೂಲಕ ತಮ್ಮ ಪ್ರತಾಪ, ವೈಭವ ತೋರಿಸುವ ಉದ್ದೇಶ ಅವರಿಗಿರುತ್ತದೆ. ಆದರೆ ಇಸ್ಲಾಮ್ ಅದಕ್ಕೆ ಅನುಮತಿ ನೀಡುವುದಿಲ್ಲ. ಅದೇ ರೀತಿ ರಸೂಲುಲ್ಲಾಹ್(ಸ) ಹೇಳಿದರು. ನೀವು ಜಯಿಸಿದ ದೇಶಗಳಿಗೆ ತೆರಳಿದರೆ ಅಲ್ಲಿ ಜನರಿಗೆ ಕಷ್ಟದಾಯಕವಲ್ಲದ ಸರಳ ರೀತಿಯ ನಿರ್ದೇಶನಗಳನ್ನು ನೀಡಿರಿ. ಮತ್ತು ಹೇಳಿದರು. ಸೈನ್ಯವು ರಸ್ತೆಯ ಮೇಲೆ ಪಥ ಸಂಚಲನ ಮಾಡಿದರೆ ಸಾಮಾನ್ಯ ಪಾದಚಾರಿಗಳಿಗೆ ತೊಂದರೆಯಾಗದ ರೀತಿಯಲ್ಲಿ ನಡೆದು ಕೊಳ್ಳಿರಿ. ಸಹಾಬಿಯೋರ್ವರು ಹೇಳುತ್ತಾರೆ. ಒಂದು ಸಂದರ್ಭದಲ್ಲಿ ಸೈನ್ಯ ಹೊರಡುವ ರೀತಿ ಹೇಗಿತ್ತೆಂದರೆ ಜನರಿಗೆ ಅವರ ಮನೆಗಳಿಂದ ಹೊರ ಬರುವುದು ಕಷ್ಟವಾಗತೊಡಗಿತ್ತು. ಆಗ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی العَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ಸುರ್ಮಚಶ್ಮ ಆರ್ಯ ಗ್ರಂಥವನ್ನು ಖಂಡಿಸಿ ಬರೆಯುವವರಿಗೆ ಐದು ನೂರು ರುಪಾಯಿಗಳ ಭವ್ಯ ಬಹುಮಾನದ ಘೋಷಣೆ

**(ಸಂಚಿಕೆ 40ರ ಉಳಿದ ಭಾಗ)**

**ಮಾನವರಲ್ಲಿ ವರ್ಗಭೇದ ವೇದದ ಒಂದು ಅತ್ಯಂತ ಕೆಟ್ಟದಾದ ಕಳಂಕವಾಗಿದೆ**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವೇದಗಳನ್ವಯ ಬ್ರಾಹ್ಮಣರು ಉಚ್ಚಸ್ತರದ ಸಮುದಾಯವಾಗಿದೆ, ಅವರ ಪಾಪಗಳು ಸಹ ಕ್ಷಮಿಸಲ್ಪಡುತ್ತವೆ. ಮನುಸ್ಮೃತಿಯಲ್ಲಿ ಈ ರೀತಿ ಬರೆಯಲಾಗಿದೆ, ಯಾರಾದರು ಶೂದ್ರನು ಬ್ರಾಹ್ಮಣನಿಗೆ ಕೆಟ್ಟ ಪದ ಪ್ರಯೋಗಿಸಿದರೆ, ಅವನ ನಾಲಿಗೆ ಸೀಳಬೇಕಾಗಿದೆ ಮತ್ತು ಹಿಂದೂಗಳಲ್ಲಿ ಬ್ರಾಹ್ಮಣ ಹೊರತುಪಡಿಸಿ ಇತರ ಸಮುದಾಯದವರಲ್ಲಿ ಯರಾದರೂ ಸಂತಾನವಿಲ್ಲದವರಾದರೆ ಶಾಸ್ತ್ರಗಳ ಆಜ್ಞೆ ಪ್ರಕಾರ ಅವನು ತನ್ನ ಮಡದಿಯನ್ನು ಬ್ರಾಹ್ಮಣನ ಬಳಿಗೆ ಕಳುಹಿಸಬೇಕು. ಅವನು ಸಂಭೋಗ ಮಾಡಿ ಅವಳಿಗೆ ಗರ್ಭಧರಿಸುವಂತೆ ಮಾಡುವನು. ಈ ತರಹದ 32 ಚಿತ್ರ ವಿಚಿತ್ರ ಹಕ್ಕುಗಳು ಬ್ರಾಹ್ಮಣರಿಗಾಗಿ ಬಂದೋಬಸ್ತು ಮಾಡಿ ಇಟ್ಟಿದೆ. ಹಾಗಾಗಿ ಮನುಶಾಸ್ತ ಮತ್ತು ಇತರ ಶಾಸ್ತ್ರಗಳನ್ನು ಓದಿರುವರ ಮೇಲೆ ಇದೇನು ಗುಟ್ಟಿನ ವಿಷಯವಲ್ಲ. ಬ್ರಾಹ್ಮಣರ ವಾದ ಅದೇ ಆಗಿದೆ. ಇವೆಲ್ಲ ವೇದಗಳ ಮಾತಾಗಿವೆ, ಅವು ವೇದಗಳಲ್ಲಿ ಬರೆದಿದೆ. (ಸುರ್ಮ ಚಶ್ಮ ಆರ್ಯ, ಸಂಪುಟ–2, ಪುಟ–187)

ಮನುಸ್ಮೃತಿಯಿಂದ ನಮಗೆ ಒಂದು ಮಾತು ನೆನಪಾಯಿತು. ಆಗಸ್ಟ್ 5ರಂದು ಆಯೋಧ್ಯೆಯಲ್ಲಿ ರಾಮಮಂದಿರದ ಅಡಿಗಲ್ಲು ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಮೂಲಕ ವಿಜೃಂಭನೆಯಿಂದ ನೆರವೇರಿಸಲಾಯಿತು. ಈ ಭವ್ಯವಾದ ಮಂದಿರ ಮೂರು ವರ್ಷದೊಳಗೆ ಪೂರ್ಣ ಗೊಳಿಸಲಾಗುವುದು. 161 ಅಡಿ ಅದರ ಎತ್ತರವಾಗಿರುವುದು. ಹತ್ತು ಎಕ್ಕರೆಯ ವಿಶಾಲ ಭೂಮಿಯಲ್ಲಿ ಈ ಮಂದಿರ ನಿರ್ಮಾಣವಾಗುವುದು. ಮತ್ತು ಸರಯು ನದಿಯ ಬಲಭಾಗದಲ್ಲಿ ಶ್ರೀ ರಾಮಚಂದ್ರ ಮಹಾರಾಜ್ ಅವರ 251 ಮೀಟರ್ ಎತ್ತರದ ವಿಗ್ರಹ ನಿರ್ಮಾಣ ಮಾಡಲಾಗುವುದು. ಅದು ಪ್ರಪಂಚದ ಅತಿ ಎತ್ತರದ ವಿಗ್ರಹವಾಗಿರುವುದು. ಈ ಭವ್ಯವಾದ ಸಮಾರಂಭದ ವೇಳೆ ದೇಶದ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರಿಗೆ ಭಾಗವಹಿಸಲು ಆಮಂತ್ರಣ ನೀಡಿರಲಿಲ್ಲ. ಅದಕ್ಕೆ ಪ್ರತಿಕ್ರಯಿಸುತ್ತ ಆಮ್ ಆದ್ಮಿ ಪಕ್ಷದ ಮುಖಂಡರೊಬ್ಬರು ಹೇಳಿದರು: ದೇಶದ ಅತ್ಯುನ್ನತ ಹಾಗೂ ಪ್ರಮುಖ ಸ್ಥಾನ ಹೊಂದಿದ ವ್ಯಕ್ತಿಯೊಬ್ಬರನ್ನು ಈ ಸಮಾರಂಭಕ್ಕೆ ಅಹ್ವಾನಿಸಲಿಲ್ಲ ಅದಕ್ಕೆ ಕಾರಣ ಅವರು ದಲಿತ ಸಮಾಜಕ್ಕೆ ಸಂಬಂಧಿಸಿದವರಾಗಿದ್ದಾರೆ. ವಾಸ್ತವದಲ್ಲಿ ಇದು ಮನುಸ್ಮೃತಿಯ ಚಿಂತನೆಯಾಗಿದೆ.

ಅಲ್ಲಾಹನು ಸರ್ವರ ಪರಿಪಾಲಕನಾದರೆ ಈ ಅನ್ಯಾಯಗಳು ಏಕೆ? ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಿಮ್ಮ ವೇದಗಳ ಪ್ರತಿಪಾದನೆ ಹೇಗಿದೆ ಎಂದರೆ ಅದು ಪರಮೇಶ್ವರನ ಮರ್ಯಾದೆಯೂ ಸಹ ಉಳಿಸಲಿಲ್ಲ, ಇತ್ತ ಮನುಷ್ಯ ಪ್ರಾಣಿಗಳಲ್ಲಿಯೂ ಭೇದ ಉಳಿಸಲಿಲ್ಲ ಕಾನೂನು ನ್ಯಾಯಗಳ ಯಾವ ಪಾಠವು ನಿಮಗೆ ಕಲಿಸಲಿಲ್ಲ. ಎತ್ತ ನೋಡಿದರು ಅನ್ಯಾಯ, ಎತ್ತ ದೃಷ್ಠಿ ಹಾಯಿಸಿದರೂ ಅನ್ಯಾಯವನ್ನೆ ಪೂಜಿಸಲಾಗುತ್ತಿದೆ. ಮೊದಲನೆಯದಾಗಿ ದೇವನನ್ನು ಸೃಷ್ಠಿಕರ್ತ ಹಾಗೂ ಕರುಣೆಯ ಸ್ಥಾನದಿಂದ ಪದಚ್ಯುತ ಗೊಳಿಸಲಾಯಿತು, ಮತ್ತೆ ಅವನ ದಾಸರನ್ನು ಶಾಶ್ವತ ಮುಕ್ತಿಯಿಂದ ವಂಚಿತರನ್ನಾಗಿ ಮಾಡಲಾಯಿತು. ಕೇವಲ ಆರ್ಯರ ಮೇಲೆ ದೇವರ ಗ್ರಂಥ ಅವತೀರ್ಣವಾಯಿತು ಎನ್ನಲಾಯಿತು. ಸಂಸ್ಕೃತ ಪರಮೇಶ್ವರನ ಭಾಷೆ ಎಂದು ನಿಯೋಜಿತಗೊಳಿಸಿದರು. ಎಲ್ಲ ನಿಷ್ಠಾವಂತರು, ದೇವಭಕ್ತರು ಎಂತಹ ತ್ಯಾಗವೇ ಪ್ರದರ್ಶಿಸಲಿ ಆ ನಾಲ್ಕು ವೇದ ಋಷಿ, ಮುನಿಗಳ ಹೊರತು ಯಾರಿಗೂ ದೇವಜ್ಞಾನವಾಗಲಿ ದೇವವಾಣಿಯಾಗಲಿ ಲಭಿಸುವುದಿಲ್ಲ. ಇವೆಲ್ಲ ಮಾತುಗಳು ಕಾನೂನು ನ್ಯಾಯದಿಂದ ಮುಕ್ತವಾಗಿವೆ. ವಿವೇಕಶಾಲಿಯೊಬ್ಬನ ದೃಷ್ಠಿಯಲ್ಲಿ ಈ ಮಾತುಗಳು ದೇವನ ಅಪಾರ ಅನುಗ್ರಹ ವಿಶಾಲ ಔದಾರ್ಯಕ್ಕೆ ಹೋಲುತ್ತದೆಯೇ. ಅವನು ಶಾಶ್ವತವಾಗಿ ಆರ್ಯವ್ರತ್ತದ ಆ ನಾಲ್ಕು ಋಷಿ ಮುನಿಗಳ ಹೊರತು ಎಲ್ಲರ ಮೇಲೆ ಪ್ರವಾದಿತ್ವ ಹಾಗೂ ದೇವವಾಣಿಯೂ ಪ್ರತಿಬಿಂಬಿಸಲಾಗಿದೆ. ಇವೆಲ್ಲ ಆ ನಾಲ್ಕು ಋಷಿಗಳ ಮಾತ್ರ ಗುತ್ತಿಗೆಯಾಗಿದೆ. ಉಳಿದ ಎಲ್ಲಾ ದೇವನ ದಾಸರ ಮೇಲೆ ಶಾಶ್ವತವಾಗಿ ಪ್ರತಿಬಂಧನ ಒಡ್ಡಲಾಗಿದೆ. ಆದುದರಿಂದ ಅವರದ್ದು ಇದು ನ್ಯಾಯವೆಂದಾದರೆ ಇತರ ಸತ್ಯತೆಯ ಬಗ್ಗೆ ನ್ಯಾಯದ ಬಗ್ಗೆ ಹೇಗೆ ಭರವಸೆ ತಾಳಬಹುದು. (ಅದೇ ಪುಟ–190)

**ದೇವವಾಣಿ ಕೇವಲ ನಾಲ್ಕು ಋಷಿಗಳಿಗೆ ಸೀಮಿತವೇಕೆ?**

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವೇದಗಳು ಯಾವುದೇ ಮನುಷ್ಯನೊಂದಿಗೆ ದೇವವಾಣಿಯನ್ನು ಪಡೆಯಲು ಅನರ್ಹರು ಎಂದರೆ, ವೇದಗ್ರಂಥದ ರಚನೆಕಾರರಾದ ಆ ನಾಲ್ಕು ಋಷಿಗಳಿಗೆ ಮಾತ್ರ ಅದನ್ನು ಸೀಮಿತಗೊಳಿಸಿದೆ. ಇದು ಇತರ ದೊಡ್ಡ ದೊಡ್ಡ ತಪ್ಪುಗಳಂತೆಯೇ ಒಂದು ದೊಡ್ಡ ತಪ್ಪಾಗಿದೆ. ನಿಜವಾಗಿಯೂ ಆ ವೇದಗಳ ಉದ್ದೇಶ ಅದನ್ನು ಸರಿಯಾಗಿ ಅಧ್ಯಾಯನ ಮಾಡಿ ಅದರಂತೆ ನಡೆದು ಉನ್ನತಿ ಸಾಧಿಸುವುದಾಗಿದ್ದರೆ ಸ್ವಯಂ ಆ ದ್ವಾರಗಳನ್ನು ಏಕೆ ಮುಚ್ಚುತ್ತದೆ. ವೇದಗಳು ಅವತರಿಸಿದ ಆ ಋಷಿಗಳ ಜೀವನ ಇತರರಿಗೆ ಮಾದರಿಯಾಗಿ, ಅವರಂತೆ ಉನ್ನತಿ ಪಡೆಯುವುದು ಸಾಧ್ಯವಿಲ್ಲ ಎಂದಾದರೆ ಆ ಋಷಿಗಳನ್ನು ಕಳುಹಿಸುವ ಅಗತ್ಯವಾದರೂ ಏನಿತ್ತು?

ವೇದದಲ್ಲಿ ಏಕೆ ದೇವನ ಶಿಕ್ಷಣವಿಲ್ಲ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವೇದ ವಿಚಿತ್ರವಾದ ದೈವಿಕ ಗ್ರಂಥವಾಗಿದೆ. ಅದರಲ್ಲಿ ಸೃಷ್ಠಿ ಪೂಜೆಯ ಹೊರತು ಬೇರೆ ಮಾತುಗಳೇ ಇಲ್ಲ. ವೇದಗಳಲ್ಲಿ ಸೃಷ್ಠಿ ಪೂಜೆಯ ಶಿಕ್ಷಣ ಒಂದೆರಡು ಜಾಗದಲ್ಲೇನಾದರೂ ಇರುತ್ತಿದ್ದರೆ ಅದು ಗೌಪ್ಯವಾಗಿರುತ್ತಿತ್ತು. ಅದು ಸಾರಸಗಟಾಗಿ ಸೃಷ್ಠಿ ಪೂಜೆಯ ಶಿಕ್ಷಣದಿಂದ ತುಂಬಿ ಹೋಗಿದೆ. ಲೋಕವನ್ನು ಸುತ್ತಾಡಿ ಬನ್ನಿ ಎಲ್ಲಾ ಸಮೂದಾಯದವರೊಡನೆ ಕೇಳಿ ನೋಡಿ, ನಾನು ವೇದ ಓದಿ ಏಕ ದೇವನ ಶಿಕ್ಷಣವನ್ನು ಅರಿತುಕೊಂಡಿದ್ದೇನೆ ಎಂಬ ಸತ್ಯವಾಗಿ ಹೇಳುತ್ತೇವೆ, ಹೆಚ್ಚು ಮಾತನಾಡಿ ಸಮಯ ವ್ಯರ್ಥ ಮಾಡಲು ಬಯಸುವುದಿಲ್ಲ– ಪವಿತ್ರ ಖುರ್‌ಆನಿನ ಹತ್ತು ಪುಟಗಳಲ್ಲೇ ಏಕದೇವನ ಜ್ಞಾನ ಸೂರ್ಯನಂತೆ ಪ್ರಜ್ವಲಿಸುತ್ತಿವೆ. ಅದನ್ನು ಯಾವುದಾದರು ವ್ಯಕ್ತಿ ವೇದದ ಸಾವಿರ ಪುಟಗಳಿಂದ ತೆಗೆದು ತೋರಿಸಿದರೆ ನಾವು ಒಪ್ಪಿಕೊಳ್ಳುತ್ತೇವೆ– ಹೌದು ವೇದದಲ್ಲಿಯೂ ಏಕದೇವತ್ವವಿದೆ ಎಂದು. ಯಾರೆ ಆಗಲಿ ತಮ್ಮ ಅರ್ಹತೆಯನ್ವಯ ನಮ್ಮೊಡನೆ ಶರತ್ತುಬದ್ಧ ತರ್ಕಕ್ಕೆ ಸಿದ್ಧರಾಗಲಿ. (ಅದೇ ಪುಟ–215)

**ವೇದದಲ್ಲಿ ಸತ್ಕರ್ಮಗಳ ಹಾಗೂ ಉತ್ತಮ ನಡತೆಯ ಕುರಿತು ಯಾವ ಉಪದೇಶವೂ ಇಲ್ಲ**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಮ್ ಹೇಳುತ್ತಾರೆ: ವೇದವೂ ಸತ್ಕರ್ಮಗಳ ಮತ್ತು ಉತ್ತಮ ನಡತೆಯ ವಿವರದಿಂದ ರಜೆ ತೆಗೆದುಕೊಂಡಂತೆ ಕಾಣುತ್ತದೆ. ಆರ್ಯ ಜನರು ಲಾಗಾಮಿಲ್ಲದ ಕುದರೆಯಂತಾಗಲು ಕಾರಣವೇನೆಂದರೆ ವೇದಗಳಲ್ಲಿ ದೇವರಾಧನೆ ಮತ್ತು ಪವಿತ್ರವಾದ ಆತ್ಮಶುದ್ಧಿಯ ಶಿಕ್ಷಣ ಇಲ್ಲವಾಗಿದೆ. ಭಕ್ತಿಯು ಬೇರು ದೇವಾರಾಧನೆಯಲ್ಲಿರುತ್ತದೆ ದೇವ ಗ್ರಂಥದಲ್ಲಿರುತ್ತದೆ. ಏಕೆಂದರೆ ದೇವಗ್ರಂಥ ಓದಿದರೆ ಅಥವಾ ಕೇಳಿದರೆ ಅವಶ್ಯವಾಗಿ ಅದರಿಂದ ಪ್ರಭಾವಿತರಾಗಿರುತ್ತಾರೆ ಮತ್ತು ಅದರ ಬಗ್ಗೆ ಪ್ರೀತಿ ಉಂಟಾಗುತ್ತದೆ. ಆದರೆ ಆರ್ಯ ಜನರು ಇದರಿಂದ ಬಹು ದೂರವಾಗಿದ್ದಾರೆ. ಈಗಂತೂ ಅವರ ಭಕ್ತಿ, ಆರಾಧನೆ ಅನಾವಶ್ಯಕವಾಗಿ ತಪ್ಪು ಇತ್ಯಾದಿ ವಸ್ತುಗಳನ್ನು ಬೆಂಕಿಗಿಟ್ಟು ಹವನ ಮಾಡಿ ಹಾಳು ಮಾಡುತ್ತಿದ್ದಾರೆ. ಅದೇ ವಸ್ತುಗಳು ಯಾರಿಗಾದರೂ ತಿನ್ನಲು ಎಷ್ಟು ಉತ್ತಮವಾದೀತು. (ಅದೇ ಪುಟ–282)

**ವೇದಗಳು ಆಧ್ಯಾತ್ಮಿಕ ಅನುಗ್ರಹ ಹಾಗೂ ದೇವಸಾನಿಧ್ಯದವರೆಗೆ ತಲುಪಿಸುವುದರಿಂದ ವಂಚಿತವಾಗಿದೆ**

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವೇದಗಳು ಆಧ್ಯಾತ್ಮಿಕ ಅನುಗ್ರಹಗಳು ಹಾಗೂ ದೇವಸಾನಿಧ್ಯದವರೆಗೆ ತಲುಪಿಸುವುದರಿಂದ ವಂಚಿತವಾಗಿವೆ ಮತ್ತು ವಿವಶವಾಗಿದೆ ಏಕೆಂದರೆ ಹೀಗೆ ಅವು ವಂಚಿತರಾಗಲಿಕ್ಕಿಲ್ಲ ಆ ಅನುಗ್ರಹಗಳು ಪಡೆಯಲು ಇರುವಂತಹ ಶಿಕ್ಷಣ, ದೇವಜ್ಞಾನ, ದೈವಿಕ ಅನುಗ್ರಹಗಳ ಜ್ಞಾನ, ಅದರ ಪಾಲನೆ, ಸತ್ಕರ್ಮಗಳು ಮತ್ತು ಆತ್ಮ ಶುದ್ಧಿಗಿರುವ ಮಾರ್ಗಗಳು ಕಂಡು ಹಿಡಿಯುವುದರಲ್ಲಿ ವೇದಗಳು ವಂಚಿತವಾಗಿವೆ. ಈ ಭೂಮಂಡಲದಲ್ಲಿ ಇದರ ಕುರಿತು ವಾದಿಸಲು ಮತ್ತು ವೇದಗಳನ್ನು ಪವಿತ್ರ ಖುರ್‌ಆನಿನೊಂದಿಗೆ ಹೋಲಿಸಿ ತೋರಿಸಲು ಯಾರಾದರೂ ಆರ್ಯ ಇದ್ದಾನೇಯೆ? ಬದುಕಿದ್ದರೆ ನಮಗೆ ತಿಳಿಸಲಿ. (ಅದೇ ಪುಟ–295)

ವೇದ ಋಷಿಗಳು ಯಾರಾಗಿದ್ದರು ಏನಾಗಿದ್ದರು ಎಂಬ ಸುಳಿವು ಇಲ್ಲ. ವೇದ ಋಷಿಗಳ ಕುರಿತು ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವೇದ ಋಷಿಗಳು ಯಾರಾಗಿದ್ದರು, ಅವರ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಇವರು ಎಂತಹ ಭಾಗ್ಯವಂತರು! ಈ ಜನರು ಇಹಲೋಕದಲ್ಲೂ ಅಲ್ಲಾಹನ ಸಂಪ್ರೀತಿ ಗಳಿಸಿದವರಾಗಿದ್ದರು ಮತ್ತು ಪರಲೋಕದಲ್ಲೂ ಅಲ್ಲಾಹನ ಸಂಪ್ರೀತಿ ಗಳಿಸುವವರಾಗಿರುವರು.**

**ಸಮುದಾಯದ ಅಮೀನ್, ಅಶ್ರ ಮುಬಶ್ಶಿರ ಎಂದರೆ, ಸ್ವರ್ಗಕ್ಕೆ ಅರ್ಹರು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಜೀವಿತಕಾಲದಲ್ಲಿ ಸುವಾರ್ತೆ ನೀಡಿದ ಹತ್ತು ಸಹಾಬಿವರ್ಯರಲ್ಲಿ ಸೇರಿದ್ದ ಸಹಾಬಿ ಹಾಗೂ ಮುಹಮ್ಮದ್[ಸ]ರವರೊಂದಿಗೆ ನಿಷ್ಠೆಯ ಸಂಬಂಧ ಹೊಂದಿದ ಬದರಿ ಸಹಾಬಿಯಾದ ಹಝ್ರತ್ ಅಬೂ ಉಬೈದ ಬಿನ್ ಜರಾಹ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ಮೂರು ದಿವಂಗತರು ಫಝ್‌ಲುದ್ದೀನ್ ಖಟಕ್ ಸಾಹಿಬರ ಮಗನಾದ ಪ್ರೊಫೆಸರ್ ಡಾಕ್ಟರ್ ನಯೀಮುದ್ದೀನ್ ಖಟಕ್ ಸಾಹಿಬ್ ಶಹೀದ್, ಮುಹಮ್ಮದ್ ಸಾದಿಖ್ ಸಾಹಿಬರ ಮಗನಾದ ಉಸಾಮ ಸಾದಿಖ್ ಸಾಹಿಬ್ ಹಾಗೂ ಸಲೀಂ ಅಹ್ಮದ್ ಮಲಿಕ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–10–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಕಳೆದ ಖುತ್‌ಬದಲ್ಲಿ ಹಝ್ರತ್ ಅಬೂ ಉಬೈದ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅದರ ಉಳಿದ ಭಾಗವನ್ನು ಪ್ರಸ್ತಾಪಿಸಲಾಗುವುದು. ಹಿಜರೀ 15ರಲ್ಲಿ, ಸಿರಿಯಾದ ಪರಿಸರ ಪ್ರದೇಶದಲ್ಲಿ, ಯರ್‌ಮೂಕಿನ ಕಣಿವೆಯಲ್ಲಿ, ಯರ್ಮೂಕ್ ನದಿಯ ತೀರ ಪ್ರದೇಶದಲ್ಲಿ ದೊಡ್ಡದಾದೊಂದು ಯುದ್ಧ ನಡೆಯಿತು. ರೋಮನ್ನರು ಬಾಹಾನಿನ ನೇತೃತ್ವದಲ್ಲಿ ಎರಡುವರೆ ಲಕ್ಷದಷ್ಟು ಯೋಧರನ್ನು ಯುದ್ಧ ಮೈದಾನಕ್ಕೆ ತಂದಿದ್ದರು. ಅದೇ ವೇಳೆ ಮುಸ್ಲಿಮರ ಸಂಖ್ಯೆ ಮೂವತ್ತು ಸಾವಿರದಷ್ಟು ಇದ್ದಿತ್ತು. ಅವರಲ್ಲಿ ಒಂದು ಸಾವಿರದಷ್ಟು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬಿಯರಾಗಿದ್ದರು. ಅವರಲ್ಲೂ ನೂರರಷ್ಟು ಬದರೀ ಸಹಾಬಿಯರಾಗಿದ್ದರು.

ಸಮಾಲೋಚನೆಯ ನಂತರ ತಾತ್ಕಾಲಿಕವಾಗಿ ಹಿಮ್ಸ್‌ನಿಂದ ಮುಸ್ಲಿಮರು ತಮ್ಮ ಸೈನ್ಯವನ್ನು ಮರಳಿ ಕರೆದರು. ತಾತ್ಕಲಿಕವಾಗಿ ಸಂರಕ್ಷಣೆಯಿಂದ ಹಿಂದೆ ಸರಿಯುತ್ತಿರುವುದರಿಂದ ಜಿಝ್‌ಯವನ್ನು ವಾಪಸ್ಸು ಕೊಡುತ್ತೇವೆ ಎಂದು ಮುಸ್ಲಿಮರು ಅಲ್ಲಿರುವ ಕ್ರೈಸ್ತರೊಡನೆ ಹೇಳಿದರು. ಯಾವ ಉದ್ದೇಶಕ್ಕಾಗಿ ಟಾಕ್ಸ್ ಅಥವಾ ತೆರಿಗೆ ವಸೂಲು ಮಾಡಲಾಗುತ್ತಿದೆಯೋ ಆ ಕೆಲಸವನ್ನು ಈಗ ಮಾಡಲು ಸಾಧ್ಯವಿಲ್ಲದ ಕಾರಣದಿಂದ ಜಿಝಿಯಾ ಮರಳಿ ಕೊಡುತ್ತಿದ್ದೇವೆ ಎಂದು ಅವರೊಡನೆ ಹೇಳಲಾಯಿತು. ಹೀಗೆ ಹಿಮ್‌ಸಿನ ನಿವಾಸಿಗಳಿಗೆ ಜಿಝಿಯಾ ವಾಪಸ್ಸು ಕೊಡಲಾಯಿತು. ವಾಪಾಸ್ಸು ಕೊಡಲಾದ ಜಿಝಿಯಾದ ಹಣ ಹಲವು ಲಕ್ಷಗಳಷ್ಟಿತ್ತು. ಈ ಮೊಬಲಗನ್ನು ವಾಪಾಸ್ಸು ಕೊಡಲಾದಾಗ, ಕ್ರೈಸ್ತರು ಮುಸ್ಲಿಮರ ಸತ್ಯಸಂಧತೆ ಮತ್ತು ನ್ಯಾಯವನ್ನು ಕಂಡು ಅಳಲು ಶುರುಮಾಡಿದರು. 'ಹೇ ದಯಾಳುವಾದ ಮುಸ್ಲಿಮ್ ಆಡಳಿತಗಾರರೇ, ದೇವನು ನಿಮ್ಮನ್ನು ಪುನಃ ಮರಳಿ ತರಲಿ ಎಂದು ಅಲ್ಲಿಯ ಕ್ರೈಸ್ತರು ಮನೆಯ ಮಾಳಿಗೆಯ ಮೇಲೆ ಹತ್ತಿಕೊಂಡು ಪ್ರಾರ್ಥಿಸುತ್ತಿದ್ದರು.

ಮುಸ್ಲಿಮರು ಹಿಮ್ಸ್‌ನಿಂದ ಹಿಂದೆ ಸರಿದ ಕಾರಣದಿಂದ ರೋಮನ್ನರ ಧೈರ್ಯ ಇಮ್ಮಡಿಯಾಯಿತು. ಮುಸ್ಲಿಮರ ವಿರುದ್ಧ ಹೋರಾಡಲು ಅವರು ದೊಡ್ಡದಾದೊಂದು ಸೈನ್ಯದೊಂದಿಗೆ ಯರ್ಮೂಕಿಗೆ ಬಂದು ಡೇರೆಹಾಕಿದರು. ಆದರೆ, ಮುಸ್ಲಿಮರ ವಿಶ್ವಾಸದ ಆವೇಶದ ಕಾರಣದಿಂದ ಅವರಿಗೆ ಮನಸ್ಸಿನಲ್ಲಿ ಭಯವೂ ಇತ್ತು. ಆದ್ದರಿಂದ ಮೈತ್ರಿ ಮಾಡಲು ಸಹ ಅವರು ಇಚ್ಛಿಸಿದ್ದರು. ಮೈತ್ರಿ ಮಾಡಲು ಪ್ರಯತ್ನಿಸುತ್ತಿದ್ದರು. ಜಾರ್ಜ್ ಎಂಬ ಹೆಸರಿನ ರಾಯಭಾರಿಯನ್ನು ರೋಮನ್ನರ ಸೇನಾಧಿಪತಿ ಇಸ್ಲಾಮಿನ ಸೇನೆಯ ಬಳಿಗೆ ಕಳುಹಿಸಿದ್ದನು. ರಾಯಭಾರಿ ಇಸ್ಲಾಮಿನ ಸೇನೆಯ ಸಮೀಪ ತಲುಪಿದಾಗ, ಮುಸ್ಲಿಮರು ಮಗ್‌ರಿಬ್ ನಮಾಝ್ ನಿರ್ವಹಿಸುತ್ತಿದ್ದರು. ಮುಸ್ಲಿಮರು ನಮ್ರತೆ ಮತ್ತು ಭಯಭಕ್ತಿಯಿಂದ ಅಲ್ಲಾಹನ ಮುಂದೆ ಸಾಷ್ಟಾಂಗ ಮಾಡುವುದನ್ನು ನೋಡಿ ಆ ರಾಯಭಾರಿ ಪ್ರಭಾವಿತನಾದರು. ಅವರು ಹಝ್ರತ್ ಅಬೂ ಉಬೈದರೊಡನೆ(ರ) ಕೆಲವು ಪ್ರಶ್ನೆಗಳನ್ನು ಕೇಳಿದರು. 'ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರ ಕುರಿತು ನಿಮ್ಮ ಅಭಿಪ್ರಾಯವೇನು' ಎಂಬುದಾಗಿತ್ತು ಅವುಗಳಲ್ಲಿ ಒಂದು ಸವಾಲು. ಹಝ್ರತ್ ಅಬೂ ಉಬೈದ(ರ) ಪವಿತ್ರ ಖುರ್‌ಆನಿನ ಈ ವಚನವನ್ನು ಓದಿದರು. **ಯಾ ಅಹ್ಲಲ್ ಕಿತಾಬಿ ಲಾ ತಗ್‌ಲೂ ಫೀ ದೀನಿಕುಂ ವಲಾ ತಖೂಲು ಅಲಲ್ಲಾಹಿ ಇಲ್ಲಲ್ ಹಕ್ಕ್.ಇನ್ನಮಲ್ ಮಸೀಹು ಈಸಬ್ನು ಮರ್‌ಯಮ ರಸೂಲುಲ್ಲಾಹಿ ವ ಕಲಿಮತುಹೂ. ಅಲ್‌ಖಾಹ ಇಲಾ ಮರ್‌ಯಮ ವರೂಹುಮ್ಮಿನ್‌ಹು. ಫಆಮಿನೂ ಬಿಲ್ಲಾಹಿ ವರುಸುಲಿಹೀ. ವಲಾ ತಖೂಲು ಸಲಾಸ. ಇಂತಹೂ ಖೈರಲ್ಲಕುಂ. ಇನ್ನಮಲ್ಲಾಹು ಇಲಾಹುನ್ ವಾಹಿದ್. ಸುಬ್‌ಹಾನಹೂ ಅನ್‌ಯಕೂನ ಲಹೂ ವಲದ್. ಲಹೂ ಮಾಫಿಸ್ಸಮಾವಾತಿ ವಮಾ ಫಿಲ್‌ಅರ್‌ಝ್.ವಕಫಾ ಬಿಲ್ಲಾಹಿ ವಕೀಲಾ. (ಅನ್ನಿಸಾಅ: 172)** ಅದರ ಅರ್ಥ ಹೀಗಿದೆ: ಎಲೈ ಗ್ರಂಥದವರೇ, ನೀವು ನಿಮ್ಮ ಧರ್ಮಕಾರ್ಯದಲ್ಲಿ ಮಿತಿಮೀರಬೇಡಿರಿ. ಅಲ್ಲಾಹನ ಬಗ್ಗೆ ಸತ್ಯವನ್ನಲ್ಲದೆ ನೀವು ಹೇಳಬೇಡಿರಿ. ದಿಟವಾಗಿಯೂ ಮರ್ಯಮ್ ಪುತ್ರ ಈಸಾ ಮಸೀಹ್ ಅಲ್ಲಾಹನ ಕೇವಲ ಒಬ್ಬ ಸಂದೇಶವಾಹಕರಾಗಿದ್ದರು. ಅವರು ಮರ್ಯಮ್‌ರಿಗೆ ಅವನು ಅವತೀರ್ಣಗೊಳಿಸಿದ ವಚನದ ಈಡೇರಿಕೆಯೂ ಒಂದು ಅನುಗ್ರಹವೂ ಆಗಿದ್ದರು. ಆದುದರಿಂದ ನೀವು ಅಲ್ಲಾಹನಲ್ಲೂ ಅವನ ಎಲ್ಲ ಸಂದೇಶವಾಹಕರಲ್ಲೂ ವಿಶ್ವಾಸವಿಡಿರಿ. '(ದೇವರು) ಮೂವರು' ಎಂದು ನೀವು ಹೇಳಬೇಡಿರಿ. ನೀವು (ಹಾಗೆ ಹೇಳುವುದನ್ನು) ಬಿಟ್ಟುಬಿಡಿರಿ. (ಅದು) ನಿಮಗೆ ಗುಣಕರ. ನಿಸ್ಸಂದೇಹವಾಗಿಯೂ ಅಲ್ಲಾಹನು ಒಬ್ಬನೇ ದೇವ. ಅವನಿಗೆ ಸಂತಾನವುಂಟಾಗುವುದೆಂಬುದು ಅವನ ಪರಿಶುದ್ಧತೆಗೆ ಎಷ್ಟೋ ದೂರದ ಮಾತು. ಆಕಾಶಗಳಲ್ಲಿರುವ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನದ್ದಾಗಿವೆ. ರಕ್ಷಕನಾಗಿ ಅಲ್ಲಾಹನೇ ಸಾಕು.

ಅನಂತರ ಮುಂದಿನ ವಚನವನ್ನು ಓದಿದರು: **ಲನ್‌ಯಸ್‌ತಂಕಿಫಲ್ ಮಸೀಹು ಅನ್‌ಯಕೂನ ಅಬ್‌ದನ್ ಲಿಲ್ಲಾಹಿ ವಲಲ್‌ಮಲಾಇಕತುಲ್ ಮುಕರ್ರಬೂನ್. (ಅನ್ನಿಸಾಅ: 173)** ಎಂದರೆ, ತಾನು ಅಲ್ಲಾಹನ ಒಬ್ಬ ದಾಸನೆಂಬುದನ್ನು ಮಸೀಹ್ ಎಂದಿಗೂ ಕೀಳಾಗಿ ಕಾಣಲಾರರು. ಹಾಗೆಯೇ (ಅಲ್ಲಾಹನ) ಸಾಮೀಪ್ಯ ಪಡೆದ ದೇವದೂತರು ಸಹ ಅದನ್ನು ನಿರ್ಲಕ್ಷ್ಯಭಾವದಿಂದ ಕಾಣಲಾರರು.

ಪವಿತ್ರ ಖುರ್‌ಆನಿನ ಈ ಅಧ್ಯಾಪನೆಯನ್ನು ಕೇಳಿದಾಗ, ಜಾರ್ಜ್ ಉಚ್ಚಸ್ವರದಲ್ಲಿ ಹೇಳಿದರು: 'ನಿಸ್ಸಂಶಯವಾಗಿಯೂ ಮಸೀಹರ ಗುಣವೈಶಿಷ್ಟ್ಯಗಳು ಇವೇ ಆಗಿವೆ ಮತ್ತು ನಿಮ್ಮ ಪ್ರವಾದಿ ಸತ್ಯವಂತನಾಗಿರುವರು.' ಹೀಗೆ ಹೇಳಿದ ನಂತರ ಪ್ರತಿನಿಧಿಯಾಗಿ ಬಂದ ಅವರು ಮುಸ್ಲಿಮರಾದರು. ಈಗ ಅವರಿಗೆ ತನ್ನ ಸೈನ್ಯಕ್ಕೆ ಮರಳಿ ಹೋಗಲು ಇಷ್ಟವಿರಲಿಲ್ಲ. ಆದರೆ ಹಝ್ರತ್ ಅಬೂ ಉಬೈದ(ರ) ಹೇಳಿದರು: ನಾವು ಮೋಸ ಮಾಡಿದ್ದೇವೆ ಎಂದು ರೋಮನ್ನರು ಭಾವಿಸುವರು ಆದ್ದರಿಂದ ನೀನು ಮರಳಿಹೋಗಿರಿ, ನಾಳೆ ಇಲ್ಲಿಂದ ಒಬ್ಬ ರಾಯಭಾರಿ ಹೋಗುವರು, ಅವರೊಂದಿಗೆ ಬನ್ನಿರಿ" ಹೀಗೆ ಹೇಳಿ ಅವರನ್ನು

ವಾಪಾಸ್ಸು ಕಳಿಸಿದರು. ಕ್ರೈಸ್ತರ ಸೇನೆಯನ್ನು ಸಹ ಹಝ್ರತ್ ಅಬೂ ಉಬೈದ(ರ) ಇಸ್ಲಾಮಿನ ಕಡೆಗೆ ಆಮಂತ್ರಿಸಿದರು. ಇಸ್ಲಾಮಿನ ಸಮತ್ವ, ಸಹೋದರತೆ ಮತ್ತು ಇಸ್ಲಾಮಿನ ನೈತಿಕ ಪಾಠಗಳನ್ನು ಅವರ ಮುಂದಿರಿಸಿದರು. ಮುಂದಿನ ದಿನ, ಹಝ್ರತ್ ಖ಼ಾಲಿದ್ ಬಿನ್ ವಲೀದ್‌ರನ್ನು(ರ) ಅವರ ಕಡೆಗೆ ಕಳುಹಿಸಿದ್ದರು. ಆದರೆ, ಯಾವುದೇ ಪರಿಣಾಮವುಂಟಾಗಲಿಲ್ಲ. ಯುದ್ಧದ ತಯಾರಿ ಶುರುವಾಯಿತು. ಸೈನ್ಯದ ಹಿಂದೆ ಮುಸ್ಲಿಮರಾದ ಸ್ತ್ರೀಯರು ಇದ್ದರು. ಅವರು ಯುದ್ಧದ ದಿನಗಳಲ್ಲಿ ಸೈನಕರಿಗೆ ಕುಡಿಯಲು ನೀರು ಒದಗಿಸುತ್ತಿದ್ದರು, ಗಾಯಾಳು ಆದವರ ಶುಶ್ರೂಷೆ ನಡೆಸುತ್ತಿದ್ದರು ಮತ್ತು ಯೋಧರಿಗೆ ಧೈರ್ಯ ತುಂಬಿಸುತ್ತಿದ್ದರು. ಈ ಸ್ತ್ರೀಯರಲ್ಲಿ, ಹಝ್ರತ್ ಅಸ್ಮಾ ಬಿನ್ತ್ ಅಬೂಬಕ್ಕರ್, ಮಕ್ಕಾ ವಿಜಯದ ಸಮಯದಲ್ಲಿ ಮುಸ್ಲಿಮರಾದ ಹಝ್ರತ್ ಅಬೂಸುಫ್‌ಯಾನ್‌ರ ಪತ್ನಿಯಾದ ಹಝ್ರತ್ ಹಿಂದ ಬಿನ್ತ್ ಉತ್‌ಬ, ಹಝ್ರತ್ ಉಮ್ಮು ಆಬಾನ್ ಮುಂತಾದವರು ಇದ್ದರು. ಯುದ್ಧಕ್ಕೆ ಮುಂಚಿತವಾಗಿ ಹಝ್ರತ್ ಅಬೂ ಉಬೈದ(ರ) ಮುಸ್ಲಿಮ್ ಸ್ತ್ರೀಯರನ್ನು ಸಂಬೋಧಿಸಿ ಹೇಳಿದರು: ಹೇ ವೀರ ಸ್ತ್ರೀಯರೇ, ಡೇರೆಗಳ ಕೋಲುಗಳನ್ನು ಕಿತ್ತೆಗೆದುಕೊಂಡು ಕೈಗಳಲ್ಲಿ ಇಡಿರಿ. ಕಲ್ಲುಗಳಿಂದ ತಮ್ಮ ಚೀಲಗಳನ್ನು ತುಂಬಿಸಿರಿ, ಮುಸ್ಲಿಮರನ್ನು ಯುದ್ಧಕ್ಕಾಗಿ ಹುರಿದುಂಬಿಸಿರಿ. ಇಂದು ಹೋರಾಟದ ದಿನವಾಗಿದೆ, ಬೆನ್ನು ತೋರಿಸಿ ಹಿಮ್ಮೆಟ್ಟಬೇಡಿರಿ ಎಂದು ಪುರುಷರೊಡನೆ ಹೇಳಿರಿ. ಮುಸ್ಲಿಮರು ವಿಜಯಿಸುತ್ತಿರುವುದಾಗಿ ಕಾಣುವರಾದರೆ, ನೀವು ನಿಮ್ಮ ಜಾಗದಲ್ಲೇ ಕುಳಿತುಕೊಳ್ಳಿರಿ. ಆದರೆ, ಮುಸ್ಲಿಮರು ಹಿಮ್ಮೆಟ್ಟುತ್ತಿರುವುದಾಗಿ ಕಂಡುಬಂದರೆ, ಅವರ ಮುಖಗಳ ಕಡೆಗೆ ಡೇರೆಯ ಗೂಟವನ್ನು ಎಸೆಯಿರಿ, ಕಲ್ಲುಗಳನ್ನು ಎಸೆಯುತ್ತಾ ಅವರನ್ನು ಯುದ್ಧ ಮೈದಾನಕ್ಕೆ ಮರಳಿ ಕಳುಹಿಸಿರಿ. ತಮ್ಮ ಮಕ್ಕಳನ್ನು ಕೈಯಲ್ಲಿ ಎತ್ತಿಕೊಂಡು ತೋರಿಸಿ, ತಮ್ಮ ಕುಟುಂಬ ಮತ್ತು ಮಕ್ಕಳಿಗಾಗಿ ಹಾಗೂ ಇಸ್ಲಾಮಿನ ಪರವಾಗಿ ತಮ್ಮ ಜೀವವನ್ನು ಅರ್ಪಿಸಿರಿ ಎಂದು ಪುರುಷರೊಡನೆ ಹೇಳಿರಿ.

ಅನಂತರ ಅಬೂ ಉಬೈದ(ರ) ಪುರುಷರೊಡನೆ ಹೀಗೆ ಹೇಳಿದರು: 'ಅಲ್ಲಾಹನ ದಾಸರೇ, ಅಲ್ಲಾಹನ ಸಹಾಯಕ್ಕಾಗಿ ಮುಂದಕ್ಕೆ ಧಾವಿಸಿರಿ. ಅವನು ನಿಮಗೆ ನೆರವು ನೀಡುವನು. ನಿಮ್ಮ ಪಾದಗಳಿಗೆ ಸ್ಥಿರತೆಯನ್ನು ನೀಡುವನು. ಹೇ ಅಲ್ಲಾಹನ ದಾಸರೇ, ಸಹನೆ ಕೈಗೊಳ್ಳಿರಿ, ಸತ್ಯನಿಷೇಧದಿಂದ ವಿಮೋಚನೆ ನೀಡುವ ಮಾರ್ಗ ಸಹನೆಯೇ ಆಗಿದೆ. ಅದು ಅಲ್ಲಾಹನ ಸಂಪ್ರೀತಿ ಲಭಿಸಲು ಮತ್ತು ನ್ಯೂನತೆಗಳನ್ನು ಇಲ್ಲವಾಗಿಸಲು ಕಾರಣವಾಗುವುದು. ನೀವು ನಿಮ್ಮ ಪಂಕ್ತಿಯನ್ನು ಮುರಿಯಬೇಡಿರಿ, ಯುದ್ಧವನ್ನು ಎಂದಿಗೂ ನೀವು ಪ್ರಾರಂಭಿಸಬೇಡಿರಿ, ಈಟಿಗಳನ್ನು ಎತ್ತಿಹಿಡಿಯಿರಿ, ಗುರಾಣಿಗಳನ್ನು ಗಟ್ಟಿಯಾಗಿ ಹಿಡಿಯಿರಿ. ನಾಲಗೆಗಳನ್ನು ಅಲ್ಲಾಹನ ಸ್ಮರಣೆಯಲ್ಲಿ ನಿರತವನ್ನಾಗಿಸಿರಿ. ಅಲ್ಲಾಹನು ಅವನ ಇಚ್ಛೆಯನ್ನು ಈಡೇರಿಸಲಿ. ಯುದ್ಧವನ್ನು ನೀವು ಪ್ರಾರಂಭಿಸಬೇಡಿರಿ, ಆದರೆ, ಶತ್ರುಗಳು ಯುದ್ಧ ಮಾಡಿದರೆ, ಬೆನ್ನು ತಿರುಗಿಸಬೇಡಿರಿ."

ಶತ್ರುಗಳ ಸೈನ್ಯದ ಮುಂದೆ ಚಿನ್ನದ ಶಿಲುಬೆಯಿತ್ತು. ಅವರ ಅಸ್ತ್ರಗಳ ಹೊಳಪು ಕಣ್ಣುಗಳನ್ನು ಚುಚ್ಚುತ್ತಿತ್ತು. ಅವರ ಸೈನಿಕರ ತಲೆಯಿಂದ ಕಾಲುಗಳ ತನಕ ಲೋಹಗಳಿಂದ ಮುಚ್ಚಲ್ಪಟ್ಟಿದ್ದುವು. ಎಂದರೆ, ಯುದ್ಧ ಕವಚ ಧರಿಸಿದ್ದರು. ಯುದ್ಧ ಮೈದಾನದಿಂದ ಓಡಿ ಹೋಗದಿರಲು ಅವರು ತಮ್ಮ ಕಾಲುಗಳಿಗೆ ಸಂಕೋಲೆಗಳನ್ನು ಕಟ್ಟಿದ್ದರು. ಸಾಯುತ್ತೇವೆ ಅಥವಾ ಕೊಲ್ಲುತ್ತೇವೆ ಎಂದು ಪಣತೊಟ್ಟಿದ್ದರು. ಪಾದ್ರಿಗಳು ಇಂಜೀಲಿನ ವಚನಗಳನ್ನು ಓದಿ ಅವರಿಗೆ ಆವೇಶ ತುಂಬಿಸುತ್ತಿದ್ದರು.

ಶತ್ರು ಸೈನ್ಯ ಸಮುದ್ರದ ಅಲೆಗಳ ಹಾಗೆ ಮುಂದಕ್ಕೆ ಬರುತ್ತಿತ್ತು. ಆರಂಭದಲ್ಲಿ ರೋಮನ್ನರು ಮೇಲುಗೈ ಸಾಧಿಸುತ್ತಿದ್ದರು. ಅವರು ಮುನ್ನುಗ್ಗಿ ಮುಸ್ಲಿಮರನ್ನು ನೂಕಲು ಶುರುಮಾಡಿದರು. ಕ್ರೈಸ್ತರು ತಮ್ಮ ಕೆಲವು ಬಿಲ್ಲುಗಾರರನ್ನು ಒಂದು ಗುಡ್ಡೆಯ ಮೇಲೆ ನಿಲ್ಲಿಸಿದ್ದರು. ವಿಶೇಷವಾಗಿ ಸಹಾಬರನ್ನು ಗುರಿಯಾಗಿಸಲು ಅವರಿಗೆ ನಿರ್ದೇಶಿಸಲಾಗಿತ್ತು. ಮಹಾನ್ ವ್ಯಕ್ತಿಗಳು ಕೊಲ್ಲಲ್ಪಟ್ಟರೆ, ಉಳಿದ ಸೈನಿಕರು ಧೈರ್ಯಗುಂದುವರು ಮತ್ತು ಯುದ್ಧ ಮೈದಾನದಿಂದ ಓಡಿಹೋಗುವರು ಎಂದು ಅವರಿಗೆ ಗೊತ್ತಿತ್ತು. ಪರಿಣಾಮವೇನಾಯಿತೆಂದರೆ, ಹಲವಾರು ಸಹಾಬಿಯರು ಶಹೀದ್ ಆದರು ಮತ್ತು ಹಲವರ ಕಣ್ಣುಗಳು ನಷ್ಟವಾಯಿತು. ಮಕ್ಕ ವಿಜಯದ ಸಮಯದಲ್ಲಿ ಮುಸ್ಲಿಮರಾಗಿದ್ದ ಇಕ್ರಿಮ ಈ ಸ್ಥಿತಿಯನ್ನು ಕಂಡರು. ಹಿಂದೆ ನಡೆದ ಅಹಿತ ಘಟನೆಗಳಿಗೆ ಪರಿಹಾರ ಉಂಟುಮಾಡಲು ಸೌಭಾಗ್ಯ ಲಭಿಸಲು ಅಲ್ಲಾಹನೊಡನೆ ದುಆ ಮಾಡಿರಿ ಎಂದು ಮಕ್ಕ ವಿಜಯದ ಸಮಯದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹಝ್ರತ್ ಇಕ್ರಿಮ(ರ) ಹೇಳಿದ್ದರು. ಹೇಗಿದ್ದರೂ ಹಝ್ರತ್ ಇಕ್ರಿಮ(ರ) ತಮ್ಮ ಸಂಗಡಿಗರೊಂದಿಗೆ ಹಝ್ರತ್ ಅಬೂ ಉಬೈದರ(ರ) ಸನ್ನಿಧಿಯಲ್ಲಿ ಹಾಜರಾಗಿ ಹಝ್ರತ್ ಅಬೂ ಉಬೈದರೊಡನೆ(ರ) ಹೇಳಿದರು: 'ಸಹಾಬರು ಹಿರಿದಾದ ಸೇವೆಗಳನ್ನು ಮಾಡಿದವರಾಗಿದ್ದಾರೆ. ಆದ್ದರಿಂದ ಅನಂತರ ಬಂದಿರುವ ನಮಗೆ ಪ್ರತಿಫಲ ಪಡೆಯಲು ಅವಕಾಶವನ್ನು ಕೊಡಿರಿ. ನಾವು ಶತ್ರು ಸೇನೆಯ ಹೃದಯಭಾಗದಲ್ಲಿ ಎಂದರೆ, ಮಧ್ಯದಲ್ಲಿ ಆಕ್ರಮಣ ನಡೆಸುವೆವು ಮತ್ತು ಕ್ರೈಸ್ತ ಸೇನಾಧಿಪತಿಗಳನ್ನು ಕೊಲ್ಲುವೆವು.' ಹಝ್ರತ್ ಅಬೂ ಉಬೈದ(ರ) ಹೇಳಿದರು: 'ಇದು ತುಂಬ ಅಪಾಯದ ಸಂಗತಿಯಾಗಿದೆ. ಹೀಗೆ ಮಾಡಿದರೆ, ಅಲ್ಲಿ ಹೋಗುವ ಎಲ್ಲ ಯುವಕರು ಕೊಲ್ಲಲ್ಪಡುವರು.' ಇಕ್ರಿಮ ಹೇಳಿದರು: 'ನೀವು ಹೇಳಿದ್ದು ಸರಿಯೇ ಆಗಿದೆ, ಆದರೆ ಇದಲ್ಲದೆ ಬೇರೆ ಮಾರ್ಗವಿಲ್ಲ. ನಾವು ಯುವಕರು ರಕ್ಷೆಹೊಂದಿ ಸಹಾಬರು ಕೊಲ್ಲಲ್ಪಡಬೇಕೆಂದು ನೀವು ಬಯಸುವಿರಾ? ಹಝ್ರತ್ ಇಕ್ರಿಮ ಈಗ ಮುಸ್ಲಿರಾಗಿದ್ದ ಕಾರಣದಿಂದ ಅವರೊಳಗೆ ವಿಶ್ವಾಸದ ಒಂದು ಆವೇಶವಿತ್ತು. ಅಲ್ಲಾಹನಿಗಾಗಿ ತ್ಯಾಗಮಾಡಲು ಅತಿಯಾದ ಇಚ್ಛೆಯಿತ್ತು. ನಾನ್ನೂರು ಸೈನಕರೊಂದಿಗೆ ಶತ್ರು ಸೈನ್ಯದ ಮಧ್ಯೆ ಭಾಗಕ್ಕೆ ಹೋಗಿ ಆಕ್ರಮಣ ನಡೆಸಲು ಹಝ್ರತ್ ಇಕ್ರಿಮ(ರ) ಪದೇ ಪದೇ ಹಝ್ರತ್ ಅಬೂ ಉಬೈದರೊಡನೆ(ರ) ಅನುಮತಿ ಕೇಳುತ್ತಿದ್ದರು.

ಕೊನೆಗೆ ಹಝ್ರತ್ ಇಕ್ರಿಮರ ಒತ್ತಾಯದ ಕಾರಣದಿಂದ ಹಝ್ರತ್ ಅಬೂ ಉಬೈದ(ರ) ಅನುಮತಿ ನೀಡಿದರು. ಹೀಗೆ ಅವರು ಶತ್ರು ಸೈನ್ಯದ ಕೇಂದ್ರಭಾಗವನ್ನುಆಕ್ರಮಿಸಿ ಅವರನ್ನು ಸೋಲಿಸಿದರು. ಆದರೆ, ಈ ಹೋರಾಟದಲ್ಲಿ ಹೆಚ್ಚಿನ ಯುವಕರು ಶಹೀದ್ ಆದರು. ಮುಸ್ಲಿಮರು ರೋಮನ್ನರನ್ನು ರೋಮನ್ನರೇ ತೋಡಿದ್ದ ಹೊಂಡಗಳ ಕಡೆಗೆ ನೂಕುತ್ತಾ ಕೊಂಡುಹೋದರು. ಸ್ವತಃ ಯುದ್ಧಮೈದಾನದಿಂದ ಓಡಿ ಹೋಗದಿರಲು ಶತ್ರುಗಳು ತಮ್ಮನ್ನು ತಾವೇ ಸರಪಳಿಗಳಿಂದ ಕಟ್ಟಿಹಾಕಿದ್ದ ಕಾರಣದಿಂದ ಸಾಲುಸಾಲಾಗಿ ಹೊಂಡಗಳಲ್ಲಿ ಬೀಳುತ್ತಾ ಹೋದರು. ಒಬ್ಬರು ಹೊಂಡದೊಳಗೆ ಬೀಳುವಾಗ ಅವನು ತನ್ನೊಂದಿಗೆ ಇದ್ದ ಹತ್ತು ಮಂದಿಯರನ್ನು ಸೇರಿಸಿಕೊಂಡು ಬೀಳುತ್ತಾಹೋಗುತ್ತಿದ್ದನು. ಎಂಬತ್ತು ಸಾವಿರ ಸತ್ಯನಿಷೇಧಿಗಳು ಹಿಂದಕ್ಕೆ ಸರಿಯುತ್ತಾ ಯರ್ಮೂಕ್ ನದಿಯಲ್ಲಿ ಮುಳುಗಿ ಸತ್ತರು. ಒಂದು ಲಕ್ಷದಷ್ಟು ರೋಮನ್ನರನ್ನು ಮುಸ್ಲಿಮರು ಯುದ್ಧ ಮೈದಾನದಲ್ಲಿ ಕೊಂದುಹಾಕಿದರು. ಮೂರು ಸಾವಿರದಷ್ಟು ಮುಸ್ಲಿಮರು ಶಹೀದ್ ಆದರು. ಇದು ಯರ್ಮೂಕ್ ಯುದ್ಧ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. (ರೌಶನ್ ಸಿತಾರೆ ಲೇಖಕರು: ಗುಲಾಮ್ ಬಾರಿ ಸೈಫ್ ಸಾಹಿಬ್, ಸಂಪುಟ–2, ಪುಟ–21–25) (ತಫ್‌ಸೀರೆ ಕಬೀರ್, ಸಂಪುಟ–10, ಪುಟ–181) (ಮುಜಮುಲ್‌ಬಲದಾನ್, ಸಂಪುಟ–5, ಪುಟ–497, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಮುಸ್ಲಿಹ್ ಮೌಊದ್(ರ) ಯುದ್ಧದ ಮುಕ್ತಾಯದ ಬಗ್ಗೆ ವಿಶೇಷವಾಗಿ ಸ್ವಲ್ಪ ವಿವರಿಸುತ್ತಾ ಹೇಳುತ್ತಾರೆ: "ಯುದ್ಧ ಮುಕ್ತಾಯಗೊಂಡಾಗ, ಮುಸ್ಲಿಮರು ವಿಶೇಷವಾಗಿ ಇಕ್ರಿಮ ಮತ್ತು ಅವರ ಸಂಗಡಿಗರನ್ನು ಹುಡುಕತೊಡಗಿದರು. ಅವರಲ್ಲಿ ಹನ್ನೆರಡು ಯುವಕರು ತೀವ್ರವಾಗಿ ಗಾಯಗೊಂಡಿರುವುದಾಗಿ ಕಂಡರು. ಅವರಲ್ಲಿ ಒಬ್ಬರು ಹಝ್ರತ್ ಇಕ್ರಿಮ ಆಗಿದ್ದರು. ಒಬ್ಬ ಮುಸ್ಲಿಮ್ ಸಿಪಾಯಿ ಅವರ ಬಳಿಗೆ ಬಂದಾಗ ಅವರನ್ನು ಅಪಾಯಕರವಾದ ಸ್ಥಿತಿಯನ್ನು ಕಂಡರು. ಅವರು ಹೇಳಿದರು: 'ಹೇ ಇಕ್ರಿಮ ನನ್ನ ಬಳಿ ನೀರಿನ ಭರಣಿಯಿದೆ. ನೀವು ಸ್ವಲ್ಪ ನೀರನ್ನು ಕುಡಿ.' ಇಕ್ರಿಮ ಮುಖ ತಿರುಗಿಸಿ ನೋಡಿದಾಗ, ಸಮೀಪದಲ್ಲೇ ಹಝ್ರತ್ ಅಬ್ಬಾಸ್‌ರ(ರ) ಮಗನಾದ ಫಝ್ಲ್ ಗಾಯಾಳುವಾದ ಸ್ಥಿತಿಯಲ್ಲಿ ಇದ್ದರು. ಹಝ್ರತ್ ಇಕ್ರಿಮ(ರ) ಹೇಳಿದರು: ನಾನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಠಿಣವಾದ ಶತ್ರುವಾಗಿದ್ದ ಕಾಲದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಹಾಯ ಮಾಡಿದ್ದ ವ್ಯಕ್ತಿಗಳ ಮಕ್ಕಳು ಬಾಯಾರಿಕೆಯಿಂದ ಮರಣಹೊಂದಿ, ನಾನು ನೀರನ್ನು ಕುಡಿದು ಜೀವಂತವಾಗಿರುವುದನ್ನು ನನ್ನ ಸ್ವಾಭಿಮಾನ ಸಹಿಸದು. ಆದ್ದರಿಂದ ಮೊದಲು ಫಝ್ಲ್ ಬಿನ್ ಅಬ್ಬಾಸ್‌ರಿಗೆ ನೀರನ್ನು ಕೊಡಿರಿ, ಅನಂತರ ನೀರು ಸ್ವಲ್ಪ ಬಾಕಿಯಾದರೆ, ನನ್ನ ಬಳಿಗೆ ತನ್ನಿರಿ.ಇತರಿಗಾಗಿ ತ್ಯಾಗ ಮಾಡುವ ಹೊಸದಾದೊಂದು ಆವೇಶ ಅವರಲ್ಲಿ ಇತ್ತು.

ಆ ಮುಸ್ಲಿಮ್ ಹಝ್ರತ್ ಫಝ್ಲ್‌ರ ಬಳಿಗೆ ಹೋದರು. ಅವರು ಮುಂದಿನ ಗಾಯಾಳು ಕಡೆಗೆ ಬೊಟ್ಟು ಮಾಡುತ್ತಾ ಹೇಳಿದರು: ಮೊದಲು ಅವರಿಗೆ ನೀರನ್ನು ಕುಡಿಸಿರಿ. ಅವರಿಗೆ ನನಗಿಂತ ನೀರಿನ ಆವಶ್ಯಕತೆಯಿದೆ. ಆ ಮುಸ್ಲಿಮ್ ಸಿಪಾಯಿ ಮುಂದಿನ ಗಾಯಾಳಿನ ಬಳಿಗೆ ಹೋದಾಗ, ಅವರು ಅವರ ಮುಂದಿನ ಗಾಯಾಳು ಕಡೆಗೆ ಬೊಟ್ಟು ಮಾಡಿ ತೋರಿಸಿ ಹೇಳಿದರು: ಅವರಿಗೆ ನನಗಿಂತ ನೀರಿನ ಆವಶ್ಯಕತೆಯಿದೆ ಹೆಚ್ಚಿದೆ. ಆದ್ದರಿಂದ ಮೊದಲು ಅವರಿಗೆ ನೀರನ್ನು ಕುಡಿಸಿರಿ. ಹೀಗೆ ಅವರು ಪ್ರತಿಯೊಬ್ಬ ಯುವಕರ ಬಳಿಗೆ ಹೋಗುವಾಗಲೂ, ಅವರು ಇತರರ ಬಳಿಗೆ ಅವರನ್ನು ಕಳುಹಿಸುತ್ತಿದ್ದರು. ಯಾರೂ ನೀರನ್ನು ಕುಡಿಯುತ್ತಿರಲಿಲ್ಲ. ಆ ಮುಸ್ಲಿಮ್ ಸಿಪಾಯಿ ಕೊನೆಯ ಗಾಯಾಳುವಿನ ಬಳಿಗೆ ಸಮೀಪಿಸಿದಾಗ, ಅವರು ಶಹೀದ್ ಆಗಿದ್ದರು. ಮರಳಿ ಎರಡನೇ ವ್ಯಕ್ತಿಯ ಬಳಿಗೆ ಬಂದಾಗ ಅವರೂ ನಿಧನರಾಗಿದ್ದರು. ಹೀಗೆ ಮರಳಿ ಇಕ್ರಿಮರ ಬಳಿಗೆ ಬಂದಾಗ, ಅವರು ಶಹೀದ್ ಆಗಿದ್ದರು. (ಹ'ರ್

ಅಹ್ಮದಿ ಔರತ್ ಅಹ್ಮದೀಯತ್ ಕಿ ಸದಾಖತ್ ಕೀ ನಿಶಾನ್ ಹೈ, ಅನ್ವಾರುಲ್ ಉಲೂಮ್, ಸಂಪುಟ–26, ಪುಟ–230–231)

ಸಿರಿಯಾದ ಜನರು ವಿವಿಧ ಧರ್ಮಾವಲಂಬಿಗಳಾಗಿದ್ದರು. ಜನರ ಭಾಷೆಗಳು ಸಹ ಬೇರೆ ಬೇರೆಯಾಗಿದ್ದುವು ಹಾಗೂ ವಿವಿಧ ವಂಶಗಳಿಗೆ ಸೇರಿದ್ದವರಾಗಿದ್ದರು. ಹಝ್ರತ್ ಅಬೂ ಉಬೈದ(ರ) ಅವರಲ್ಲಿ ನ್ಯಾಯಪಾಲನೆ ಮತ್ತು ಸಮತ್ವವನ್ನು ಸ್ಥಾಪಿಸಿದರು. ಜನರೆಡೆಯಲ್ಲಿ ಶಾಂತಿ ಮತ್ತು ಸಮಾಧಾನವನ್ನು ಉಂಟುಮಾಡಿದರು. ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯ ನೀಡಿದರು. ಇಸ್ಲಾಮಿನ ಸತ್ವವನ್ನು ಜಾರಿಗೊಳಿಸಿದರು. ಎಲ್ಲರೂ ಆದಮರ ಸಂತತಿಗಳಾದ ಕಾರಣ, ಪರಸ್ಪರ ಸಹೋದರರಾಗಿದ್ದೇವೆ. ಮನುಷ್ಯನೆಂಬ ನೆಲೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂಬ ಸಂಗತಿಯನ್ನು ಅರಿತು ಅದರ ಪ್ರಕಾರ ನಡೆದರು.

ಬಲಪ್ರಯೋಗದ ಮೂಲಕ ಮುಸ್ಲಿಮರನ್ನಾಗಿಸಿದ್ದರು ಎಂದು ಕೆಲವು ಸಾರಿ ಇಸ್ಲಾಮಿನ ವಿರುದ್ಧ ತಪ್ಪಾಗಿ ಆರೋಪ ಹೊರಿಸುತ್ತಾರೆ. ಆದರೆ ಅವರು ರೋಮನ್ನರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದ್ದರು. ಗೋತ್ರಗಳನ್ನು ಗುರುತಿಸಿದ್ದರು. ಶಾಂತಿ ಸಮಾಧಾನವನ್ನು ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಸ್ಥಾಪಿಸಿದ್ದರು. ಹಝ್ರತ್ ಅಬೂ ಉಬೈದರ(ರ) ಪ್ರಯತ್ನದಿಂದಲೇ ಸಿರಿಯಾದಲ್ಲಿ ನೆಲೆಸಿದ್ದ ಕ್ರೈಸ್ತರಾದ ಅರಬರು ಇಸ್ಲಾಮಿನ ಮಡಿಲಿಗೆ ಬಂದು ಸೇರಿದರು. ತಬ್ಲೀಗ್ ಮೂಲಕ ಜನರು ಮುಸ್ಲಿಮರಾಗಿದ್ದರು. ಬಲಪ್ರಯೋಗದಿಂದ ಬಂದಿರಲಿಲ್ಲ. ಮೊದಲು ಹೇಳಿದಂತೆ ಮುಸ್ಲಿಮರ ಮಾದರಿಯನ್ನು ಮತ್ತು ಅಬೂ ಉಬೈದರ ಸ್ವಭಾವ ವೈಶಿಷ್ಟ್ಯಗಳಿಂದ ಪ್ರಭಾವಿತರಾಗಿ ರೋಮನ್ನರು ಮತ್ತು ಕ್ರೈಸ್ತರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು.

ಯರ್ಮೂಕ್ ವಿಜಯಕ್ಕೆ ಕೆಲವು ದಿನಗಳಿಗೆ ಮುಂಚಿತವಾಗಿ ಹಝ್ರತ್ ಅಬೂಬಕ್ಕರ್ ನಿಧನರಾದರು ಮತ್ತು ಹಝ್ರತ್ ಉಮರ್ ಖಲೀಫರಾಗಿ ಚುನಾಯಿತರಾದರು. ಹಝ್ರತ್ ಉಮರ್(ರ) ಸಿರಿಯಾದ ಮೇಲ್ನೋಟ ಮತ್ತು ಸೈನ್ಯದ ನಾಯಕತ್ವವನ್ನು ಹಝ್ರತ್ ಅಬೂ ಉಬೈದರಿಗೆ(ರ) ಒಪ್ಪಿಸಿದರು. ಹಝ್ರತ್ ಅಬೂ ಉಬೈದರಿಗೆ ಹಝ್ರತ್ ಉಮರರ(ರ) ಈ ನೇಮಕದ ಪತ್ರ ಲಭಿಸುವಾಗ, ಯುದ್ಧವು ಉತ್ತುಂಗಕ್ಕೆ ತಲುಪಿದ ಸಮಯವಾಗಿತ್ತು. ಬಹಳ ತೀವ್ರವಾದ ಯುದ್ಧ ನಡೆಯುತ್ತಿತ್ತು. ಆದ್ದರಿಂದ ಹಝ್ರತ್ ಉಮರರ(ರ) ತೀರ್ಮಾನದ ಬಗ್ಗೆ ಅಬೂ ಉಬೈದ(ರ) ಯಾರಿಗೂ ತಿಳಿಸಲಿಲ್ಲ. ಆಗ ಕಮಾಂಡರ್ ಆಗಿದ್ದ ಹಝ್ರತ್ ಖಾಲಿದ್‌ರಿಗೆ(ರ) ಇದರ ಅರಿವಾದಾಗ, ಇದನ್ನು ರಹಸ್ಯವಾಗಿ ಏಕೆ ಇರಿಸಿದ್ದರು ಎಂದು ಅಬೂ ಉಬೈದರೊಡನೆ ಕೇಳಿದರು. ಹಝ್ರತ್ ಅಬೂ ಉಬೈದ(ರ) ಹೇಳಿದರು: ಏಕೆಂದರೆ, ನಾವು ಶತ್ರುಗಳೊಡನೆ ಹೋರಾಡುತ್ತಿದ್ದೆವು, ನಾನು ಯಾವುದೇ ರೀತಿಯಲ್ಲಿ ನಿಮ್ಮ ಮನಸ್ಸನ್ನು ನೋಯಿಸಲು ಇಷ್ಟಪಟ್ಟಿರಲಿಲ್ಲ.

ಮುಸ್ಲಿಮರ ವಿಜಯದ ನಂತರ ಹಝ್ರತ್ ಖಾಲಿದ್‌ರ(ರ) ಸೇನೆ ಇರಾಕಿಗೆ ಮರಳಿಹೋಗುವಾಗ ಹಝ್ರತ್ ಅಬೂ ಉಬೈದ(ರ) ಹಝ್ರತ್ ಖಾಲಿದ್ ಬಿನ್ ವಲೀದ್‌ರನ್ನು ಸ್ವಲ್ಪ ಸಮಯಕ್ಕೆ ಅಲ್ಲೇ ನಿಲ್ಲಿಸಿದ್ದರು. ಹಝ್ರತ್ ಖಾಲಿದ್ ಬಿನ್ ವಲೀದ್ ರವಾನೆ ಆಗುವುದಕ್ಕೆ ಮುಂಚಿತವಾಗಿ ಜನರನ್ನು ಸಂಬೋಧಿಸಿ ಹೇಳಿದರು: ಈ ಸಮುದಾಯದ ಅಮೀನ್, ಅಬೂ ಉಬೈದ(ರ) ನಿಮ್ಮ ಅಧಿಪತಿಯಾಗಿರುವರು ಎಂಬ ಕಾರಣದಿಂದ ನೀವು ಸಂತೋಷವಾಗಿರಬೇಕು. ಆಗ ಹಝ್ರತ್ ಅಬೂ ಉಬೈದ(ರ) ಹೇಳಿದರು: ಖಾಲಿದ್ ಬಿನ್ ವಲೀದ್ ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವಾಗಿದ್ದಾರೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದನ್ನು ನಾನು ಕೇಳಿದ್ದೇನೆ. ಒಟ್ಟಿನಲ್ಲಿ ಪ್ರೀತಿ ಮತ್ತು ಗೌರವದ ವಾತಾವರಣದಲ್ಲಿ ಇಬ್ಬರು ನಾಯಕರು ಪರಸ್ಪರ ಬೀಳ್ಕೊಟ್ಟರು. (ರೌಶನ್ ಸಿತಾರೆ, ಲೇಖಕ: ಗುಲಾಮ್ ಬಾರಿ ಸೈಫ್ ಸಾಹಿಬ್, ಸಂಪುಟ–2, ಪುಟ–26–27)

ಸತ್ಯವಿಶ್ವಾಸಿಯ ದೇವಭಕ್ತಿ ಇದೇ ಆಗಿದೆ. ಯಾವುದೇ ಹೆಸರು, ಪ್ರಸಿದ್ಧಿಯ ಬಯಕೆಯಿಲ್ಲ. ಯಾವುದೇ ಸ್ಥಾನ ಮತ್ತು ಹುದ್ದೆಯ ಲಾಲಸೆಯಿಲ್ಲ. ಅಲ್ಲಾಹನ ಸಂಪ್ರೀತಿ ಗಳಿಸಬೇಕು ಮತ್ತು ಅಲ್ಲಾಹನ ಪ್ರಭುತ್ವ ಲೋಕದಲ್ಲಿ ಸ್ಥಾಪಿಸಬೇಕು ಎಂಬುದು ಮಾತ್ರವಾಗಿತ್ತು ಅವರ ಗುರಿ. ಇವರು ನಮಗೆ ಉತ್ತಮವಾದ ಮಾದರಿಯಾಗಿರುವರು. ಪ್ರತಿಯೊಬ್ಬ ಹುದ್ದೇದಾರರು, ಮಾತ್ರವಲ್ಲ, ಪ್ರತಿಯೊಬ್ಬ ಅಹ್ಮದಿ ಈ ಸಂಗತಿಗಳನ್ನು ತಮ್ಮ ಮುಂದಿರಿಸಬೇಕು.

ಬೈತುಲ್ ಮುಖದ್ದಸ್ಸಿನ ಘಟನೆಯ ಪ್ರಸ್ತಾಪ ಚರಿತ್ರೆಯಲ್ಲಿ ಬರುತ್ತದೆ. ಅದರ ಸಂಬಂಧ ಸಹ ಹಝ್ರತ್ ಅಬೂ ಉಬೈದರೊಡನೆ ಇದೆ. ಹಝ್ರತ್ ಅಮ್ರ್ ಬಿನ್ ಆಸ್‌ರ(ರ) ನೇತೃತ್ವದಲ್ಲಿ ಇಸ್ಲಾಮಿನ ಸೈನ್ಯ ಪೆಲಸ್ತೀನ್ ಕಡೆಗೆ ಹೊರಟಿತು. ಅವರು ಪೆಲಸ್ತೀನಿನ ಪಟ್ಟಣಗಳ ಮೇಲೆ ವಿಜಯ ಸಾಧಿಸಿ ಬೈತುಲ್ ಮುಖದ್ದಸ್ಸನ್ನು ಸುತ್ತುವರೆದಾಗ, ಹಝ್ರತ್ ಅಬೂ ಉಬೈದರ(ರ) ಸೈನ್ಯ ಸಹ ಅವರೊಂದಿಗೆ ಬಂದುಸೇರಿತು. ಕ್ರೈಸ್ತರು ಮುಸ್ಲಿಮರ ಮುತ್ತಿಗೆಯಿಂದ ಸುಸ್ತಾಗಿ ಸಂಧಾನಕ್ಕೆ ವಿನಂತಿಸಿದರು. ಆದರೆ, ಹಝ್ರತ್ ಉಮರ್(ರ) ಸ್ವತಃ ಬಂದು ಮೈತ್ರಿಯ ಒಪ್ಪಂದ ಮಾಡಬೇಕೆಂಬ ಶರತ್ತು ಹಾಕಿದರು. ಕ್ರೈಸ್ತರ ಈ ನಿವೇದನೆಯನ್ನು ಹಝ್ರತ್ ಅಬೂ ಉಬೈದ(ರ) ಹಝ್ರತ್ ಉಮರರಿಗೆ(ರ) ತಲುಪಿಸಿದರು. ಹಝ್ರತ್ ಅಲಿರನ್ನು(ರ) ತನ್ನ ಹಿಂದೆ ಮದೀನದಲ್ಲಿ ಅಮೀರರನ್ನಾಗಿ ಮಾಡಿ, ಹಝ್ರತ್ ಉಮರ್(ರ) ರಬೀಉಲ್ ಅವ್ವಲ್ 16ರಲ್ಲಿ ಮದೀನದಿಂದ ಹೊರಟು ಡಮಸ್ಕಸಿನ ಹೊರವಲಯದ ಒಂದು ಗ್ರಾಮವಾದ ಜಾಬಿಯ ಎಂಬಲ್ಲಿಗೆ ತಲುಪಿದರು. ಅಲ್ಲಿ ಸೇನಾನಾಯಕರು ಅವರನ್ನು ಸ್ವಾಗತಿಸಿದರು. 'ನನ್ನ ಸಹೋದರ ಎಲ್ಲಿ?' ಎಂದು ಹಝ್ರತ್ ಉಮರ್ ಕೇಳಿದರು. 'ಅಮೀರುಲ್ ಮೂಮಿನೀನ್, ನೀವು ಯಾರ ಬಗ್ಗೆ ಕೇಳುತ್ತಿದ್ದೀರಿ' ಎಂದು ಜನರು ಕೇಳಿದರು. ಹಝ್ರತ್ ಅಬೂ ಉಬೈದ(ರ) ಎಂದು ಅವರು ಹೇಳಿದರು. ಅವರು ಈಗಲೇ ಬರುವರು ಎಂದು ಹೇಳಲಾಯಿತು. ಅಷ್ಟರಲ್ಲೇ ಹಝ್ರತ್ ಅಬೂ ಉಬೈದ(ರ) ಒಂಟೆಯ ಮೇಲೆ ಸವಾರರಾಗಿ ಬಂದರು. ಸಲಾಂ ಹೇಳುತ್ತಾ ಯೋಗಕ್ಷೇಮದ ಬಗ್ಗೆ ವಿಚಾರಿಸಿದರು. ಉಳಿದೆಲ್ಲರನ್ನು ಅಲ್ಲಿಂದ ಹೊರಟುಹೋಗಲು ಹೇಳಿ ಹಝ್ರತ್ ಉಮರ್(ರ) ಹಝ್ರತ್ ಅಬೂ ಉಬೈದರೊಡನೆ(ರ) ಅವರ ವಸತಿ ಗೃಹಕ್ಕೆ ಹೋದರು. ಅಲ್ಲಿಗೆ ಹೋದಾಗ, ಅಲ್ಲಿ ಕೇವಲ ಒಂದು ತಲವಾರು, ಒಂದು ಚಾಪೆ ಮತ್ತು ಒಂದು ಬಟ್ಟಲಿನ ಹೊರತು ಬೇರೆ ಏನೂ ಇದ್ದಿರಲಿಲ್ಲ. 'ಹೇ ಅಬೂ ಉಬೈದ ಸ್ವಲ್ಪ ಸಾಮಾನುಗಳನ್ನು ತಂದು ಇಡಬಹುದಾಗಿತ್ತಲ್ಲವೇ? ಮನೆಯಲ್ಲಿ ಸ್ವಲ್ಪ ಸಾಮಾನುಗಳನ್ನು ಇರಿಸಬೇಕು ಎಂದು ಹಝ್ರತ್ ಉಮರ್(ರ) ಹೇಳಿದರು. ಹಝ್ರತ್ ಅಬೂ ಉಬೈದ(ರ) ಉತ್ತರಿಸಿದರು: ಅಮೀರುಲ್ ಮೂಮಿನೀನ್, ಅವೆಲ್ಲ ನಮ್ಮನ್ನು ಆರಾಮದೆಡೆಗೆ ಕೊಂಡೊಯ್ಯಬಹುದು. ಸಾಮಾನುಗಳನ್ನೆಲ್ಲ ತಂದು ಇರಿಸಬಹುದು. ಆದರೆ, ಆರಾಮ ಮತ್ತು ಸವಲತ್ತುಗಳನ್ನು ನೋಡಿ ನಾನು ಅದರಲ್ಲೇ ಮಗ್ನನಾಗುವೆನು. ಆದ್ದರಿಂದ ಅಂತಹ ವಸ್ತುಗಳನ್ನು ನನ್ನ ಬಳಿ ಇರಿಸಲು ನಾನು ಇಷ್ಟಪಡುವುದಿಲ್ಲ.

ಈ ಸಂದರ್ಭದಲ್ಲಿ ಒಂದು ರೋಮಾಂಚಕ ಘಟನೆ ಸಹ ನಡೆಯಿತು. ಅದರ ಬಗ್ಗೆ ನಾನು ಮೊದಲು ಪ್ರಸ್ತಾಪಿಸಿದ್ದೇನೆ. ಅದಾಗಿತ್ತು ಹಝ್ರತ್ ಬಿಲಾಲ್‌ರ(ರ) ಅಧ್ಹಾನ್. ಹಝ್ರತ್ ಬಿಲಾಲ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಅಧ್ಹಾನ್ ನೀಡುತ್ತಿರಲಿಲ್ಲ. ಹೀಗಿರುವಾಗ, ಒಂದು ಸಲ ನಮಾಝಿನ ಸಮಯ ಬಂದಾಗ, ಹಝ್ರತ್ ಬಿಲಾಲ್‌ರೊಡನೆ ಅಧ್ಹಾನ್ ನೀಡಲು ಆಜ್ಞಾಪಿಸಲು ಹಝ್ರತ್ ಉಮರ್‌ರೊಡನೆ ಜನರು ಒತ್ತಾಯಿಸಿದರು. ಹಝ್ರತ್ ಉಮರರ(ರ) ಆದೇಶದಂತೆ ಹಝ್ರತ್ ಬಿಲಾಲ್(ರ) ಅಧ್ಹಾನ್ ಕೊಟ್ಟಾಗ, ಎಲ್ಲರ ಕಣ್ಣುಗಳಲ್ಲಿ ಕಣ್ಣೀರು ಬಂತು. ಜನರಲ್ಲಿ ಅತ್ಯಂತ ಅಧಿಕ ಹಝ್ರತ್ ಉಮರ್(ರ) ಅತ್ತುಬಿಟ್ಟರು. ಏಕೆಂದರೆ, ಆ ಅಧ್ಹಾನ್ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲವನ್ನು ನೆನಪಿಸುತ್ತಿತ್ತು. (ರೌಶನ್ ಸಿತಾರೆ, ಲೇಖಕರು: ಗುಲಾಮ್ ಬಾರಿ ಸೈಫ್ ಸಾಹಿಬ್, ಸಂಪುಟ–2, ಪುಟ–28–30)

ರೋಮನ್ನರ ಕೊನೆಯ ಪ್ರಯತ್ನದ ಬಗ್ಗೆ ಚರಿತ್ರೆಯಲ್ಲಿ ಬರೆಯಲಾಗಿದೆ. ಹಿಜರೀ 17ರಲ್ಲಿ ರೋಮನ್ನರು ಮುಸ್ಲಿಮರಿಂದ ಸಿರಿಯಾವನ್ನು ಮರಳಿ ಪಡೆಯಲು ಒಂದು ಕೊನೆಯ ಪ್ರಯತ್ನವನ್ನು ಮಾಡಿದ್ದರು. ಸಿರಿಯಾದ ಉತ್ತರ ಪ್ರದೇಶದ, ಅಲ್‌ಜಝೀರದ, ಇರಾಕಿನ ಉತ್ತರ ಪ್ರದೇಶದ, ಅರ್ಮನಿಯದ ಕ್ರೈಸ್ತರು ಮತ್ತು ಇರಾನಿಯರು ಮುಸ್ಲಿಮರ ಎದುರಾಗಿ ಸಹಾಯ ಮಾಡಬೇಕೆಂದು ಹರ್ಕ್ಯೂಲಸ್ ಅರಸನೊಂದಿಗೆ ಅಪೀಲ್ ಮಾಡಿದರು. ಅವರು ತಮ್ಮ ಕಡೆಯಿಂದ ಮೂವತ್ತು ಸಾವಿರ ಸೈನಿಕರನ್ನು ಒದಗಿಸಿಕೊಟ್ಟರು. ಅಲ್‌ಜಝೀರದ ಹೆಚ್ಚಿನ ಭಾಗಗಳ ಮೇಲೆ ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ವಿಜಯ ಸಾಧಿಸಿದ್ದರು. ಆದರೆ, ಅಲ್ಲಿಯ ಮರಳುಗಾಡಿನ ನಿವಾಸಿಗಳ ಮೇಲೆ ಅವರ ನಿಯಂತ್ರಣವಿದ್ದಿರಲಿಲ್ಲ. ರೋಮಿನ ರಾಜನ ನೌಕಾ ಬಲ ಆಗಲೂ ಇದ್ದಿತ್ತು. ಅವರು ಈ ಸಂದರ್ಭದಿಂದ ಪ್ರಯೋಜನ ಪಡೆದು ಶಕ್ತವಾದ ನೌಕಾ ದಳದ ಮೂಲಕ ಹಲ್ಲೆ ನಡೆಸಿದರು. ಅದೇ ವೇಳೆ ಮರಳುಗಾಡಿನ ಗೋತ್ರಗಳು ಒಂದು ದೊಡ್ಡದಾದೊಂದು ಸೈನ್ಯದ ಮೂಲಕ ಹಿಮ್ಸನ್ನು ಸುತ್ತುವರೆದರು ಮತ್ತು ಉತ್ತರ ಸಿರಿಯಾದ ಕೆಲವು ಗೋತ್ರಗಳು ದಂಗೆ ಎದ್ದರು. ಹಝ್ರತ್ ಅಬೂ ಉಬೈದ(ರ) ಸಹಾಯಕ್ಕಾಗಿ ಹೆಚ್ಚಿನ ಸೇನೆಯನ್ನು ಕಳುಹಿಸಿ ಕೊಡಲು ಪತ್ರ ಬರೆದರು. ಹಝ್ರತ್ ಉಮರ್(ರ) ಹಝ್ರತ್ ಸಅದ್ ಬಿನ್ ವಖಾಸ್‌ರೊಡನೆ ಬೇಗನೇ ಕೂಫದಿಂದ ಸಹಾಯಕ್ಕಾಗಿ ಸೈನ್ಯವನ್ನು ಕಳುಹಿಸಲು ಆದೇಶಿಸಿದರು. ಹೀಗೆ ಹಝ್ರತ್ ಸಅದ್(ರ) ಖಾಖ ಬಿನ್ ಅಮ್ರ್‌ರ ನೇತೃತ್ವದಲ್ಲಿ ಒಂದು ಸೈನ್ಯವನ್ನು ಕೂಫದಿಂದ ರವಾನೆ ಮಾಡಿದರು. ಹೀಗಿದ್ದರೂ ಮುಸ್ಲಿಮರ ಸೈನ್ಯದ ಒಟ್ಟು ಸಂಖ್ಯೆ ಮತ್ತು ರೋಮನ್ನರ ಸೈನಿಕ ಸಂಖ್ಯೆಯಲ್ಲಿ ತುಂಬಾ ಅಂತರವಿತ್ತು. ಹಝ್ರತ್ ಅಬೂ ಉಬೈದ(ರ) ಸೈನ್ಯದ ಸಿಪಾಯಿರನ್ನು ಸಂಬೋಧಿಸಿ ಆವೇಶಭರಿತವಾದ ಒಂದು ಭಾಷಣವನ್ನು ಕೊಟ್ಟರು: ಇಂದು ನಾವು ಸ್ಥಿರಚಿತ್ತರಾಗಿ ನಿಂತು ಜೀವಂತವಾಗಿ ಉಳಿದರೆ, ದೇಶ ಮತ್ತು ಸಂಪತ್ತು ನಮಗೆ ಲಭಿಸುವುದು, ಕೊಲ್ಲಲ್ಪಟ್ಟರೆ, ಶಹಾದತಿನ ಅನುಗ್ರಹ ಲಭಿಸುವುದು. ಮುಶ್ರಿಕ್ ಅಲ್ಲದ ಸ್ಥಿತಿಯಲ್ಲಿ ಸಾಯುವ ವ್ಯಕ್ತಿ ಸ್ವರ್ಗಕ್ಕೆ ಪ್ರವೇಶಿಸುವನು ಎಂದು ಹಝ್ರತ್ ಪೈಗಂಬರರು(ಸ)

ಹೇಳಿದ್ದನ್ನು ನಾನು ಸಾಕ್ಷ್ಯವಹಿಸುತ್ತೇನೆ. ಎರಡು ಪಕ್ಷಗಳ ನಡುವೆ ಯುದ್ಧ ನಡೆಯಿತು. ಮುಸ್ಲಿಮರ ವಿರುದ್ಧ ಹೋರಾಟ ಮಾಡಿದ ಸ್ವಲ್ಪ ಸಮಯದಲ್ಲೇ ರೋಮನ್ನರು ಧೈರ್ಯಗುಂದಿದರು.ಸಿರಿಯಾದ ಗಡಿಪ್ರದೇಶವಾದ ಮರ್ಜುದ್ದೀಬಾಜಿನ ಒಂದು ಗುಡ್ಡಗಾಡು ಪ್ರದೇಶದ ಪಟ್ಟಣವಾದ ಮಸೀಸದ ತನಕ ಅವರು ಓಡುತ್ತಾ ಹೋದರು. ಅದು ಯುದ್ಧ ಮೈದಾನದಿಂದ ಹತ್ತು ಮೈಲು ದೂರದಲ್ಲಿತ್ತು. ಅದರ ನಂತರ ರೋಮಿನ ಅರಸನಿಗೆ ಸಿರಿಯಾದ ಕಡೆಗೆ ಯುದ್ಧ ಮಾಡಲು ಬರಲು ಧೈರ್ಯವಿರಲಿಲ್ಲ. (ಅಶ್ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ–816–817, ಅಲ್‌ಬದರ್ ಪಬ್ಲಿಕೇಶನ್ಸ್ ಉರ್ದು ಬಜಾರ್ ಲಾಹೋರ್ 2000) (ಸೈರುಸ್ಸಹಾಬ, ಶಾಹ್ ಮುಈನುದ್ದೀನ್ ನದವಿ, ಸಂಪುಟ–2, ಪುಟ–131, ದಆರುಲ್ ಇಶಾಅತ್ ಉರ್ದು ಬಜಾರ್ ಕರಾಚಿ, ಪಾಕಿಸ್ತಾನ್) (ಮುಜಮುಲ್‌ಬಲದಾನ್, ಸಂಪುಟ–5, ಪುಟ–118, ದಾರುಲ್ ಇಲ್ಮಿಯ ಬೈರೂತ್)

ತಾಊನ್ ಅಮ್‌ವಾಸ್: ಬೈತುಲ್ ಮುಖದ್ದಸಿನ ಮಾರ್ಗದಲ್ಲಿ ಆರು ಮೈಲುಗಳ ದೂರದಲ್ಲಿ ಒಂದು ಕಣಿವೆಯಿದೆ. ಅಲ್ಲಿಂದ ತಾಊನ್ ರೋಗ, ಎಂದರೆ ಪ್ಲೇಗ್ ರೋಗದ ಆರಂಭವಾದ ಕಾರಣದಿಂದ ಅದನ್ನು ತಾಊನ್ ಅಮ್‌ವಾಸ್ ಎಂದು ಹೆಸರಿಸಲಾಗಿದೆ ಎಂದು ಚರಿತ್ರೆಯ ಪುಸ್ತಕದಲ್ಲಿ ಬರೆಯಲಾಗಿದೆ. ಪ್ಲೇಗ್ ರೋಗದಿಂದ ಸಿರಿಯಾದಲ್ಲಿ ಅಸಂಖ್ಯಾತವಾಗಿ ಜನರು ಸತ್ತುಹೋದರು. 25 ಸಾವಿರದಷ್ಟು ಮರಣ ಉಂಟಾಗಿತ್ತು ಎಂದು ಕೆಲವರು ಹೇಳಿದ್ದಾರೆ. ಅದರ ವಿವರಣೆ ಬುಖಾರಿಯ ಒಂದು ವರದಿಯಲ್ಲಿ ಬರುತ್ತದೆ. ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ವರದಿ ಮಾಡುತ್ತಾರೆ: ಮದೀನದಿಂದ ಹದಿಮೂರು ದಿನಗಳ ಯಾತ್ರೆಯ ದೂರದಲ್ಲಿ, ಸುಮಾರು ಸಾವಿರ ಮೈಲುಗಳ ದೂರದಲ್ಲಿ ತಬೂಕ್ ಕಣಿವೆಯಲ್ಲಿ, ಸಿರಿಯಾ ಮತ್ತು ಹಿಜಾಝಿನ ಗಡಿ ಪ್ರದೇಶದಲ್ಲಿ ಸರಗ್ ಎಂಬ ಹೆಸರಿನ ಒಂದು ಗ್ರಾಮವಿದೆ. ಅಲ್ಲಿಗೆ ಹಝ್ರತ್ ಉಮರ್(ರ) ತಲುಪಿದರು. ಆಗ ಅವರು ಸೇನಾಧಿಪತಿಗಳನ್ನು, ಹಝ್ರತ್ ಅಬೂ ಉಬೈದರನ್ನು ಮತ್ತು ಅವರ ಸಂಗಡಿಗರನ್ನು ಭೇಟಿಯಾದರು. ಸಿರಿಯಾದಲ್ಲಿ ಪ್ಲೇಗ್ ರೋಗ ಹರಡಿದೆ ಎಂದು ಅವರು ಹಝ್ರತ್ ಉಮರ್‌ರೊಡನೆ(ರ) ಹೇಳಿದರು. ಹಝ್ರತ್ ಉಮರ್(ರ) ಸಮಾಲೋಚನೆಗಾಗಿ ಮುಹಾಜಿರುಗಳಲ್ಲಿ ಮೊದಲಿಗರನ್ನು ಕರೆದರು. ಹಝ್ರತ್ ಉಮರ್(ರ) ಅವರೊಡನೆ ಸಮಾಲೋಚನೆ ನಡೆಸಿದರು. ಆದರೆ, ಅವರಲ್ಲಿ ಭಿನ್ನಾಭಿಪ್ರಾಯಗಳಿದ್ದುವು. ಇಲ್ಲಿಂದ ಹಿಂದೆ ಸರಿಯಬಾರದು ಎಂದು ಕೆಲವರು ಹೇಳಿದರು. ಆದರೆ ಕೆಲವರು ಹೇಳಿದರು: ಸೈನ್ಯದಲ್ಲಿ ಹಝ್ರತ್ ಪೈಗಂಬರರ(ಸ) ಸಹಾಬಿಯರು ಇರುವರು ಅವರನ್ನು ಮಾರಕ ರೋಗಕ್ಕೆ ತುತ್ತುಮಾಡುವುದು ಸರಿಯಲ್ಲ. ಹಝ್ರತ್ ಉಮರ್(ರ) ಮುಹಾಜಿರರನ್ನು ವಾಪಾಸ್ಸು ಕಳುಹಿಸಿ ಅನ್ಸಾರರನ್ನು ಕರೆದರು. ಅವರೊಡನೆ ಸಮಾಲೋಚನೆ ನಡೆಸಿದರು. ಅನ್ಸಾರರ ಅಭಿಪ್ರಾಯಗಳಲ್ಲೂ ಮುಹಾಜಿರರ ಹಾಗೆ ಭಿನ್ನತೆ ಉಂಟಾಯಿತ್ತು. ಹಝ್ರತ್ ಉಮರ್(ರ) ಅನ್ಸಾರರನ್ನು ಮರಳಿ ಕಳುಹಿಸಿದ್ದರು. ಮಕ್ಕಾ ವಿಜಯದ ಸಮಯದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿ ಮದೀನಕ್ಕೆ ಬಂದ ಖುರೈಶಿನ ವೃದ್ಧ ಜನರನ್ನು ಕರೆದು ಸೇರಿಸಲು ಹಝ್ರತ್ ಉಮರ್(ರ) ಹೇಳಿದರು. ಅವರನ್ನು ಕರೆಯಲಾಯಿತು. ಜನರನ್ನು ಕರೆದುಕೊಂಡು ಮರಳಿಹೋಗಲು ಮತ್ತು ಸಾಂಕ್ರಾಮಿಕ ರೋಗವಿರುವ ಪ್ರದೇಶಕ್ಕೆ ಜನರನ್ನು ಕರೆದುಕೊಂಡು ಹೋಗದಿರಲು ಅವರು ಒಮ್ಮತಾಭಿಪ್ರಾಯದೊಂದಿಗೆ ಸಲಹೆಕೊಟ್ಟರು. ಹಝ್ರತ್ ಉಮರ್(ರ) ಮರಳಿ ಹೋಗುವಂತೆ ತನ್ನೊಂದಿಗೆ ಬಂದ ಜನರಲ್ಲಿ ಘೋಷಿಸಿದರು. ಅಲ್ಲಾಹನ ವಿಧಿಯಿಂದ ರಕ್ಷೆಹೊಂದಲು ಸಾಧ್ಯವೇ ಎಂದು ಆ ಸಂದರ್ಭದಲ್ಲಿ ಹಝ್ರತ್ ಅಬೂ ಉಬೈದ(ರ) ಕೇಳಿದರು. ಹಝ್ರತ್ ಉಮರ್(ರ) ಅಬೂ ಉಬೈದರೊಡನೆ ಹೇಳಿದರು: ಹೇ ಅಬೂ ಉಬೈದ, ಈ ಪ್ರಶ್ನೆಯನ್ನು ನೀನಲ್ಲದೆ, ಬೇರೆ ಯಾರಾದರೂ ಕೇಳಿದರೆ ಒಳ್ಳೆಯದಿತ್ತು. ಹೌದು ನಾವು ಅಲ್ಲಾಹನ ವಿಧಿಯಿಂದ ಓಡುಹೋಗುತ್ತಾ ಅಲ್ಲಾಹನ ವಿಧಿಯ ಕಡೆಗೆ ಹೋಗುತ್ತಿದ್ದೇವೆ. ನಿಮ್ಮ ಬಳಿ ಒಂದು ಒಂಟೆಯಿದ್ದು, ಅದನ್ನು ಎರಡು ಬದಿಗಳಿರುವ ಕಣಿವೆಯ ಬಳಿಗೆ ಕೊಂಡುಹೋದರೆ, ಎಂದರೆ ಒಂದು ಬದಿಯಲ್ಲಿ ಹಚ್ಚ ಹಸಿರಾದ ಹುಲ್ಲುಗಳಿವೆ, ಮತ್ತೊಂದು ಬದಿ ಒಣಗಿ ಹೋಗಿದೆ ಎಂದಾದರೆ, ನೀವು ಅದನ್ನು ಒಣ ಪ್ರದೇಶದಲ್ಲಿ ಮೇಯಲು ಬಿಡುವುದಾದರೆ, ಅದೂ ಅಲ್ಲಾಹನ ವಿಧಿಯೇ ಅಲ್ಲವೇ, ಅದನ್ನು ಹಸಿರಾದ ಪ್ರದೇಶದಲ್ಲಿ ಮೇಯಲು ಬಿಡುವುದಾದರೆ, ಅದೂ ಅಲ್ಲಾಹನ ವಿಧಿಯೇ ಅಲ್ಲವೇ? ಅಷ್ಟರಲ್ಲಿ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಬಂದರು. ಹಝ್ರತ್ ಪೈಗಂಬರರು(ಸ) ಹೇಳಿದ್ದಾಗಿ ಅವರು ಹೇಳಿದರು: ಒಂದು ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಹರಡಿದೆ ಎಂಬ ಮಾಹಿತಿ ಸಿಕ್ಕಿದರೆ, ಅಲ್ಲಿಗೆ ಹೋಗಬೇಡಿರಿ, ನೀವಿರುವ ಸ್ಥಳದಲ್ಲಿ ಸಾಂಕ್ರಾಮಿಕ ರೋಗ ಹರಡಿದರೆ, ಅಲ್ಲಿಂದ ರಕ್ಷೆಹೊಂದಲು ಹೊರಗೆ ಹೋಗಲೂ ಬಾರದು. ಇದನ್ನು ಕೇಳಿದ ನಂತರ ಹಝ್ರತ್ ಉಮರ್(ರ) ಸೈನ್ಯದೊಂದಿಗೆ ಸಾಂಕ್ರಾಮಿಕ ರೋಗವಿರುವ ಪ್ರದೇಶಕ್ಕೆ ಹೋಗದೆ ಮರಳಿಹೋದರು. (ಸಹೀಹ್ ಬುಖಾರಿ, ಕಿತಾಬುತ್ತಿಬ್, ಹದೀಸ್–5729) (ಮುಜಮುಲ್‌ಬಲದಾನ್, ಸಂಪುಟ–4, ಪುಟ–177–178, ದಾರುಲ್‌ಕುತುಬ್ ಇಲ್ಮಿಯ ಬೈರೂತ್) (ಮುಜಮುಲ್‌ಬಲದಾನ್, ಸಂಪುಟ–3, ಪುಟ–239, ದಾರುಲ್‌ಕುತುಬ್ ಇಲ್ಮಿಯ ಬೈರೂತ್)

ತಾಊನ್ ಅಮ್‌ವಾಸ್ ಎಂಬ ಸ್ಥಳದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಉಮರ್(ರ) ಸಿರಿಯಾಗೆ ಹೋದರು. ತಾಊನ್ ಅಮ್‌ವಾಸ್‌ನಲ್ಲಿ ಪ್ಲೇಗ್ ಹರಡಿತು. ಹಝ್ರತ್ ಅಬೂ ಉಬೈದ ಮತ್ತು ಇಸ್ಲಾಮಿನ ಸೈನ್ಯ ಹಝ್ರತ್ ಉಮರ್‌ರನ್ನು(ರ) ಸ್ವಾಗತಿಸಿದರು. ಈಗ ಈ ಪ್ರದೇಶಗಳಲ್ಲಿ ಪ್ಲೇಗ್ ರೋಗ ಹರಡಿರುವ ಕಾರಣ ವಾಪಾಸ್ಸು ಹೋಗುವಂತೆ ಸಹಾಬಿಯರು ಸಲಹೆ ನೀಡಿದರು. ಹಝ್ರತ್ ಉಮರ್(ರ) ಅವರ ಸಲಹೆಯನ್ನು ಸ್ವೀಕರಿಸುತ್ತಾ ವಾಪಾಸ್ಸು ಹೋಗಲು ತೀರ್ಮಾನಿಸಿದರು. ಹಝ್ರತ್ ಅಬೂ ಉಬೈದ(ರ) ಬಾಹ್ಯವಾದ ಸಂಗತಿಗಳಿಗೆ ಒತ್ತುಕೊಡುವ ವ್ಯಕ್ತಿಯಾಗಿದ್ದರು. ಅವರಿಗೆ ಈ ತೀರ್ಮಾನದ ಬಗ್ಗೆ ಅರಿವಾದಾಗ ಅವರು ಹೇಳಿದರು: **'ಅತಫಿರ್ರು ಮಿನಲ್‌ಖದ್ರ್ಅಲ್ಲಾಹ್'** ನೀವು ಅಲ್ಲಾಹನ ವಿಧಿಯಿಂದ ಓಡಿಹೋಗುತ್ತಿದ್ದೀರಾ? ಹಝ್ರತ್ ಉಮರ್(ರ) ಹೇಳಿದರು: **ಅಫಿರ್ರು ಮಿನಲ್ ಖದ್ರಿಲ್ಲಾಹಿ ಇಲಾ ಖದ್ರಿಲ್ಲಾಹ್,** ಎಂದರೆ, ನಾವು ಅಲ್ಲಾಹನ ಒಂದು ವಿಧಿಯಿಂದ ಮತ್ತೊಂದು ವಿಧಿಯ ಕಡೆಗೆ ಓಡಿಹೋಗುತ್ತಿದ್ದೇವೆ. ಎಂದರೆ, ಅಲ್ಲಾಹನ ಒಂದು ವಿಶೇಷವಾದ ತೀರ್ಮಾನಗಳಿರುತ್ತವೆ. ಮತ್ತೊಂದು ಸಾಮಾನ್ಯವಾದ ತೀರ್ಮಾನಗಳಿರುತ್ತವೆ. ಈ ಎರಡು ರೀತಿಯ ತೀರ್ಮಾನಗಳು ಅಲ್ಲಾಹನದ್ದೇ ಆಗಿವೆ. ಬೇರೆ ಯಾರದ್ದೂ ಅಲ್ಲ. ಆದ್ದರಿಂದ ನಾನು ಅವನ ತೀರ್ಮಾನದಿಂದ ಓಡಿಹೋಗುತ್ತಾ ಇಲ್ಲ, ಬದಲಿಗೆ ಅವನ ಒಂದು ತೀರ್ಮಾನದಿಂದ ಮತ್ತೊಂದು ತೀರ್ಮಾನದ ಕಡೆಗೆ ಹೋಗುತ್ತಿದ್ದೇನೆ.

ಚರಿತ್ರೆಗಳಲ್ಲಿ ಬರೆಯಲಾಗಿದೆ: ಹಝ್ರತ್ ಉಮರ್‌ರಿಗೆ(ರ) ಪ್ಲೇಗ್ ರೋಗದ ಸುದ್ದಿ ತಲುಪಿದಾಗ ಅವರು ಸಮಾಲೋಚನೆಗಾಗಿ ಜನರನ್ನು ಒಟ್ಟುಸೇರಿಸಿದರು. ಸಿರಿಯಾದಲ್ಲಿ ಹಿಂದೆಯೂ ಸಾಂಕ್ರಾಮಿಕ ರೋಗಗಳು ಹರಡಿವೆ. ಅಂತಹ ಸಂದರ್ಭಗಳಲ್ಲಿ ಜನರು ಏನು ಮಾಡುತ್ತಿದ್ದರು ಎಂದು ಅವರು ಕೇಳಿದರು. ಅವರು ಹೇಳಿದರು. ಪ್ಲೇಗ್ ಹರಡುವಾಗ ಜನರು ಓಡುತ್ತಾ ಆಚೆ ಈಚೆ ಹೋಗುತ್ತಾರೆ, ಆಗ ಅದರ ಶಕ್ತಿ ಕಡಿಮೆಯಾಗುತ್ತದೆ. ಎಂದರೆ, ಪಟ್ಟಣಗಳಲ್ಲಿ ಇರುವುದಕ್ಕೆ ಬದಲಿಗೆ ಸುತ್ತಮುತ್ತಲಿನ ತೆರೆದ ಪ್ರದೇಶಗಳಿಗೆ ಹೋಗುತ್ತಿದ್ದರು. ಈ ಸಲಹೆಯ ಕಡೆಗೆ ಬೊಟ್ಟು ಮಾಡುತ್ತಾ ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ಒಂದು ಸಾಮಾನ್ಯವಾದ ನಿಯಮವನ್ನು ಮಾಡಿರುವನು. ಎಂದರೆ, ಯಾರು ಸಾಂಕ್ರಾಮಿಕ ರೋಗವಿರುವ ಪ್ರದೇಶವನ್ನು ಬಿಟ್ಟುಕೊಂಡು ಸುತ್ತುಮುತ್ತಲಿನ ತೆರೆದ, ಗಾಳಿಯಾಡುವ ಪ್ರದೇಶಗಳಿಗೆ ಹೋದರೆ, ಅವನು ರಕ್ಷೆಹೊಂದುವನು. ಒಟ್ಟಿನಲ್ಲಿ ಇದೂ ಸಹ ಅಲ್ಲಾಹನ ಕಾನೂನು ಆಗಿರುವಾಗ, ನಾನು ಅವನ ಯಾವುದೇ ಕಾನೂನಿನ ಮುರಿಯುತ್ತಿಲ್ಲ. ಆದ್ದರಿಂದ ನಾನು ಓಡಿಹೋಗುತ್ತಿದ್ದೇನೆ ಎಂದು ನೀವು ಹೇಳುವಂತಿಲ್ಲ. ಕೇವಲ ಅವನ ಒಂದು ಕಾನೂನಿಂದ ಮತ್ತೊಂದು ಕಾನೂನಿನ ಕಡೆಗೆ ಹೋಗುತ್ತಿದ್ದೇನೆ. (ತಫ್‌ಸೀರೆ ಕಬೀರ್, ಸಂಪುಟ–5, ಪುಟ–170–171)

ಹಝ್ರತ್ ಉಮರ್(ರ) ಮದೀನಕ್ಕೆ ಮರಳಿಹೋದರು. ಆದರೆ ಪ್ಲೇಗ್ ಹರಡಿದ್ದ ಕಾರಣದಿಂದ ತುಂಬಾ ಚಿಂತಿತರಾಗಿದ್ದರು. ಒಂದು ದಿನ ಹಝ್ರತ್ ಉಮರ್(ರ) ಹಝ್ರತ್ ಅಬೂ ಉಬೈದರಿಗೆ(ರ) ಹೀಗೆ ಒಂದು ಪತ್ರವನ್ನು ಬರೆದರು: ನನಗೆ ನಿಮ್ಮಿಂದ ಒಂದು ಅತ್ಯಾವಶ್ಯಕ ಕೆಲಸವಿದೆ. ಆದ್ದರಿಂದ ಈ ಪತ್ರ ನಿಮ್ಮ ಬಳಿಗೆ ತಲುಪಿದ ಕೂಡಲೇ ಮದೀನಕ್ಕೆ ರವಾನೆ ಆಗಿರಿ. ಈ ಪತ್ರ ರಾತ್ರಿ ತಲುಪಿದರೆ, ಬೆಳಿಗ್ಗೆ ಆಗಲು ಕಾಯಬೇಡಿರಿ, ಈ ಪತ್ರ ಬೆಳಿಗ್ಗೆ ತಲುಪಿದರೆ, ರಾತ್ರಿಯಾಗಲು ಕಾಯಬೇಡಿರಿ. ಹಝ್ರತ್ ಅಬೂ ಉಬೈದರಿಗೆ ಈ ಪತ್ರ ತಲುಪಿದಾಗ, ಅವರು ಹೇಳಿದರು: ಅಮೀರುಲ್ ಮೂಮಿನರ ಆವಶ್ಯಕತೆ ಏನೆಂದು ನನಗೆ ಗೊತ್ತಿದೆ. ಅಲ್ಲಾಹನು ಹಝ್ರತ್ ಉಮರರ(ರ) ಮೇಲೆ ಕರುಣೆ ತೋರಿಸಲಿ. ಅವರು ಬಾಕಿಯಾಗಿ ಉಳಿಯದ ವ್ಯಕ್ತಿಯನ್ನು ಉಳಿಸಲು ಬಯಸುತ್ತಿದ್ದಾರೆ. ಹಝ್ರತ್ ಉಮರರಿಗೆ(ರ) ಇದ್ದ ಭಯ ಮತ್ತು ಚಿಂತೆಯ ಕಾರಣವೇನೆಂದು ಅವರಿಗೆ ಗೊತ್ತಾಯಿತು. ಅನಂತರ ಆ ಪತ್ರಕ್ಕೆ ಹೀಗೆ ಉತ್ತರ ಬರೆದರು: ಯಾ ಅಮೀರಲ್ ಮೂಮಿನೀನ್, ನಾನು ನಿಮ್ಮ ಉದ್ದೇಶವನ್ನು ತಿಳಿದಿದ್ದೇನೆ. ನನ್ನನ್ನು ಕರೆಯಬೇಡಿರಿ. ಇಲ್ಲೇ ಇರಲು ಬಿಡಿರಿ. ನಾನು ಮುಸ್ಲಿಮ್ ಸಿಪಾಯಿಗಳಲ್ಲಿ ಒಬ್ಬನಾಗಿರುವೆನು. ವಿಧಿಸಿದ್ದು ಆಗಿಯೇ ಆಗುವುದು. ನಾನು ಅವರಿಂದ ಮುಖ ತಿರುಗಿಸಿ ಹೇಗೆ ಬರಲಿ? ಈ ಪತ್ರವನ್ನು ಓದಿದ ಹಝ್ರತ್ ಉಮರ್(ರ) ಅತ್ತುಬಿಟ್ಟರು. ಅವರು ಮುಹಾಜಿರರೊಡನೆ ಕುಳಿತುಕೊಂಡಿದ್ದರು. ಅವರು ಕೇಳಿದರು: ಯಾ ಅಮೀರಲ್ ಮೂಮಿನೀನ್, ಹಝ್ರತ್ ಅಬೂ ಉಬೈದ ನಿಧನರಾದರೇ? ಆಗ ಹಝ್ರತ್ ಉಮರ್(ರ) ಹೇಳಿದರು: ಇಲ್ಲಿ ಆದರೆ, ಬಹುಶಃ ಮರಣಹೊಂದುವರು.

(ಸೈರ್ ಅಲಾಮುಲ್ ನಬ್ಲಾ, ಸಂಪುಟ–1, ಪುಟ–18–19, ಮೊಅಸ್ಸಸುಲ್ ರಿಸಾಲ ಬೈರೂತ್ ಲೆಬನಾನ್, 1996)

ಅನಂತರ ಪುನಃ ಹಝ್ರತ್ ಉಮರ್(ರ) ಅವರು ಅಬೂ ಉಬೈದರಿಗೆ(ರ) ಹೀಗೆ ಪತ್ರ ಬರೆದರು: ಮುಸ್ಲಿಮರನ್ನು ಆ ಪ್ರದೇಶದಿಂದ ಹೊರಗೆತೆಗೆದು, ಆರೋಗ್ಯಕರವಾದ ಯಾವುದಾದರೂ ಸ್ಥಳಕ್ಕೆ ಹೋಗಿರಿ. ಮುಸ್ಲಿಮರಾದ ಸಿಪಾಯಿಗಳಲ್ಲಿ ಯಾರಾದರೂ ಮರಣಪಟ್ಟರೆ, ಹಝ್ರತ್ ಅಬೂ ಉಬೈದ ಅತ್ತುಬಿಡುತ್ತಿದ್ದರು ಮತ್ತು ಶಹಾದತಿಗಾಗಿ ದುಆ ಮಾಡುತ್ತಿದ್ದರು. ಅವರು ಆ ಸಮಯದಲ್ಲಿ ಹೀಗೆ ದುಆ ಮಾಡುತ್ತಿದ್ದರು ಎಂದು ಒಂದು ವರದಿಯಲ್ಲಿ ಬಂದಿದೆ: ಹೇ ಅಲ್ಲಾಹ್, ಅಬೂ ಉಬೈದರ ಕುಟುಂಬಕ್ಕೆ ಇದರಲ್ಲಿ ಭಾಗವಿಲ್ಲವೇ? ಎಂದರೆ, ಶಹಾದತಿನಲ್ಲಿ. ಒಂದು ದಿನ ಹಝ್ರತ್ ಅಬೂ ಉಬೈದರ(ರ) ಬೆರಳಿನಲ್ಲಿ ಸಣ್ಣದಾದೊಂದು ಕುರುವಾಯಿತು. ಅದನ್ನು ನೋಡಿ ಅವರು ಹೇಳಿದರು: ಅಲ್ಲಾಹನು ಈ ಸಣ್ಣದರಲ್ಲಿ ಅನುಗ್ರಹ ಸುರಿಸುವನು. ಸ್ವಲ್ಪದರಲ್ಲೇ ಅಲ್ಲಾಹನು ಅನುಗ್ರಹ ಸುರಿಸುವಾಗ ಅದು ಹೆಚ್ಚಾಗುತ್ತದೆ.

ಅರ್‌ಬಾಝ್ ಬಿನ್ ಸಾರಿಯ ಹೇಳುತ್ತಾರೆ: ಹಝ್ರತ್ ಅಬೂ ಉಬೈದರಿಗೆ(ರ) ಪ್ಲೇಗು ರೋಗ ಬಾಧಿತರಾದ ಸಮಯದಲ್ಲಿ ನಾನು ಅವರ ಸನ್ನಿಧಿಗೆ ಹೋದಾಗ, ಅವರು ಹೇಳಿದರು: ಪ್ಲೇಗ್ ರೋಗದಿಂದ ಮರಣಹೊಂದುವವರು ಶಹೀದ್ ಆಗಿರುವರು, ಹೊಟ್ಟೆಯ ರೋಗದಿಂದ ನಿಧನರಾಗುವವರು ಶಹೀದ್ ಆಗಿರುವರು, ಮುಳುಗಿ ಮರಣಹೊಂದುವವರು ಶಹೀದ್ ಆಗಿರುವರು, ಛಾವಣಿ ಬಿದ್ದು ಅದರಲ್ಲಿ ಜಜ್ಜಲ್ಪಟ್ಟು ಮರಣಹೊಂದುವವರು ಸಹ ಶಹೀದ್ ಆಗಿರುವರು ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾಗಿ ನಾನು ಕೇಳಿದ್ದೇನೆ. ಹಝ್ರತ್ ಅಬೂ ಉಬೈದರ(ರ) ಮರಣ ಸಮೀಪಿಸಿದಾಗ, ಅವರು ಜನರನ್ನು ಉಪದೇಶಿಸುತ್ತಾ ಹೇಳಿದರು: "ಜನರೇ, ನಾನು ನಿಮಗೆ ಒಂದು ಉಪದೇಶ ನೀಡುತ್ತೇನೆ. ನೀವು ಅದನ್ನು ಸ್ವೀಕರಿಸಿದರೆ, ಅದರಿಂದ ಪ್ರಯೋಜನ ಪಡೆಯುವಿರಿ. ಅದೇನೆಂದರೆ, ನಮಾಝನ್ನು ನೆಲೆನಿಲ್ಲಿಸಿರಿ, ಝಕಾತನ್ನು ಕೊಡಿರಿ, ರಮಝಾನಿನ ಉಪವಾಸವನ್ನು ಅನುಷ್ಠಿಸಿರಿ, ದಾನಧರ್ಮಗಳನ್ನು ಮಾಡುತ್ತಿರಿ, ಹಜ್ಜ್ ಮತ್ತು ಉಮ್ರಗಳನ್ನು ಮಾಡಿರಿ, ಪರಸ್ಪರ ಒಳ್ಳೆಯ ಸಂಗತಿಗಳ ತಾಕೀತುಮಾಡಿರಿ. ತಮ್ಮ ಅಮೀರರ ಹಿತವನ್ನು ಬಯಸಿರಿ. ಅವರಿಗೆ ಮೋಸಮಾಡಬೇಡಿರಿ. ನಿಮ್ಮ ಸ್ತ್ರೀಯರು ನಿಮ್ಮ ಕರ್ತವ್ಯಗಳಿಂದ ಅಜಾಗರೂಕರನ್ನಾಗಿ ಮಾಡದಿರಲಿ. ಮನುಷ್ಯನು ಒಂದು ಸಾವಿರ ವರ್ಷಗಳಷ್ಟು ಜೀವಿಸಿದರೂ ಒಂದು ದಿನ ಅವನಿಗೆ ಈ ಲೋಕವನ್ನು ಬಿಡಬೇಕಾಗಿ ಬರುವುದು. ನನ್ನ ಮರಣ ಈಗ ಸಮೀಪಿಸಿರುವ ರೀತಿಯಲ್ಲೇ. ಅಲ್ಲಾಹನು ಆದಂ ಸಂತತಿಗಳಿಗೆ ಮರಣವನ್ನು ವಿಧಿಸಿರುವನು. ಪ್ರತಿಯೊಬ್ಬನೂ ಮರಣಹೊಂದುವನು. ಮರಣಕ್ಕಾಗಿ ತಯಾರಾಗಿ ನಿಲ್ಲುವವನು ಮತ್ತು ಆ ದಿನಕ್ಕಾಗಿ ತಯಾರಿ ಮಾಡುವವನು ಬುದ್ಧಿವಂತನಾಗಿರುವನು. ಅಮೀರುಲ್ ಮೂಅ್‌ಮಿನೀನ್‌ರಿಗೆ ನನ್ನ ಸಲಾಂ ತಲುಪಿಸಿರಿ. ನನಗೆ ಒಪ್ಪಿಸಲಾದ ಎಲ್ಲ ಕರ್ತವ್ಯಗಳನ್ನು ನಾನು ನಿರ್ವಹಿಸಿದ್ದೇನೆ ಎಂದು ಹೇಳಿರಿ. ನನ್ನನ್ನು ನನ್ನ ತೀರ್ಮಾನದ ಪ್ರಕಾರ ಇಲ್ಲೇ ದಫನ್ ಮಾಡಿರಿ."

ಉರ್ದನ್ ಪ್ರದೇಶದಲ್ಲಿ, ಬೇಸಾನ್ ಕಣಿವೆಯಲ್ಲಿ ಇವರ ಗೋರಿಯಿದೆ. ಕೆಲವು ವರದಿಗಳ ಪ್ರಕಾರ, ಹಝ್ರತ್ ಅಬೂ ಉಬೈದ ಬಿನ್ ಜರಾಹ್, ಜಾಬಿಯಾದಿಂದ ಬೈತುಲ್ ಮುಖದ್ದಸಿನ ಕಡೆಗೆ ನಮಾಝ್ ಮಾಡಲು ಹೋಗುತ್ತಿದ್ದಾಗ, ಮಾರ್ಗ ಮಧ್ಯೆ ನಿಧನರಾದರು ಎಂದಿದೆ. ಮತ್ತೊಂದು ವರದಿಯ ಪ್ರಕಾರ ಅವರ ಮರಣ, ಸಿರಿಯಾದ ಪ್ರದೇಶವಾದ ಫಹಲ್‌ನಲ್ಲಿ ಆಯಿತು. ಅವರ ಖಬರ್ ಬೇಸಾನ್ ಎಂಬ ಪ್ರದೇಶದಲ್ಲಿದೆ. ಹಝ್ರತ್ ಅಬೂ ಉಬೈದ ತನ್ನ ಮರಣ ಸಮೀಪಿಸಿದಾಗ, ಹಝ್ರತ್ ಮಆಝ್ ಬಿನ್ ಜಬಲ್‌ರನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದ್ದರು. ಹಝ್ರತ್ ಅಬೂ ಉಬೈದ(ರ) ಮರಣಹೊಂದಿದಾಗ, ಹಝ್ರತ್ ಮಆಝ್ ಜನರೊಡನೆ ಹೇಳಿದರು: ಎಲೈ ಜನರೇ, ಇಂದು ನಮ್ಮಿಂದ ಬೇರ್ಪಟ್ಟ ವ್ಯಕ್ತಿಗಿಂತ ಪರಿಶುದ್ಧ ಹೃದಯಯುಳ್ಳ, ಹಗೆತನವಿಲ್ಲದ, ಜನರನ್ನು ಪ್ರೀತಿಸುವ ಮತ್ತು ಜನರ ಹಿತಚಿಂತಕರಾದ ಯಾರನ್ನೂ ನಾನು ಕಂಡಿಲ್ಲ. ಅಲ್ಲಾಹನು ಅವನ ಅನುಗ್ರಹಗಳನ್ನು ಅವರ ಮೇಲೆ ವರ್ಷಿಸಲಿ ಎಂದು ದುಆ ಮಾಡಿರಿ. (ರೌಶನ್ ಸಿತಾರೆ, ಲೇಖಕ: ಗುಲಾಮ್ ಬಾರಿ ಸೈಫ್ ಸಾಹಿಬ್, ಸಂಪುಟ–2, ಪುಟ–31–33) (ಸ್ವೆರ್ ಆಲಾಮುನ್ನಬಲಾ, ಸಂಪುಟ–1, ಪುಟ–22–23, ಮೊಅಸ್ಸಸುಲ್ ರಿಸಾಲ ಬೈರೂತ್ ಲೆಬನಾನ್ 1996)

ಅವರು ಹಿಜರೀ 18ರಲ್ಲಿ, 58ನೇ ವಯಸ್ಸಿನಲ್ಲಿ ನಿಧನರಾದರು. (ಇಸ್ತಿಯಾಬ್, ಸಂಪುಟ–2, ಪುಟ–343, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2010)

ಒಂದು ಸಲ ಹಝ್ರತ್ ಉಮರ್(ರ) ಹಝ್ರತ್ ಅಬೂ ಉಬೈದರಿಗೆ ನಾಲ್ಕು ಸಾವಿರ ದಿರ್‌ಹಮ್ ಮತ್ತು ನಾನ್ನೂರು ದೀನಾರ್ ಕಳುಹಿಸಿದರು. ಈ ಸಂಪತ್ತನ್ನು ಅವರು ಏನು ಮಾಡುತ್ತಾರೆ ಎಂದು ನೋಡಲು ಹಝ್ರತ್ ಉಮರ್(ರ) ಒಂದು ದೂತನನ್ನು ಅವರ ಬಳಿಗೆ ಕಳುಹಿಸಿದರು. ಹಝ್ರತ್ ಅಬೂ ಉಬೈದ(ರ) ಸಂಪೂರ್ಣ ಸಂಪತ್ತನ್ನು ಜನರೆಡೆಯಲ್ಲಿ ವಿತರಿಸಿದರು. ದೂತನು ನಡೆದ ಎಲ್ಲ ಸಂಗತಿಯನ್ನು ಹಝ್ರತ್ ಉಮರರಿಗೆ ತಿಳಿಸಿದರು. ಹಝ್ರತ್ ಉಮರ್(ರ) ಹೇಳಿದರು: ಅಬೂ ಉಬೈದರಂತಹ(ರ) ವ್ಯಕ್ತಿಗಳನ್ನು ಅಲ್ಲಾಹನು ಇಸ್ಲಾಮಿನಲ್ಲಿ ಉಂಟುಮಾಡಿದ್ದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ.

ಹಝ್ರತ್ ಉಮರ್(ರ) ತನ್ನ ಸಂಗಡಿಗರೊಡನೆ ಒಮ್ಮೆ ಹೇಳಿದರು: ಯಾವುದಾದರೂ ಸಂಗತಿಯನ್ನು ಬಯಸಿರಿ. ಒಬ್ಬರು ಹೇಳಿದರು, ಈ ಮನೆ ಚಿನ್ನದಿಂದ ತುಂಬಬೇಕು ಮತ್ತು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು, ದಾನ ಮಾಡಬೇಕು ಎಂಬುವುದಾಗಿದೆ ನನ್ನ ಇಚ್ಛೆ. ಮತ್ತೊಬ್ಬ ವ್ಯಕ್ತಿ ಹೇಳಿದರು: ಈ ಮನೆ ವಜ್ರದಿಂದ ತುಂಬಬೇಕು ಮತ್ತು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು, ದಾನ ಮಾಡಬೇಕು ಎಂಬುವುದಾಗಿದೆ ನನ್ನ ಇಚ್ಛೆ. ಹಝ್ರತ್ ಉಮರ್(ರ) ಹೇಳಿದರು: ಇನ್ನೂ ಹೆಚ್ಚು ಬಯಸಿರಿ. ಜನರು ಹೇಳಿದರು: ಯಾ ಅಮೀರುಲ್ ಮೂಮಿನೀನ್, ನಾವು ಏನನ್ನು ಆಶೆಪಡಬೇಕೆಂದು ನಮಗೆ ಗೊತ್ತಾಗುತ್ತಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಹಝ್ರತ್ ಅಬೂ ಉಬೈದ ಬಿನ್ ಜರಾಹ್(ರ), ಹಝ್ರತ್ ಮಆಝ್ ಬಿನ್ ಜಬಲ್(ರ), ಹಝ್ರತ್ ಸಾಲಿಂ ಮೌಲಾ ಅಬೂಹುದೈಫ(ರ) ಮತ್ತು ಹಝ್ರತ್ ಹುದೈಫ ಬಿನ್ ಯಮಾನ್‌ರಂತಹ ವ್ಯಕ್ತಿಗಳಿಂದ ಈ ಮನೆ ತುಂಬಬೇಕೆಂಬುದುದಾಗಿದೆ ನನ್ನ ಅಭಿಲಾಷೆ. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಸಂಪುಟ–3, ಪುಟ–252, ಹದೀಸ್–5005, ಕಿತಾಬ್ ಮಾರಿಫತಿಸ್ಸಹಾಬ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಒಟ್ಟಿನಲ್ಲಿ, ಇವರು ಎಂತಹ ಭಾಗ್ಯವಂತರು! ಈ ಜನರು ಇಹಲೋಕದಲ್ಲೂ ಅಲ್ಲಾಹನ ಸಂಪ್ರೀತಿ ಗಳಿಸಿದವರಾಗಿದ್ದರು ಮತ್ತು ಪರಲೋಕದಲ್ಲೂ ಅಲ್ಲಾಹನ ಸಂಪ್ರೀತಿ ಗಳಿಸುವವರಾಗಿರುವರು. ಇಂದು ಅವರ ಬಗ್ಗೆ ಪ್ರಸ್ತಾಪ ಮುಕ್ತಾಯವಾಯಿತು.

ಕೆಲವು ಜನಾಝಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಮೊದನೆಯದ್ದು, ಫಝ್‌ಲುದ್ದೀನ್ ಖಟಕ್ ಸಾಹಿಬರ ಮಗನಾದ ಪ್ರೊಫೆಸರ್ ಡಾಕ್ಟರ್ ನಯೀಮುದ್ದೀನ್ ಖಟಕ್ ಸಾಹಿಬ್ ಶಹೀದ್. ಇವರು ಪೆಶಾವರ್ ಜಿಲ್ಲೆಯವರಾಗಿದ್ದರು. ಇವರನ್ನು ಅಕ್ಟೋಬರ್ 5ರಂದು ವಿರೋಧಿಗಳು ಮಧ್ಯಾಹ್ನ 1.30ಗೆ ಗುಂಡು ಹಾರಿಸಿ ಶಹೀದ್ ಮಾಡಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮಧ್ಯಾಹ್ನ 1.30ಯ ಸಮಯದಲ್ಲಿ, ಇವರು ಕಲಿಸುತ್ತಿದ್ದ ಸುಪೀರಿಯರ್ ಸಾಯಿನ್ಸ್ ಕಾಲೇಜಿನಿಂದ ಮರಳಿ ಮನೆಗೆ ಹೋಗುತ್ತಿದ್ದಾಗ ಬೈಕಿನಲ್ಲಿ ಎರಡು ವ್ಯಕ್ತಿಗಳು ಬಂದು ಫೈರಿಂಗ್ ಮಾಡಿದಾಗ, ಘಟನೆ ಸ್ಥಳದಲ್ಲೇ ಇವರು ಶಹೀದ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹುತಾತ್ಮರಿಗೆ 56 ವರ್ಷ ವಯಸ್ಸಿತ್ತು. 25 ವರ್ಷಗಳಿಂದ ವಿದ್ಯಾಭ್ಯಾಸ ವಿಭಾಗದಲ್ಲಿದ್ದರು. ಇವರು ಖಾಇದೇ ಆಝಮ್ ಯೂನಿವರ್ಸಿಟಿಯಿಂದ ಎಂ.ಫಿಲ್. ಮಾಡಿದ್ದರು. ಅನಂತರ ಸ್ಕಾಲರ್‌ಶಿಪ್‌ನಲ್ಲಿ ಚೈನಾಗೆ ಹೋಗಿದ್ದರು. ಅಲ್ಲಿ ಮೈಕ್ರೋ ಎನ್‌ವೈರ್‌ಮೆಂಟಲ್ ಬೈಯೋಲಜಿಯಲ್ಲಿ ಪಿ.ಎಚ್.ಡಿ ಮಾಡಿದ್ದರು. ಅನಂತರ ಇಸ್ಲಾಮಿನ ಕಾಲೇಜ್ ಯೂನಿವರ್ಸಿಟಿಯಲ್ಲಿ ಸೇವೆ ಸಲ್ಲಿಸಿದರು. ಪೆಶಾವರ್ ಯೂನಿವರ್ಸಿಟಿಯಲ್ಲೂ ಕಲಿಸುತ್ತಿದ್ದರು. ಪಿ.ಎಚ್.ಡಿ.ವಿದ್ಯಾರ್ಥಿಗಳ ಇಂಟರ್ವ್ಯೂ ಮಾಡಿಸುವ ಪೇನಲ್‌ನ ಮೆಂಬರ್ ಸಹ ಆಗಿದ್ದರು. ಪಾಕಿಸ್ತಾನದ ಹಲವು ವಿದ್ಯಾಭ್ಯಾಸ ಸ್ಥಾಪನೆಗಳು ಇವರನ್ನು ಲೆಕ್ಚರ್‌ಗಳನ್ನು ನೀಡಲು ಕರೆಯುತ್ತಿದ್ದುವು. ಇವರ ಸಂಬಂಧ ಹೆಚ್ಚಾಗಿ ವಿದ್ಯಾಭ್ಯಾಸ ವಿಭಾಗದಲ್ಲೇ ಆಗಿತ್ತು.

ಇವರ ಕುಟುಂಬದಲ್ಲಿ ಅಹ್ಮದಿಯ್ಯತ್ತಿನ ಪ್ರವೇಶ ಇವರ ತಾತರಾದ ರುಕುನುದ್ದೀನ್ ಖಟಕ್ ಸಾಹಿಬರ ಮೂಲಕ ಆಗಿತ್ತು. ಇವರು ಕರಕ್ ಜಿಲ್ಲೆಯವರಾಗಿದ್ದರು. ಇವರ ಅಜ್ಜಿಯಾದ ಬೀಬಿ ನೂರ್‌ನಾಮ ಸಾಹಿಬ ಸಹ ಅಹ್ಮದಿಯಾಗಿದ್ದರು. ಅಜ್ಜಿಯ ತಂದೆಯ ಹೆಸರು ಶೀರ್‌ಝಮಾನ್ ಎಂದಾಗಿತ್ತು. ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ಖಾದಿಯಾನಿನಿಂದ ಮರಳಿಹೋಗುವಾಗ ಅವರಿಗೆ ಹಝ್ರತ್ ಮಸೀಹ್ ಮೌಊದ್‌ರಿಂದ(ಅ) ಒಂದು ಕುರ್ತ ಕೊಡುಗೆಯಾಗಿ ಲಭಿಸಿತ್ತು. ಅದು ಇವರ ಕುಟುಂಬದಲ್ಲಿ ಈಗಲೂ ಇದೆ. ಇದೊಂದು ಕಾಣಿಕೆಯಾಗಿತ್ತು. ಶಹೀದಾದ ಸನ್ಮಾನ್ಯ ನಯೀಮುದ್ದೀನ್ ಸಾಹಿಬರ ತಂದೆಯವರು ಲೈವ್‌ಸ್ಟಾಕ್‌ನಲ್ಲಿ ವೆಟನರಿ ಡಾಕ್ಟರ್ ಆಗಿತ್ತು. ಅನಂತರ ಡೆಪ್ಯೂಟಿ ಡೈರಕ್ಟರರ ಹುದ್ದೆಯಿಂದ ರಿಟಾಯರ್ ಆಗಿದ್ದರು. ಪ್ರಸಿದ್ಧ ಕವಿಯೂ ಆಗಿದ್ದರು.ಇವರ ತಾಯಿಯವಾದ ಮಹ್ಬೂಬತುರ್ರಹ್ಮಾನ್ ಸಾಹಿಬರು ಸಹ ವಿದ್ಯಾಭ್ಯಾಸ ವಿಭಾಗದಲ್ಲಿ ಡೆಪ್ಯೂಟಿ ಡೈರಕ್ಟರ್ ಆಗಿದ್ದ ನಂತರ ಅಲ್ಲಿಂದಲೇ ನಿವೃತ್ತರಾಗಿದ್ದರು. ಹಲವು ವರ್ಷಗಳಿಂದ ಇವರ ಕುಟುಂಬಕ್ಕೆ ವಿರೋಧವನ್ನು ಎದುರಿಸಬೇಕಾಗಿ ಬಂದಿತ್ತು. ಶಹೀದರ

ಮಾವ ಆದ ಅಡ್‌ವೇಕಟ್ ಮತ್ತು ಪಿಶಾವರ್ ಜಿಲ್ಲೆಯ ಅಚೀನಿಪಾಯಾ ಜಮಾಅತಿನ ಸದರ್ ಆಗಿದ್ದ ಬಶೀರ್ ಅಹ್ಮದ್ ಸಾಹಿಬರನ್ನು 2019ರಲ್ಲಿ ಅಪಹರಿಸಲಾಗಿತ್ತು. ಅವರು ಎಲ್ಲಿದ್ದಾರೆ ಎಂಬುವುದರ ಬಗ್ಗೆ ಇಲ್ಲಿಯ ವರೆಗೆ ಪತ್ತೆಮಾಡಲು ಸಾಧ್ಯವಾಗಿಲ್ಲ. ಶಹೀದರು ಶ್ರೇಷ್ಠ ಸ್ವಭಾವವೈಶಿಷ್ಟ್ಯಗಳನ್ನು ಹೊಂದಿರುವ ವ್ಯಕ್ತಿಯಾಗಿದ್ದರು. ವಿದ್ಯಾವಂತರಾಗಿದ್ದರು. ಜಮಾಅತಿನ ಸೇವೆ ಎಂಬ ರೀತಿಯಲ್ಲಿ ಸೆಕ್ಯೂರಿಟಿ ಡ್ಯೂಟಿ ನೀಡಲು ಹಾಜರಾಗುತ್ತಿದ್ದರು. ಅತಿಥಿಸತ್ಕಾರ ಮಾಡುವುದು ಇವರ ಒಂದು ವಿಶೇಷವಾದ ಗುಣವಾಗಿತ್ತು. ದೇವನ ಸೃಷ್ಟಿಯೊಂದಿಗೆ ಸಹಾನುಭೂತಿ, ಬಡವರ ಸಹಾಯ ಮಾಡುವುದು, ಕುಟುಂಬದ ಪ್ರತಿಯೊಬ್ಬ ಸದಸ್ಯರೊಡನೆ ಸಹಾನುಭೂತಿಯ ಸಂಬಂಧವಿರಿಸುವುದು ಇವರ ರೂಢಿಯಾಗಿತ್ತು. ವಿದ್ಯಾಭ್ಯಾಸದ ಕಡೆಗೆ ವಿಶೇಷವಾದ ಗಮನವಿತ್ತು. ಅಹ್ಮದಿ ವಿದ್ಯಾರ್ಥಿಗಳೊಡನೆ ಕಲಿಯಲು ಉಪದೇಶಿಸುತ್ತಿದ್ದರು. ತನ್ನ ಸ್ವಂತ ಮಕ್ಕಳಿಗೂ ಉನ್ನತ ವಿದ್ಯಾಭ್ಯಾಸವನ್ನು ಒದಗಿಸಿಕೊಟ್ಟಿದ್ದರು. ಅವರ ಪತ್ನಿಯಾದ ಸನ್ಮಾನ್ಯ ಸಾದಿಯ ಬುಶ್ರ ಸಾಹಿಬ ಹೇಳುತ್ತಾರೆ: ಶಹೀದರಾದ ನನ್ನ ಪತಿ, ಶಹೀದಾಗುವುದಕ್ಕೆ ಒಂದು ವಾರ ಮುಂಚೆ ಬಹಿಶ್ತಿ ಮಖ್‌ಬರಕ್ಕೆ ಹೋದಾಗ, 'ನಮಗೂ ಇಲ್ಲಿ ಜಾಗ ಸಿಕ್ಕಿದ್ದರೆ ಎಷ್ಟು ಚೆನ್ನ! ಆದರೆ ಇಲ್ಲಿ ಜಾಗ ಸಿಗುವ ಭಾಗ್ಯ ನಮಗೆಂತು ಉಂಟಾಗುವುದು' ಎಂದು ಹೇಳಿದ್ದರು. ಹೇಗಿದ್ದರೂ ಅವರನ್ನು ರಬ್ವದಲ್ಲಿ ದಫನ್ ಮಾಡಿಸುವ ಮೂಲಕ ಅಲ್ಲಾಹನು ಅವರ ಈ ಅಭಿಲಾಷೆಯನ್ನು ಈಡೇರಿಸಿ ಕೊಟ್ಟನು. ತಾಹಿರ್ ಹಾರ್ಟ್ ಹಾಸ್ಪಿಟಲಲ್ಲಿ ಕೆಲಸಮಾಡುತ್ತಿರುವ ಶಹೀದರ ಅಳಿಯರಾದ ಡಾಕ್ಟರ್ ಮುನೀರ್ ಅಹ್ಮದ್ ಖಾನ್ ಹೇಳುತ್ತಾರೆ: ಶಹೀದ್ ಮತ್ತು ಶಹೀದರ ಮಕ್ಕಳ ಫೋಟೋಗಳನ್ನು ವಿರೋಧಿಗಳಿಗೆ ತೋರಿಸಿ, ಇವರನ್ನೆಲ್ಲ ಕೊಲ್ಲಲು ಒಬ್ಬ ವಿರೋಧಿಯಾದ ಪ್ರೊಫೇಸರ್ ಪ್ರೇರೇಪಿಸುತ್ತಿದ್ದಾಗಿ ಶಹೀದ್ ಹೇಳುತ್ತಿದ್ದರು. ಶಹೀದರ ಮನೆಯ ಹೊರಗೆ ಸಹ ವಿರೋಧದ ಬ್ಯಾನರ್ ತೂಗು ಹಾಕಲಾಗಿತ್ತು. ಮರಣಕ್ಕೆ ಒಂದು ವಾರಕ್ಕೆ ಮುಂಚೆ ನಮ್ಮೊಡನೆ ಊಟ ಮಾಡಲು ನಾನು ಅವರೊಡನೆ ಹೇಳಿದ್ದೆ. ಆದರೆ ಊಟ ಲಂಗರ್‌ಖಾನದಿಂದ ಮಾಡುವುದಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲಂಗರ್‌ಖಾನದ ಊಟದ ಸವಿ ಮತ್ತು ಅಲ್ಲಿಯ ಅನುಗ್ರಹ ಬೇರೆಲ್ಲಿಯೂ ಸಿಗಲಿಕ್ಕಿಲ್ಲ, ಆದುದರಿಂದ ಮುಂದಿನ ಬಾರಿ ಬರುತ್ತೇನೆ ಎಂದು ಅವರು ಹೇಳಿದ್ದರು. ಒಬ್ಬ ಮಗನಾದ ಕಲೀಮುದ್ದೀನ್ ಖಟಕ್ ಇಂಜಿನಿಯರ್, ಮತ್ತೊಬ್ಬ ಮಗನಾದ ನೂರುದ್ದೀನ್ ಖಟಕ್, ಇವರು ಫಸ್ಟ್ ಇಯರ್ ವಿದ್ಯಾರ್ಥಿಯಾಗಿರುವವರು ಮತ್ತು ಪತ್ನಿಯನ್ನು ಶಹೀದ್ ಅಗಲಿರುವವರು. ಜಮಾಅತಿನ ಸೇವೆ ಮಾಡುತ್ತಿರುವ ಮತ್ತು ಪಿಶಾವರ್ ಜಮಾಅತಿನ ಅಮೀರ್ ಆಗಿರುವ ನವೀದ್ ಅಹ್ಮದ್ ಸಾಹಿಬರು ಸಹ ಇವರ ಒಬ್ಬ ಅಳಿಯರಾಗಿದ್ದಾರೆ. ಅಲ್ಲಾಹನು ಶಹೀದ್‌ರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಸಂಬಂಧಿಕರಿಗೂ ಸಹನೆಯನ್ನು ಪ್ರದಾನಿಸಲಿ.

ಎರಡನೇ ಜನಾಝ ಮುಹಮ್ಮದ್ ಸಾದಿಖ್ ಸಾಹಿಬರ ಮಗನಾದ ಉಸಾಮ ಸಾದಿಖ್‌ರವರದ್ದಾಗಿದೆ. ಇವರು ಜರ್ಮನಿಯ ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಯಾಗಿದ್ದರು. ಕೆಲವು ದಿನಗಳಿಗೆ ಮುಂಚೆ ರೈನ್ ನದಿಯಲ್ಲಿ ಮುಳುಗಿ ಮರಣವನ್ನಪ್ಪಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ನಿಧನದ ಸಮಯದಲ್ಲಿ ಅವರಿಗೆ 21 ವಯಸ್ಸಿತ್ತು. ಪಾಕಿಸ್ತಾನದ ಚಕ್ ಸಿಕಂದರ್ ಗುಜ್‌ರಾತಿನವರಾಗಿದ್ದರು. ಸಹೋದರ ಸಹೋದರಿಯರಲ್ಲಿ ಎಲ್ಲರಿಗಿಂತ ಕಿರಿಯವರಾಗಿದ್ದರು. ತಂದೆ ತಾಯಿಯಲ್ಲದೆ, ಐದು ಸಹೋದರಿಯರನ್ನು ಮತ್ತು ಒಬ್ಬ ಸಹೋದರರನ್ನು ಅಗಲಿರುವರು. ಅವರ ತಾತರ ಕುಟುಂಬದಲ್ಲಿ ಅಹ್ಮದಿಯ್ಯತ್ ಹಝ್ರತ್ ಮುಸ್ಲಿಹ್ ಮೌಊದ್‌ರ ಕಾಲದಲ್ಲಿ ಬಂದಿತ್ತು. ಅವರ ತಾತ ತನ್ನ ಎರಡು ಸಹೋದರರ ಸಮೇತ ಅಹ್ಮದಿಯಾಗಿದ್ದರು. ಅವರ ಎರಡು ಸಹೋದರರು ಅನಂತರ ಅಹ್ಮದಿಯ್ಯತ್ತನ್ನು ಉಪೇಕ್ಷಿಸಿದ್ದರು ಆದರೆ, ಇವರ ತಾತ ಅಹ್ಮದಿಯ್ಯತ್ತಿನಲ್ಲಿ ನೆಲೆನಿಂತರು.ಅಜ್ಜಿಯ ಕುಟುಂಬದಲ್ಲಿ, ಅಜ್ಜಿಯ ತಂದೆಯರಾದ ಹಝ್ರತ್ ಶಾಹ್ ಮುಹಮ್ಮದ್ ಮತ್ತು ಇವರ ತಂದೆಯರಾದ ಹಝ್ರತ್ ಲಂಗರ್ ಮುಹಮ್ಮದ್ ಸಾಹಿಬರ ಮೂಲಕ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. 1903ರಲ್ಲಿ, ಇವರು ಜೆಹಲಮಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಯಲ್ಲಿ ಬೈಅತ್ ಮಾಡಿದ್ದರು. 1989ರಲ್ಲಿ ಚಕ್‌ಸಿಕಂದರ್ ಜಮಾಅತಿನ ಸ್ಥಿತಿ ತುಂಬ ಕೆಟ್ಟುಹೋಗಿತ್ತು. ಅಹ್ಮದಿಯರ ವಿರುದ್ಧ ಹಲವು ಮೆರವಣಿಗೆಯನ್ನು ಜರಗಿಸಲಾಗಿತ್ತು. ಆಗ ಉಸಾಮರ ತಂದೆ ತಾಯಿಯರಿಗೆ ಕಠಿಣವಾದ ವಿರೋಧ ಎದುರಿಸಬೇಕಾಗಿ ಬಂದಿತ್ತು. ಉಸಾಮರ ತಾಯಿಯನ್ನು ಸಹ ಹೊಡೆಯಲಾಗಿತ್ತು. ಉಸಾಮರ ತಂದೆಯ ವಿರುದ್ಧ ಸುಳ್ಳು ಮೊಕದ್ದಮೆಯನ್ನು ಹೂಡಲಾಗಿತ್ತು. ಅದು ಏಳು ವರ್ಷಗಳ ಕಾಲ ಇದ್ದಿತ್ತು. ಅನಂತರ ಇವರು ಜರ್ಮನಿಗೆ ಬಂದರು. ಉಸಾಮ ಪ್ರಾಥಮಿಕ ಶಿಕ್ಷಣವನ್ನು ಪಾಕಿಸ್ತಾನದಿಂದ ಪೂರ್ತಿ ಮಾಡಿದ್ದರು. ಜರ್ಮನಿಗೆ ಬಂದು ಜಾಮಿಅ ಪ್ರವೇಶಿಸಿದರು. ಈಗಷ್ಟೆ ಅವರು ಜಾಮಿಅ ಅಹ್ಮದಿಯಾದ ಮೂರನೇ ವರ್ಷವನ್ನು ಪೂರ್ತಿಮಾಡಿದ್ದರು. ಆದರೆ ಅಲ್ಲಾಹನ ಇಚ್ಛೆ ಪ್ರಕಾರ ಅವನು ಉಸಾಮರನ್ನು ತನ್ನೆಡೆಗೆ ಕರೆದನು. ಅವರ ತಂದೆ ಹೇಳುತ್ತಾರೆ: ದಿವಂಗತರಾದ ನನ್ನ ಮಗನನ್ನು ಎಷ್ಟು ಹೊಗಳಿದರೂ ಕಡಿಮೆ. ಏಕೆಂದರೆ, ಇಷ್ಟು ಕಿರಿಯ ವಯಸ್ಸಿನಲ್ಲಿ ಬಹಳ ಕೆಲಸಗಳನ್ನು ಮಾಡಿದ್ದನು. ಬಹಳ ಸಮರ್ಥನಾದ ವಿದ್ಯಾರ್ಥಿಯಾಗಿದ್ದನು. ಅವನ ಹೆಚ್ಚಿನ ಸಮಯ ಕಲಿಕೆಯಲ್ಲಿ ಕಳೆಯುತ್ತಿತ್ತು. ಕೊರೋನದ ಕಾರಣ ಅವನು ಆರು ತಿಂಗಳು ಮನೆಯಲ್ಲಿ ಕಳೆದಿದ್ದನು. ಜಮಾಅತಾದ ನಮಾಝ್‌ನೊಂದಿಗೆ ರಮಝಾನಿನ ಉಪವಾಸ ಪೂರ್ತಿ ಇರಿಸಿದ್ದನು. ತರಾವೀಹ್ ನಮಾಝಿನ ಇಮಾಮತ್ ವಹಿಸುತ್ತಿದ್ದನು. ರಜೆಯ ನಂತರ ಜಾಮಿಅ ಹೋಗಲು ತಯಾರಿ ಮಾಡುತ್ತಿದ್ದನು. ಆದರೆ, ಅದಕ್ಕೆ ಮುಂಚೆ ಮರಣವನ್ನಪ್ಪಿದನು. ಅವರ ತಾಯಿ ಹೇಳುತ್ತಾರೆ: ಅಪರಿಮಿತವಾದ ಗುಣವೈಶಿಷ್ಟ್ಯಗಳನ್ನು ಹೊಂದಿದ್ದನು. ಬಹಳ ಜವಾಬ್ದಾರಿಯಿಂದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದನು ಮತ್ತು ಅದನ್ನು ಬೇಗನೇ ಮುಗಿಸಲು ಪ್ರಯತ್ನಿಸುತ್ತಿದ್ದನು. ಬಹಳ ಸರಳ ಸ್ವಭಾವದವನಾಗಿದ್ದನು. ಮಿತಭಾಷಿಯಾಗಿದ್ದನು. ಆವಶ್ಯಾನುಸಾರ ಮಾತ್ರ ಮಾತನಾಡುತ್ತಿದ್ದನು. ತಂದೆತಾಯರಿಗೆ ಬಹಳ ವಿಧೇಯನಾಗಿದ್ದನು. ದೃಢವಾದ ಇಚ್ಛಾಶಕ್ತಿಯನ್ನು ಹೊಂದಿದ್ದನು. ದೂರದೃಷ್ಟಿಯುಳ್ಳ ವ್ಯಕ್ತಿತ್ವವನ್ನು ಹೊಂದಿದ್ದನು. ಹಲವು ಭಾಷೆಗಳನ್ನು ಕಲಿಯಲು ಪ್ರಯತ್ನಿಸುತ್ತಿದ್ದನು. ಅದಕ್ಕಾಗಿ ಅವನು ಅರಬಿ, ಫಾರ್ಸಿ, ಇಂಗ್ಲಿಷ್ ಮತ್ತು ಜರ್ಮನ್ ಭಾಷೆ ಕಲಿಯಲು ವಿಶೇಷವಾಗಿ ಗಮನವಹಿಸುತ್ತಿದ್ದನು. ಜರ್ಮನಿಯ ನ್ಯಾಶನಲ್ ತಬ್ಲೀಗ್ ಸೆಕ್ರಟರಿಯಾದ ಫರೀದ್ ಸಾಹಿಬರು ಬರೆಯುತ್ತಾರೆ: ಉಸಾಮ ಹಲವು ಉತ್ತಮ ಸ್ವಭಾವಗಳನ್ನು ಹೊಂದಿದ್ದನು. ಉತ್ಸಾಹದಿಂದ ತಬ್ಲೀಗ್ ಕಾರ್ಯಗಳಲ್ಲಿ ಭಾಗವಹಿಸುವುದು ಇವರ ಉತ್ತಮ ಗುಣಗಳಲ್ಲಿ ಒಂದಾಗಿತ್ತು. ತನ್ನ ಮರಣಕ್ಕೆ ಎರಡು ದಿನಗಳಿಗೆ ಮುಂಚೆ ಎಡಬಿಡದೆ ಮೂರು ದಿನಗಳು ಲೀಫ್‌ಲೆಟ್‌ಗಳನ್ನು ವಿತರಿಸಲು ಪೂರ್ವ ಜರ್ಮನಿಗೆ ಹೋಗಿದ್ದನು. ಲೀಫ್‌ಲೆಟ್ ವಿತರಿಸಲು ಯಾವಾಗ ಕರೆದರೂ, ನಿರಾಕರಿಸುತ್ತಿರಲಿಲ್ಲ. ಉತ್ಸಾಹದಿಂದ ಭಾಗವಹಿಸುತ್ತಿದ್ದನು.

ಜಾಮಿಅ ಅಹ್ಮದಿಯಾ ಜರ್ಮನಿಯಿಂದ ತೇರ್ಗಡೆಯಾದ ಮೌಲವಿ ಸುಹೈಬ್ ನಾಸಿರ್ ಸಾಹಿಬರು ಹೇಳುತ್ತಾರೆ: ಉಸಾಮ ನನಗಿಂತ ನಾಲ್ಕು ವರ್ಷ ಜೂನಿಯರ್ ಆಗಿದ್ದರು. ಆದರೆ ಆರಾಧನೆಯಲ್ಲಿ ಅವರು ನನಗೆ ಮಾದರಿಯಾಗಿದ್ದರು. ಮಸೀದಿಯಲ್ಲಿ ನಮಾಝ್ ಮಾಡುವಾಗ ಹೆಚ್ಚಾಗಿ ಮೊದಲಿನ ಸಾಲಲ್ಲಿ ನೋಡಿದ್ದೇನೆ. ಮಸೀದಿಯಲ್ಲಿ ಜಮಾಅತಾದ ನಮಾಝಿಗೆ ಮುಂಚೆ ಬಂದು ನಫ್ಲ್ ನಮಾಝ್ ನಿರ್ವಹಿಸುತ್ತಿದ್ದರು. ನಮಾಝಿನ ನಂತರ ಹೆಚ್ಚಾಗಿ ದೇವಸ್ಮರಣೆಯಲ್ಲಿ ನಿರತನಾಗುತ್ತಿದ್ದರು. ಉಸಾಮ ಎಲ್ಲರಿಗಿಂತ ಮುಂಚೆ ಮಸೀದಿಗೆ ಬರುವ ಮತ್ತು ಎಲ್ಲರ ನಂತರ ಮಸೀದಿಯಿಂದ ಹೊರಗೆ ಹೋಗುವ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದರು. ಅದೇ ರೀತಿಯಲ್ಲಿ ಜುಮಾ ನಮಾಝಿನಲ್ಲೂ ಮೊದಲು ಸಫ್ಫಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಬಹಳ ಶ್ರದ್ಧೆವಹಿಸಿ ಜಾಮಿಅದ ಪಾಠಗಳನ್ನು ಕಲಿಯುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಪದವಿಗಳನ್ನು ಉನ್ನತಗೊಳಿಸಲಿ.ಅವನ ತಂದೆತಾಯಿ ಮತ್ತು ಸಹೋದರ ಸಹೋದರಿಯರಿಗೆ ಸಹನೆಯನ್ನು ನೀಡಲಿ.

ಮುಂದಿನ ಜನಾಝ ಸಲೀಂ ಅಹ್ಮದ್ ಮಲಿಕ್ ಸಾಹಿಬರದ್ದಾಗಿದೆ. ಅವರು ಸರ್ಕಾರದ ಶಿಕ್ಷಣ ವಿಭಾಗಗಳಲ್ಲಿ ಇದ್ದು ನಿವೃತ್ತರಾದರು. ಅನಂತರ ಯು.ಕೆ.ಯಲ್ಲಿ ಜಾಮಿಅ ಶುರುವಾದಾಗ, ಜಾಮಿಅದ ಅಧ್ಯಾಪಕರಾದರು. 87ನೇ ವಯಸ್ಸಿನಲ್ಲಿ, 24 ಸೆಪ್ಟೆಂಬರ್‌ನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ತಾತರಾದ ಮಲಿಕ್ ನೂರುದ್ದೀನ್ ಸಾಹಿಬರು ಮತ್ತು ಇವರ ತಂದೆಯಾದ ಅಝೀಝ್ ಅಹ್ಮದ್ ಸಾಹಿಬರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯರಾಗಿದ್ದರು. ಇವರ ತಂದೆಯ ಒಂದು ಘಟನೆಯನ್ನು ಇವರ ತಾಯಿ ವಿವರಿಸುತ್ತಾರೆ: ಒಂದು ಸಲ ಮಲಿಕ್ ಸಾಹಿಬರ ತಾತರ ಮನೆಯಲ್ಲಿ ಯಾವುದೋ ಒಂದು ರೋಗದ ಕಾರಣದಿಂದ ಮನೆಯ ಹಲವು ಸದಸ್ಯರು ಮರಣವನ್ನಪ್ಪಿದರು. ಆಗ ಮಲಿಕ್ ಸಾಹಿಬರ ಅಜ್ಜಿ, ಖಲೀಫತುಲ್ ಮಸೀಹರಾಗಿದ್ದ ಹಕೀಂ ಮೌಲಾನ ನೂರುದ್ದೀನ್ ಸಾಹಿಬರಿಗೆ ತನ್ನ ಮಗನ ಸ್ಥಿತಿಯ ಬಗ್ಗೆ ತಿಳಿಸಿದರು. ಮೌಲವಿ ಸಾಹಿಬರ ತಕ್ಷಣವೇ ಅವರನ್ನು ನೋಡಲು ಮನೆಗೆ ಬಂದರು.ಮಗನ ಜೀವ ಉಳಿಯುವ ಸಾಧ್ಯತೆ ಬಹಳ ಕಡಿಮೆ. ಕೇವಲ ದುಆದಿಂದ ರಕ್ಷಣೆ ಪಡೆಯಬಹುದಾಗಿದೆ ಎಂದು ಅವರು ಹೇಳಿದರು. ಅನಂತರ ಹಝ್ರತ್ ಖಲೀಫತುಲ್ ಮಸೀಹರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸನ್ನಿಧಿಯಲ್ಲಿ ಹಾಜರಾಗಿ ದುಆ ಮಾಡಲು ವಿನಂತಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅವರು ಮಸ್ಜಿದ್ ಅಖ್ಸಾದ ಮೆಟ್ಟಿಲಲ್ಲಿ ಭೇಟಿಯಾಗಿದ್ದರು. ಈಗಲೇ ಹೋಗಿ ಮಗುವನ್ನು ನೋಡುವ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳಿದರು. ಹಾಗೆ ಹಝ್ರತ್ ಮಸೀಹ್ ಮೌಊದ್

ಅಲೈಹಿಸ್ಸಲಾಮರು ಸಹ ಮನೆಗೆ ಭೇಟಿ ನೀಡಿದ್ದರು. ಮನೆಗೆ ಹೋಗಿ ಮಗುವಿನ ಹಣೆಯಲ್ಲಿ ಕೈಯಿಟ್ಟು ಹೇಳಿದರು: ಇನ್‌ಶಾ ಅಲ್ಲಾಹ್ ಇವನು ಗುಣಮುಖನಾಗುವನು. ಹೀಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದುಆದ ದೃಷ್ಟಾಂತದಿಂದ ಮಗನ ಕಾಯಿಲೆ ವಾಸಿಯಾಯಿತು. ಹೀಗೆ ಆ ಮಗನು ಎಂದರೆ, ದಿವಂಗತರಾದ ಸಲೀಂ ಸಾಹಿಬರ ತಂದೆ 70 ವರ್ಷಗಳ ಆಯಸ್ಸನ್ನು ಪಡೆದರು. ಸಲೀಂ ಸಾಹಿಬರು ತನ್ನ ಪ್ರಾಥಮಿಕ ಶಿಕ್ಷಣವನ್ನು ಖಾದಿಯಾನನಂದ ಪಡೆದಿದ್ದರು. 1960ರಲ್ಲಿ ಯು.ಕೆ.ಗೆ ಬಂದರು. ಇಲ್ಲಿ ವೀಡಿಂಗ್ ಯೂನಿವರ್ಸಿಟಿಯಲ್ಲಿ ಹಲವು ವರ್ಷಗಳ ತನಕ ಜಿಯೋಲೋಜಿಕಲ್ ಕೆಮಿಸ್ಟ್ರಿಯಲ್ಲಿ ಪ್ರೊಫೆಸರ್ ಆಗಿದ್ದರು. ಆರಂಭದಿಂದಲೇ ಇವರಿಗೆ ಯು.ಕೆ.ಜಮಾಅತಿನಲ್ಲಿ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸೌಭಾಗ್ಯ ಲಭಿಸಿತ್ತು. ನೇಶನಲ್ ಸೆಕ್ರಟರಿ ತಅ್‌ಲೀಮ್ ಮತ್ತು ತರ್‌ಬಿಯತ್ ಆಗಿ ನಿಶ್ಚಯಿಸಲ್ಪಟ್ಟರು. ದೀರ್ಘಕಾಲದ ವರೆಗೆ ಸೆಕ್ರಟರಿ ಉಮೂರೆ ಖಾರ್ಜ ಆಗಿದ್ದರು. ಜಮಾಅತಿನ ಇಂಟರ್‌ನೇಶನಲ್ ರಿಲೇಶನಿನ ವಿಭಾಗದಲ್ಲಿ ತುಂಬ ಕೆಲಸಮಾಡಿದ್ದರು. ಅಹ್ಮದಿಯರ ಸ್ಥಿತಿಗತಿಗಳ ಅವಲೋಕನ ನಡೆಸುವ ಹ್ಯೂಮನ್ ರೈಟ್ಸ್ ಕಮಿಟಿಯೊಂದಿಗೆ ಎರಡು ಬಾರಿ ಪಾಕಿಸ್ತಾನಕ್ಕೆ ಹೋಗಿ ರಿಪೋರ್ಟ್ ತಯಾರು ಮಾಡಲು ಸೌಭಾಗ್ಯ ಲಭಿಸಿತ್ತು. ಬಹಳ ದೊಡ್ಡದಾದ ಇಂಟರ್‌ನೇಶನಲ್ ಎಕ್ಸ್‌ಪೋ ಪ್ರತಿವರ್ಷ ಲೋಕದ ಹಲವು ದೇಶಗಳಲ್ಲಿ ನಡೆಸಲಾಗುತ್ತದೆ. ಮಲಿಕ್ ಸಾಹಿಬರಿಗೆ 1992ರಲ್ಲಿ ಯು.ಕೆ.ಮತ್ತು ಸ್ಪೇನಿನಲ್ಲಿ ಜಮಾಅತಿನ ಸ್ಟಾಲ್ ಹಾಕಲು ಮತ್ತು ಅದನ್ನು ಸಂಘಟಿಸಲು ಸಂದರ್ಭ ಸಿಕ್ಕಿತ್ತು. 1997ರಲ್ಲಿ ಜಾಮಿಅ ಅಹ್ಮದಿಯಾದ ಸ್ಥಾಪನೆಯ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ತಯಾರಿಸಿದ ಕಮಿಟಿಯಲ್ಲಿ ಸನ್ಮಾನ್ಯ ಸಲೀಂ ಸಾಹಿಬರನ್ನು ಸೇರಿಸಲಾಗಿತ್ತು. ಅದೇ ರೀತಿಯಲ್ಲಿ ಜಾಮಿಅ ಅಹ್ಮದಿಯಾ ಯು.ಕೆ.ಯ ಆರಂಭಕ್ಕೆ ಮುಂಚೆ ಮಾಡಲಾದ ಕಮಿಟಿಗಳಲ್ಲೂ ಇವರು ಭಾಗವಹಿಸುತ್ತಿದ್ದರು. ಜಾಮಿಅ ಅಹ್ಮದಿಯಾ ಯು.ಕೆ. ಆರಂಭವಾದ ನಂತರ ಅವರನ್ನು ಚೀಫ್ ಎಡ್‌ಮಿನಿಸ್ಟ್ರೇಟರ್ ಆಗಿ ನಿಶ್ಚಯಿಸಲಾಗಿತ್ತು. 13 ನವೆಂಬರ್, 2005ರ ತನಕ ಈ ಜವಾಬ್ದಾರಿಯನ್ನು ವಹಿಸಿದ್ದರು. ಜಾಮಿಅ ಅಹ್ಮದಿಯಾದ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮತ್ತು ಇತಿಹಾಸ ಕಲಿಸುವ ಸೌಭಾಗ್ಯ ಲಭಿಸಿತ್ತು. ದಿವಂಗತರು ಅತ್ಯಂತ ಧಾರ್ಮಿಕತೆ ಹೊಂದಿರುವ, ನಮಾಝ್ ಮತ್ತು ಉಪವಾಸಗಳನ್ನು ನಿಯತವಾಗಿ ನಿರ್ವಹಿಸುವ, ಜನರೊಡನೆ ಬಹಳ ಪ್ರೀತಿಯಿಂದ ಇರುವ, ಪ್ರಸನ್ನತೆಯಿಂದ ಮಾತನಾಡುವ, ತಬ್ಲೀಗ್ ಮಾಡುವ, ಅತಿಥಿ ಸತ್ಕಾರ ಮಾಡುವ, ಖಿಲಾಫತ್‌ನೊಂದಿಗೆ ಪ್ರೇಮವಿರುವ, ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧವಿರಿಸುವ ಹಿರಿಯ ವ್ಯಕ್ತಿಯಾಗಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೆ, ಮೂರು ಹೆಣ್ಮಕ್ಕಳನ್ನು ಮತ್ತು ಹಲವಾರು ಮೊಮ್ಮಕ್ಕಳನ್ನು ಅಗಲಿರುವರು. ಇವರ ಸೋದರಳಿಯರಾದ ಮಿಯಾಂ ಅಬ್ದುಲ್ ವಹ್ಹಾಬ್ ಸಾಹಿಬರು ಹೇಳುತ್ತಾರೆ: ಮಲಿಕ್ ಸಾಹಿಬರು ಹೇಳುತ್ತಿದ್ದರು – ಅವರು ಲಂಡನಗೆ ಬರುವಾಗ ಅವರ ತಂದೆಯವರಾದ ಅಝೀಝ್ ಅಹ್ಮದ್ ಸಾಹಿಬರು ರೋಗಿಯಾಗಿದ್ದರು. ಆಗಲೂ ಅವರ ತಂದೆ ಅವರಿಗೆ ಕೆಲವು ಉಪದೇಶಗಳನ್ನು ನೀಡಿದ್ದರು. ಒಂದನೆಯದಾಗಿ, ಜಮಾಅತಿನೊಂದಿಗಿರುವ ಸಂಬಂಧವನ್ನು ಎಂದೂ ಬಿಟ್ಟುಬಿಡಬೇಡ, ಲಂಡನಿಗೆ ಹೋಗುತ್ತಿರುವುದರಿಂದ ಅಲ್ಲಿಯ ರಂಗು ಮತ್ತು ಆಡಂಬರಕ್ಕೆ ಮೋಹಿತರಾಗಬಾರದು; ಎರಡನೆಯದಾಗಿ, ಚಂದಾವನ್ನು ಸಮಯಕ್ಕೆ ಸರಿಯಾಗಿ ಆದಾಯದ ಪ್ರಕಾರ ಪಾವತಿಸಬೇಕು. ಇದು ಆತ್ಮ ಸುಧಾರಣೆಗೆ ಆವಶ್ಯಕವಾದುದಾಗಿದೆ. ಮೂರನೇಯದಾಗಿ, ಯಾರಾದರೂ ನೆರವನ್ನು ಕೇಳಿದರೆ, ಎಷ್ಟೇ ಕಷ್ಟಬಂದರೂ, ಸಹಾಯ ಮಾಡದೇ ಇರಬೇಡ. ಹೀಗೆ ಅವರು ತಂದೆತಾಯರ ಉಪದೇಶಗಳನ್ನು ಸದಾ ಪಾಲಿಸುತ್ತಿದ್ದೆ.

ಅವರ ಸೋದರಳಿಯ ಹೇಳುತ್ತಾರೆ: ಮಲಿಕ್ ಸಾಹಿಬರು ಹೇಳಿಲ್ಲವಾದರೂ, ನನಗೆ ನಂತರ ಗೊತ್ತಾದ ಸಂಗತಿಯೇನೆಂದರೆ, ಒಂದು ಸಲ ಅವರೊಂದು ಸ್ನೇಹಿತರಿಗೆ ಸ್ವಲ್ಪ ಅಧಿಕ ಹಣದ ಆವಶ್ಯಕತೆಯಿತ್ತು. ಆಗ ಸಲೀಂ ಸಾಹಿಬರು ತನ್ನ ಮನೆಯನ್ನು ಮಾರಾಟಮಾಡಿ ಅವರ ಆವಶ್ಯಕತೆಯನ್ನು ಈಡೇರಿಸಿದರು. ಹೇಗಿದ್ದರೂ ಅಲ್ಲಾಹನು ಅವರನ್ನು ಅನುಗ್ರಹಿಸಿದನು. ಅದಕ್ಕಿಂತ ದೊಡ್ಡ ಮನೆ ಅವರಿಗೆ ಲಭಿಸಿತು. ಅರಿವಿನ ವಿಷಯದಲ್ಲಾದರೆ, ಬಹಳ ಅರಿವುಳ್ಳ ವ್ಯಕ್ತಿಯಾಗಿದ್ದರು. ನಾನು ಮೊದಲ ಬಾರಿಗೆ ಇವರನ್ನು ಭೇಟಿಯಾದಾಗ, ಪರಿಚಯವಿಲ್ಲದ ಕಾರಣದಿಂದ ಒಬ್ಬ ಸಾಧಾರಣ ಅಹ್ಮದಿಯೆಂದು ಭಾವಿಸಿದ್ದೆ. ಇಂಗ್ಲಿಷ್ ಕಲಿಸುವುದರಿಂದ ಇಂಗ್ಲಿಷ್ ಉತ್ತಮವಿರಬಹುದು ಎಂದಷ್ಟೇ ಭಾವಿಸಿದ್ದೆ. ಆದರೆ ಅವರು ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಬಹಳ ಮುಂದಿದ್ದರು ಎಂದು ನಂತರ ನನಗೆ ಗೊತ್ತಾಯಿತು. ಯಾವಾಗಲೂ ಜಮಾಅತಿನ ಸೇವೆಗಾಗಿ ತಯಾರಿರುತ್ತಿದ್ದರು. ಅವರಿಗೆ ಖಿಲಾಫತ್‌ನೊಂದಿಗೆ ಬಹಳ ಹೆಚ್ಚಿನ ಸಂಬಂಧ ಮತ್ತು ವಿಶ್ವಾಸವಿತ್ತು. ಅರಿವಿನ ವಿಷಯದಲ್ಲಿ, ಚಲಿಸುವ ಎನ್ಸೈಕ್ಲೋಪಿಡಿಯಾ ಆಗಿದ್ದರು. ಪ್ರತಿ ವಿಷಯದಲ್ಲಿ, ವಿಶೇಷವಾಗಿ ಇತಿಹಾಸದಲ್ಲಿ ನೈಪುಣ್ಯವಿತ್ತು. ಅದೇ ರೀತಿಯಲ್ಲಿ ಇಂಗ್ಲಿಷ್ ಮತ್ತು ಉರ್ದು ಸಾಹಿತ್ಯಗಳಲ್ಲಿ ತುಂಬ ಆಸಕ್ತಿಯಿತ್ತು. ಆದರೆ, ತನ್ನ ಅರಿವಿನ ಪ್ರದರ್ಶನ ಎಂದೂ ಮಾಡುತ್ತಿರಲಿಲ್ಲ. ಧಾರ್ಮಿಕ ಮತ್ತು ಭೌತಿಕ ಅರಿವನ್ನು ವರ್ಧಿಸಲು ಇತರರನ್ನು ಹುರಿದುಂಬಿಸುತ್ತಿದ್ದರು. ರಾಜಕೀಯ, ಶೈಕ್ಷಣಿಕ ಮತ್ತು ಪಾಕಿಸ್ತಾನದ ಕಮ್ಯೂನಿಟಿಯಲ್ಲೂ ಅವರಿಗೆ ವಿಶಾಲವಾದ ಸಂಬಂಧಗಳು ಇದ್ದುವು. ಆ ಸಂಪರ್ಕಗಳನ್ನು ಅವರು ಜಮಾಅತಿನ ಹಿತಕ್ಕಾಗಿ ಉಪಯೋಗಿಸಿದ್ದರು. ಸಲೀಂ ಸಾಹಿಬರು ಉಮೂರೇ ಖಾರ್ಜ ಸೆಕ್ರಟರಿಯಾಗಿದ್ದಾಗ, ಲಾರ್ಡ್ ಯಬ್ರಿಯೊಂದಿಗೆ ದೃಢವಾದ ಸಂಬಂಧವಿರಿಸಿದ್ದರು. ಸಲೀಂ ಸಾಹಿಬರ ಮೂಲಕವೇ ಲಾರ್ಡ್ ಯಬ್‌ರಿಗೆ ಜಮಾಅತಿನೊಂದಿಗೆ ಸಂಬಂಧವುಂಟಾಗಿತ್ತು. ಅದೇ ರೀತಿಯಲ್ಲಿ ನನ್ನ ಪಾರ್ಲಿಮೆಂಟ್ ಹೌಸಿನಲ್ಲಿ ನನ್ನ ಮೊದಲ ಭೇಟಿಗೆ ಸಂಬಂಧಿಸಿಯೂ ಸಲೀಂ ಸಾಹಿಬರ ಹಿರಿದಾದ ಪಾತ್ರವಿತ್ತು. ಅರ್ಜಂಟೈನಿನ ಮುರಬ್ಬಿ ಸಾಹಿಬರಾದ ಮರ್‌ವಾನ್ ಸರ್‌ವರ್ ಗುಲ್ ಸಾಹಿಬರು ಹೇಳುತ್ತಾರೆ. ಜ್ಞಾನಿಯಾದ ವ್ಯಕ್ತಿಯಾದ ಕಾರಣದಿಂದ ಜಾಮಿಅದ ಎಲ್ಲ ವಿದ್ಯಾರ್ಥಿಗಳಿಗೆ ಅವರ ಮೇಲೆ ವಿಶೇಷವಾದೊಂದು ಗೌರವಭಾವವಿತ್ತು. ನನಗೂ ಇತ್ತು. ಜಾಮಿಅದಿಂದ ತೇರ್ಗಡೆಯಾದ ನಂತರ ವೈಯಕ್ತಿಕವಾದ ಒಂದು ಸಂಬಂಧವನ್ನು ನನ್ನೊಡನೆ ಇರಿಸಿದ್ದರು. ಅರ್ಜಂಟೈನನಲ್ಲಿ ನನ್ನ ಪೋಸ್ಟಿಂಗ್ ಆದಾಗ ಬಹಳ ಸಂತೋಷಗೊಂಡರು. ನನ್ನೊಡನೆ ಹೇಳುತ್ತಿದ್ದರು: ನೀನು ಅರ್ಜಂಟೈನಿನ ಮೊದಲ ಮುಬಲ್ಲಿಗ್ ಆಗಿರುವ ಕಾರಣ ಬಹಳ ಹೆಚ್ಚು ಕೆಲಸಮಾಡುವ ಆವಶ್ಯಕತೆಯಿದೆ. ಜಮಾಅತಿನ ಹೆಸರನ್ನು ಬೆಳಗಿಸಬೇಕು, ತಬ್ಲೀಗ್ ಸರಿಯಾಗಿ ಮಾಡಬೇಕು ಮತ್ತು ಅಲ್ಲಿಯ ಭಾಷೆಯನ್ನು ಕಲಿಯಬೇಕು. ಅಲ್ಲಿಯ ಪತ್ರಿಕೆಯಲ್ಲಿ ನಿನ್ನ ಲೇಖನಗಳು ಬರುವ ರೀತಿಯಲ್ಲಿ ನಿನ್ನ ಭಾಷೆಯನ್ನು ಉತ್ತಮಗೊಳಿಸು.' ಇದು ಅವರೊಂದು ಹಿರಿದಾದ ಅಭಿಲಾಷೆಯಾಗಿತ್ತು.ಅದೇ ರೀತಿಯಲ್ಲಿ ತಮ್ಮ ವಿದ್ಯಾರ್ಥಿಗಳ ಸತ್ಕಾರಗಳನ್ನು ಮನೆಯಲ್ಲಿ ಮಾಡುತ್ತಿದ್ದರು. ಅನಂತರ ತನ್ನ ಲೈಬ್ರರಿಗೆ ಕೊಂಡುಹೋಗುತ್ತಿದ್ದರು. ಅವರಿಗೆ ಸ್ವಂತವಾದ ಒಂದು ಲೈಬ್ರರಿಯಿತ್ತು ಎಂದು ಹಲವು ವಿದ್ಯಾರ್ಥಿಗಳು ಮತ್ತು ಮುರಬ್ಬಿಯರು ಬರೆದಿರುವರು. ತಮಗೆ ಇಷ್ಟವುಳ್ಳ ಒಂದು ಪುಸ್ತಕವನ್ನು ಕೊಂಡು ಹೋಗಿರಿ, ಇದೇ ನಿಮಗಿರುವ ಕೊಡುಗೆ ಎಂದು ಮನೆಗೆ ಬಂದ ವಿದ್ಯಾರ್ಥಿಗಳೊಡನೆ ಹೇಳುತ್ತಿದ್ದರು. ಜಾಮಿಅ ಅಹ್ಮದಿಯಾ ಒಂದು ಅಸಾಮಾನ್ಯವಾದ ಒಂದು ಸ್ಥಾಪನೆಯಾಗಿದೆ, ಅದರ ಮೇಲೆ ಖಲೀಫತುಲ್ ಮಸೀಹರಿಗೆ ಬಹಳ ಪ್ರತೀಕ್ಷೆಯಿದೆ. ಆದ್ದರಿಂದ ಈ ಸಂಸ್ಥೆಯೊಂದಿಗೆ ಸಂಬಂಧವಿರುವ ವಖ್‌ಫೆ ಝಿಂದಗಿಯರು ಅಸಾಧಾರಣವಾದ ಜ್ಞಾನದ ಮಟ್ಟವನ್ನು ಗಳಿಸಬೇಕೆಂದು ಹೇಳುತ್ತಿದ್ದರು. ಸ್ಪೇನಿಶ್ ಭಾಷೆಯಲ್ಲಿ ಲೇಖನ ಪ್ರಕಟವಾಗುವ ರೀತಿಯಲ್ಲಿ ಭಾಷೆಯಲ್ಲಿ ಪ್ರಾವೀಣ್ಯ ಪಡೆಯಬೇಕೆಂದು ಅರ್ಜಂಟೈನ್‌ಗೆ ಹೋಗುವುದಕ್ಕೆ ಮುಂಚೆ ಉಪದೇಶಿಸಿದ್ದರು. ಅವರಿಗೆ ಪತ್ರ ಬರೆಯುತ್ತಿರಲು ಹೇಳುತ್ತಿದ್ದರು. ಪತ್ರ ಬರೆಯುವುದರಲ್ಲಿ ನಾನು ಎಂದಾದರೂ ಮಡಿವಂತಿಕೆ ತೋರಿಸಿದರೆ, ಅವರು ಸ್ವತಃ ನನಗೆ ಪತ್ರ ಬರೆಯುತ್ತಿದ್ದರು ಮತ್ತು ಸಂಪರ್ಕವನ್ನು ಸ್ಥಾಪಿಸುತ್ತಿದ್ದರು.

ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.ಅವರ ಸಂಬಂಧಿಕರಿಗೂ ಮಕ್ಕಳಿಗೂ ಸಂತಾನ ಪರಂಪರೆಗೂ ಇದೇ ರೀತಿಯಲ್ಲಿ ನಿಷ್ಠೆಯಿಂದ ಖಿಲಾಫತ್ ಮತ್ತು ಜಮಾಅತಿನೊಂದಿಗೆ ಸಂಬಂಧವಿರಿಸಲು ಸೌಭಾಗ್ಯ ನೀಡಲಿ.

********************

### ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

***(ಕಿಶ್ತೀ ನೂಹ್; ರೂಹಾನೀ ಖಝಾಇನ್ ಸಂಪುಟ 19, ಪುಟ 21 – 22)***

ಹೆಸರುಗಳೇನಾಗಿದ್ದವು ಯಾವ ನಗರದ ನಿವಾಸಿಯಾಗಿದ್ದರು ಮತ್ತು ಯಾವ ವಯಸ್ಸಿನಲ್ಲಿ ದೇವವಾಣಿ ಪಡೆದಿದ್ದರು. ಅವರು ದೇವವಾಣಿ ಪಡೆದ ಸಾಕ್ಷ್ಯವೇನು. ವೇದಗಳಲ್ಲಂತೂ ಎಲ್ಲೂ ಬರೆಯಲಾಗಿಲ್ಲ. ವಾಸ್ತವದಲ್ಲಿ ಇಂತಹ ನಾಲ್ಕು ಜನರು ಯಾವ ಪ್ರಾಥಮಿಕ ಕಾಲದಲ್ಲಿ ಜೀವಿಸಿದ್ದರು, ಮತ್ತು ಅವರ ಮೇಲೆ ವೇದ ಅವತರಿಸಿದೆ ಎಂದು ಬರೆಯಲಾಗಿದ್ದಾರೆ ಆರ್ಯರ ಕರ್ತವ್ಯವಾಗಿದೆ, ವೇದದನ್ವಯ ಅವರು ದೇವವಾಣಿ ಪಡೆದದ್ದು ಮತ್ತು ಅವರ ಜೀವನ ಚರಿತ್ರೆ ಯಾವುದಾದರು ಪತ್ರಿಕೆಯಲ್ಲಿ ಪ್ರಕಟಿಸಬೇಕು. (ಅದೇ ಪುಟ-283)

ವೇದ ಋಷಿಗಳ ಲೋಕ ಸುಧಾರಣೆಗಾಗಿ ನಿಯುಕ್ತಿಗೊಂಡಿದ್ದರು ಎಂದು ಸಾಬೀತು ಪಡಿಸಬೇಕು.

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ವೇದ ಋಷಿಗಳು ಎಲ್ಲ ದೇಶಗಳ ಸುಧಾರಣೆಗಾಗಿ ನಿಯುಕ್ತಗೊಂಡಿದ್ದರು ಎಂಬುದು ಕೇವಲ ಮೌಖಿಕವಾಗಿದೆ. ಇಂತಹದೇನಾದರು ಇರುತ್ತಿದ್ದರೆ ವೇದದಲ್ಲಿ ಅವಶ್ಯವಾಗಿ ಬರೆಯಲಾಗುತ್ತಿತ್ತು- ಅವರು ತನ್ನ ಆರ್ಯ ವೃತ್ತದ ನಾಲ್ಕು ಗೋಡೆಗಳನ್ನು ದಾಟಿ ಯಾವ ಯಾವ ದೂರದ ದೇಶಗಳಿಗೆ ಹೋಗಿ ಪ್ರಚಾರ, ಉಪದೇಶ ಮಾಡುತ್ತಿದ್ದರು ಎಂದು. ಅದರ ಅಧ್ಯಾಯನದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ ಪರಮೇಶ್ವರನ ಅಸ್ತಿತ್ವ ಎಲ್ಲ ಆಸ್ತಿಗಳು ಭಾರತ ಅಂದರೆ ಆರ್ಯ ದೇಶವೇ ಆಗಿದೆ. ನೀವೇನಾದರು ನಮ್ಮ ಮಾತುಗಳು ಸತ್ಯವಲ್ಲವೆಂದು ಭಾವಿಸಿದರೆ ವೇದಗಳ ಮೂಲಕ ಸಾಬೀತು ಗೊಳಿಸಬೇಕು- ವೇದದ ಯಾವ ಋಷಿಯು ಆರ್ಯವೇದದಿಂದ ಹೊರಗೆ ಪಾದರ್ಪಣೆ ಮಾಡಿ ವೇದಗಳನ್ನು ನಮ್ಮ ಬಗಲುಗಳಲ್ಲಿ ಇಡ್ಡುಕೊಂಡು ಇತರ ದೇಶಗಳಿಗೆ ಪ್ರಯಾಣ ಬೆಳೆಸಿದ್ದರು. ಇದು ಖಂಡಿತವಾಗಿ ಸಾಬೀತುಪಡಿಸಲು ಸಾಧ್ಯವಿಲ್ಲ. ಪಂಡಿತ್ ದಯಾನಂದರಿಗೂ ಸಾಬೀತುಗೊಳಿಸಲಾಗಲಿಲ್ಲ. (ಅದೇ ಪುಟ-285-287)

ಇವೆಲ್ಲ ಸಾಕ್ಷ್ಯಗಳನ್ನು ನಾವು ಇಲ್ಲಿ ಸಂಕ್ಷಿಪ್ತ ರೂಪದಲ್ಲಿ ವಿವರಿಸಿದ್ದೇವೆ. ಕೊನೆಯಲ್ಲಿ ನಾವು "ಸುರ್ಮ ಚಶ್ಮ ಆರ್ಯ" ಗ್ರಂಥದ ಮಹತ್ವ ವಿವರಿಸಿ ತಮ್ಮ ಈ ವಿಷಯವನ್ನು ಕೊನೆಗಾಣಿಸುತ್ತೇವೆ.

**ಸುರ್ಮ ಚಶ್ಮ ಆರ್ಯದ ಮಹಾನತೆ**

ಓದುಗರಿಗೆ ತಿಳಿಯಪಡಿಸುತ್ತೇನೆ "ಸುರ್ಮ ಚಶ್ಮ ಆರ್ಯ"ದ ಉತ್ತರ ನೀಡಲು ಯಾರಿಂದಲೂ ಸಾಧ್ಯವಾಗಲಿಲ್ಲ. ಹೌದು ತಮ್ಮ ಕೋಪ ತಾಪ ಪರಿಗಣಿಸಲು ಸುಳ್ಳು ವಿಧ್ಯಮಾನಗಳಿಂದ ತುಂಬಿದ ಒಂದು ಪತ್ರಿಕೆ ಖಾದಿಯಾನ್‌ನ ಹಿಂದುಗಳು ಲೇಖರಾಮ್ ಪೇಶಾವರಿಯ ಸಹಾಯದಿಂದ ಪ್ರಕಟಿಸಿದರು- ಅದರ ಹೆಸರು ಅವರು- "ಸುರ್ಮ ಚಶ್ಮ ಆರ್ಯದ ವಾಸ್ತವ ಮತ್ತು ಭಲಗಾರ ಗುಲಾಮ್ ಅಹ್ಮದ್‌ನ ಸ್ಥಿತಿ" ಎಂದು ಇಟ್ಟರು. ಈ ಪತ್ರಿಕೆಯ ಉತ್ತರವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ "ಶಹ್‌ನ ಹಖ್" ಗ್ರಂಥ ರಚಿಸಿದರು. ಅವರು ಎಲ್ಲಾ ಆರೋಪಗಳಿಗೆ ಉತ್ತರ ನೀಡಿದರು. ಅದರಲ್ಲಿ ಅವರ ಒಂದು ಆರೋಪ ಇದಾಗಿತ್ತು- "ಮಿರ್ಝಾ ನಮ್ಮ ಗ್ರಂಥದ ಬಗ್ಗೆ ಏನೂ ತಿಳಿದಿರುವುದಿಲ್ಲ" ಅದರ ಉತ್ತರ ಬಹು ರೋಚಕವಾಗಿದೆ- ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ಅದು ಅಧ್ಯಾಯ ಯೋಗ್ಯವಾಗಿದೆ- "ಇದರಿಂದ ಸುರ್ಮ ಚಶ್ಮ ಆರ್ಯದ ಮಹಾನತೆಯು ಸ್ಪಷ್ಟವಾಗುತ್ತದೆ. ಅವರು ಹೇಳಿದರು: ನೀವು ಹೇಳಿದ ಹಾಗೆ ನಾನು ವೇದಗಳ ಕುರಿತು ಏನೂ ತಿಳಿಯದವನಾದರೆ ನನ್ನ ಮುಂದೆ ಕ್ಷಣ ಮಾತ್ರಕ್ಕೆ ನೀವು ಏಕೆ ನಿಲ್ಲುವುದಿಲ್ಲ, ಹದ್ದುಗಳಿಗೆ ಹೆದರಿ ಹಕ್ಕಿ ಓಡಿ ಹೋಗಿ ಇಲಿಯ ಬಿಲ ಸೇರಿದಂತೆ ಸೇರಿಕೊಳ್ಳುತ್ತಿರಿ ಮತ್ತು ಏಕೆ ಅಲ್ಲಿ ಇಲ್ಲಿ ಅಡಗಿ ಕುಳಿತು ಕೊಳ್ಳುತ್ತೀರಿ, ಓಡಾಡುತ್ತೀರಿ ಇದರ ಕಾರಣವಾದರೂ ಏನು? ಸುರ್ಮ ಚಶ್ಮ ಆರ್ಯ ನಿಮ್ಮ ಧರ್ಮದ ಬಗ್ಗೆ ಏನಾದರೂ ಬಾಕಿ ಬಿಟ್ಟಿದ್ದೇಯೇ? ನಿಮ್ಮ ಸರಿಯಾದ ಸ್ಥಾನ ತೋರಿಸಲು ಏನಾದರೂ ಕೊರತೆಯಾಗಿದೆಯೇ? ಆದುದರಿಂದ ಇದರಿಂದ ತಿಳಿದುಕೊಳ್ಳಿ ನಾವು ನಿಮ್ಮ ಮನೆಯ ಭೇದ ಅರಿಯದವರಾಗಿರುತ್ತಿದ್ದರೆ. ವೇದದಲ್ಲಿ ಅಡಗಿರುವ ನ್ಯೂನ್ಯತೆಗಳನ್ನು ಹೊರಹಾಕಲು ಹೇಗೆ ಸಾಧ್ಯವಾಯಿತು. ಒಂದು ವೇಳೆ ನಾವು ಪೂರ್ಣ ರೀತಿಯಲ್ಲಿ ತಿಳಿದವರು ಆಗಿರಲಿಲ್ಲವಾದರೆ ವೇದಗಳ ಅಧ್ಯಾಯಗಳನೆಲ್ಲ ಬರಾಹೀನೆ ಅಹ್ಮದೀಯದಲ್ಲಿ ಬರೆಯಲು ಹೇಗೆ ಸಾಧ್ಯವಾಯಿತು ಮತ್ತು ಸುರ್ಮ ಚಶ್ಮ ಆರ್ಯ ಮೂಲಕ ನಿಮಗೆ ಗಾಯಗೊಳಿಸಲು ಸಾಧ್ಯವಾಯಿತು, ಇಲ್ಲಿಯವೆಗೂ ನಿಮ್ಮಿಂದ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಈಗ ಆರು ತಿಂಗಳ ನಂತರ ಉತ್ತರ ಹೀಗೆ ಬಂದರೆ ಅದರಲ್ಲಿ ಅಶ್ಲೀಲ ಭಾಷೆ ಮತ್ತು ಮಿಥ್ಯ ವಿವರಣೆಯ ಹೊರತು ಮಣ್ಣೂ ಇಲ್ಲ. ನಿರೀಕ್ಷೆ ಮಾಡುತ್ತಾ ಮಾಡುತ್ತ ನಾವು ಆಯಾಸಗೊಂಡಿದ್ದೇವೆ- ಯಾವ ಸೂಕ್ಷ್ಮವಾದ ಮತ್ತು ಅರ್ಥಗರ್ಭಿತವಾದ ಉತ್ತರ ಬಂದೀತು ಎಂದು ಕೊನೆಗೂ ನಿಮ್ಮ ಪಾತ್ರೆಯಿಂದ ಒಂದು ನೊಣ ಮಾತ್ರ ಹೊರಬಂದಿದೆ. ಉತ್ತರ ನೀಡುವುದು ರದ್ದು ಬರೆಯುವ ಕ್ರಮ ಇದೇ ಆಗಿದೆಯೇ? ನ್ಯಾಯಯುತವಾದ ಯಾವ ಹಿಂದುವೇ ಸರಿ ನಿಮ್ಮ ಪತ್ರಿಕೆ ಓದಿ ನೋಡಲಿ ಮತ್ತು ಪ್ರಮಾಣ ಮಾಡಿ ಹೇಳಲಿ- "ನಮ್ಮ ಪತ್ರಿಕೆ ಸುರ್ಮ ಚಶ್ಮ ಆರ್ಯದ ಒಂದು ಸೊನ್ನೆ ಅಥವಾ ಅಕ್ಷರವಾದರೂ ನಿಮ್ಮ ಈ ತ್ಯಾಜ್ಯದಿಂದ ಪ್ರಭಾವಿತವಾಗಿದೆ ಎಂದು, ಮತ್ತು ನನಗೆ ಸಂಸ್ಕೃತ ಭಾಷೆ ತಿಳಿದಿಲ್ಲ ಎಂಬ ಮಾತಿಗೆ ನಾನು ಹೇಳಬಯಸುತ್ತೇನೆ- ಇಷ್ಟೆಲ್ಲಾ ವಿಶಾಲ ಮಾಹಿತಿ ಮತ್ತು ಗ್ರಂಥಗಳು ನಿಮ್ಮ ಬಳಿ ಇರುವಾಗ ವೇದ ಮತ್ತು ವೇದ ಭಾಷೆ ಹಾಗೂ ದಯಾನಂದ್ ಸತ್ಯಾರ್ಥ ಪ್ರಕಾಶ ಮುಂತಾದವರ ಗ್ರಂಥಗಳು ನಿಮ್ಮ ಕವಾಟುಗಳು ತುಂಬಿವೆ ಮತ್ತು ಮುಖಾಮುಖಿ ಚರ್ಚೆಯಲ್ಲಿಲ್ಲವೇ? ಇಷ್ಟೆಲ್ಲಾ ವಿಶಾಲ ಮಾಹಿತಿ ನಮಗಿರುವಾಗ ಸಂಸ್ಕೃತ ಒಂದು ಬಾರದಿದ್ದರೆ ಏನಾಯಿತು. ಸ್ವಯಂ ಅಷ್ಟೊಂದು ಮಾಹಿತಿಗಳು ಕಲೆ ಹಾಕಿರುವಾಗ ನಿಮ್ಮ ಹಾಗೆ ಭಾಷೆ ಅವಶ್ಯಕತೆಯಾದರೂ ಏನಿದೆ." (ಶಹ್‌ನ ಹಖ್, ರೂಹಾನಿ ಖಝಾಇನ್ ಸಂಪುಟ-2, ಪುಟ-342-344)

ಮುಂದೆ ಇನ್‌ಶಾಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಇನ್ನೊಂದು ಬಹುಮಾನದ ಪಂಥಾಹ್ವಾನವನ್ನು ಓದುಗರ ಸೇವೆಯಲ್ಲಿ ಪ್ರಸ್ತುತ ಪಡಿಸುವೆವು. **(ಮನ್‌ಸೂರ್ ಅಹ್ಮದ್ ಮಸ್‌ರೂರ್)**

---

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅವರು ಡಂಗುರ ಹೊರಡಿಸಿದರು ಯಾರು ಮನೆಗಳನ್ನು ಬಂದ್ ಮಾಡುವವರೋ ಅಥವಾ ಅವರ ಮಾರ್ಗ ತಡೆಹಿಡಿಯುವವರೋ ಆತನ ಜಿಹಾದ್ ಜಿಹಾದ್ ಆಗಿರುವುದಿಲ್ಲ. ಒಟ್ಟಿನಲ್ಲಿ ಇಸ್ಲಾಮ್ ಉಪದೇಶ ನೀಡುತ್ತದೆ. ನಿಮಗೆ ಯುದ್ಧದಲ್ಲಿ ಮಹಿಳೆಯರ ಹತ್ಯೆ ಮಾಡುವ ಅನುಮತಿ ಇಲ್ಲ, ಮಕ್ಕಳನ್ನು ಹತ್ಯೆ ಮಾಡಲು ಅನುಮತಿಯಿಲ್ಲ, ವೃದ್ಧರ ಹತ್ಯೆ ಮಾಡುವ ಅನುಮತಿ ಇಲ್ಲ. ನಿಮಗೆ ವಚನ ದ್ರೋಹ ಮಾಡುವ ಅನುಮತಿ ಇಲ್ಲ. ನಿಮಗೆ ವಂಚನೆ ಮಾಡುವ ಅನುಮತಿ ಇಲ್ಲ. ನಿಮಗೆ ಮೃತರ ಕಿವಿ ಮೂಗು ಕತ್ತರಿಸುವ ಅನುಮತಿ ಇಲ್ಲ. ನಿಮಗೆ ಪಾದರಿಗಳಿಗೆ ಮತ್ತು ಪಂಡಿತರಿಗೆ ಹಾಗೂ ಜ್ಞಾನಿಗಳಿಗೆ ಹತ್ಯೆ ಮಾಡುವ ಅನುಮತಿ ಇಲ್ಲ. ನಿಮಗೆ ಯಾವುದೇ ಉದ್ಯಾನವನ ಮತ್ತು ವೃಕ್ಷಗಳಿಗೆ ಕೊಯ್ದು ಹಾಕುವ ಅನುಮತಿ ಇಲ್ಲ. ನಿಮಗೆ ಯಾವುದೇ ಕಟ್ಟಡ ಧ್ವಂಸಗೊಳಿಸುವ ಅಥವಾ ಬೆಂಕಿ ಹಚ್ಚುವ ಅನುಮತಿ ಇಲ್ಲ. ಎಂದಾದರೂ ಈ ನಿರ್ದೇಶನಗಳಿಗೆ ಅಡ್ಡಿ ಬಂದರೆ ರಸೂಲುಲ್ಲಾಹ್(ಸ) ತುಂಬ ಅಸಂತುಷ್ಟಿ ವ್ಯಕ್ತಪಡಿಸುತ್ತಿದ್ದರು. ಅರಬರ ಕಾನೂನಿನ ಪ್ರಕಾರ ಮಹಿಳೆಯರು ಸಹ ಯುದ್ಧಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರು ಇತರರನ್ನು ಹತ್ಯೆ ಮಾಡುತ್ತಿದ್ದರು. ಅನಿವಾರ್ಯವಾಗಿ ಅವರೂ ಹತ್ಯೆಗೆ ಒಳಗಾಗುತ್ತಿದ್ದರು. ಆದರೆ ಒಂದು ಸಂದರ್ಭದಲ್ಲಿ ಒಂದು ಯುದ್ಧದ ನಂತರ ಓರ್ವ ಮಹಿಳೆಯ ಶವವನ್ನು ಕಂಡರು. ಅವರಿಗೆ ತುಂಬ ಖೇದ ಉಂಟಾಯಿತು. ಅವರು ಹೇಳಿದರು. ಇಸ್ಲಾಮ್ ಅದನ್ನು ಇಷ್ಟಪಡುವುದಿಲ್ಲ. ಈ ಕೃತ್ಯ ಇಸ್ಲಾಮಿ ಶಿಕ್ಷಣಕ್ಕೆ ವಿರುದ್ಧವಾಗಿದೆ. (ಬುಖಾರಿ, ಸಂಪುಟ 2, ಕಿತಾಬುಲ್ ಜಿಹಾದ್ ವಸ್ಸೈರ್). ಉಹುದ್ ಯುದ್ಧದಲ್ಲಿ ರಸೂಲುಲ್ಲಾಹ್(ಸ) ಒಂದು ಖಡ್ಗ ತೆಗೆದು ಹೇಳಿದರು. ಈ ಖಡ್ಗ ನಾನು ಆ ವ್ಯಕ್ತಿಗೆ ನೀಡುವೆನು. ಯಾರು ಅದರ ಹಕ್ಕುಗಳನ್ನು ಪಾಲಿಸಲು ವಚನ ಬದ್ಧನಾಗಿರುವನು. ಹಲವು ಜನರು ಆ ಖಡ್ಗವನ್ನು ತೆಗೆದುಕೊಳ್ಳಲು ಮುಂದಾದರು. ಅವರು ಆ ಖಡ್ಗ ಅಬೂದಜಾನ ಅನ್ಸಾರಿ(ರ) ಅವರಿಗೆ ನೀಡಿದರು. ಯುದ್ಧದಲ್ಲಿ ಮಕ್ಕಾ ಕಡೆಯ ಕೆಲವು ಸಿಪಾಯಿಗಳು ಅಬೂದಜಾನ ಮೇಲೆ ಆಕ್ರಮಣ ಎಸಗಿದರು. ಅವರು ಅವರೊಡನೆ ಯುದ್ಧ ಮಾಡುತ್ತಿರುವಾಗ ಕಂಡರು. ಒಬ್ಬರು ತುಂಬ ಉತ್ಸಾಹದಿಂದ ಯುದ್ಧದಲ್ಲಿ ಮುನ್ನುಗ್ಗುತ್ತಿದ್ದಾನೆ. ಅವರು ಖಡ್ಗ ಎತ್ತಿ ಅವನ ಬಳಿಗೆ ಧಾವಿಸಿದರು. ಆದರೆ ಅವನನ್ನು ಬಿಟ್ಟು ಮತ್ತೆ ಮರಳಿ ಬಂದರು ಅವರ ಮಿತ್ರರೊಬ್ಬರು ಕೇಳಿದರು. ನೀವು ಅವನನ್ನು ಏಕೆ ಬಿಟ್ಟುಬಿಡಿ, ಅವರು ಉತ್ತರ ನೀಡಿದರು. ನಾನು ಅವನ ಹತ್ತಿರ ಹೋದಾಗ ಅವನ ಬಾಯಿಯಿಂದ ಒಂದು ಇಂತಹ ಪದ ಹೊರಟಿತು. ಅದರಿಂದ ಅವನು ಪುರುಷನಲ್ಲ. ಸ್ತ್ರೀ ಎಂದು ತಿಳಿಯಿತು. ಅವರ ಮಿತ್ರರು ಹೇಳಿದರು. ಅವರು ಒಬ್ಬ ಸಿಪಾಯಿ ಯಂತೆಯೇ ಸೈನ್ಯರಲ್ಲಿ ಹೋರಾಡುತ್ತಿದ್ದಳಲ್ಲ! ಆದರೂ ಏಕೆ ಬಿಟ್ಟಿರಿ? ಅಬೂ ಜದಾನ(ರ) ಹೇಳಿದರು. ನಾನು ರಸೂಲುಲ್ಲಾಹ್(ಸ) ನೀಡಿದ ಈ ಖಡ್ಗ ಒಬ್ಬ ದುರ್ಬಲ ಹೆಣ್ಣಿನ ಮೇಲೆ ಪ್ರಯೋಗಿಸಲು ಒಪ್ಪಲಿಲ್ಲ. ರಸೂಲುಲ್ಲಾಹ್(ಸ) ಯಾವಾಗಲೂ ಮಹಿಳೆಯರನ್ನು ಗೌರವಿಸುವ ಶಿಕ್ಷಣ ನೀಡುತ್ತಿದ್ದರು.

ಆ ಕಾರಣದಿಂದ ಅವಿಶ್ವಾಸಿ ಮಹಿಳೆಯರು ಮುಸಲ್ಮಾನರನ್ನು ಹಾನಿ ಎಸಗಲು ಪ್ರಯತ್ನಪಡುತ್ತಿದ್ದರು. ಆದರೂ ಸಹ ಮುಸಲ್ಮಾನರು ಸಹಿಸಿಕೊಳ್ಳುತ್ತಿದ್ದರು. ಕೇವಲ ಒಂದೇ ಒಂದು ಮಹಿಳೆ, ಪ್ರಾರಂಭದಿಂದ ಕೊನೆಯವರೆಗೆ ಇಸ್ಲಾಮಿನ ವಿರುದ್ಧ ಯುದ್ಧಗಳಲ್ಲಿ ಪಾಲ್ಗೊಂಡಿದ್ದಳು. ಮತ್ತು ಮುಸ್ಲಿಮ್ ವಿರುದ್ಧ ಯುದ್ಧಗಳಲ್ಲಿ ಪಾಲ್ಗೊಂಡಿದ್ದಳು. ಮತ್ತು ಮುಸ್ಲಿಮ್ ಹುತಾತ್ಮರ ಕಿವಿ ಮೂಗು ಕತ್ತರಿಸುವುದರಲ್ಲಿ ಖ್ಯಾತಿ ಪಡೆದಿದ್ದಳು ಅವಳು "ಹಿಂದಾ" ಆಗಿದ್ದಳು. ಆದರೂ ಅವಳು ಇನ್ನುಳಿದ ಮಹಿಳೆಯವರೊಂದಿಗೆ ಸೇರಿ ಬಂದಳು ಮತ್ತು ಇಸ್ಲಾಮ್ ಸ್ವೀಕರಿಸಿದಳು. ಆಗ ಅವಳನ್ನು ಸಹ ಕ್ಷಮಿಸಲಾಯಿತು. ಏಕೆಂದರೆ ಅವರು

ಹೇಳಿದರು. ಪಶ್ಚತ್ತಾಪವು ಅವಳ ಎಲ್ಲ ಪಾಪಗಳನ್ನು ತೊಡೆದು ಹಾಕಿತು." (ತಫ್ಸೀರ್ ಕಬೀರ್ ಸಂಪುಟ 2, 41, 422)

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಸಮಾರಂಭದಲ್ಲಿ ಅತಿಥಿಗಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಖಲೀಫರು ತಮ್ಮ ಭಾಷಣದಲ್ಲಿ ಹೇಳಿದರು. ಅದರಿಂದ ತಿಳಿದು ಬರುವುದೇನೆಂದರೆ ಇಲ್ಲಿಯ ಜನರು ವಿಶಾಲ ಹೃದಯಿಗಳಾಗಿದ್ದಾರೆ ಮತ್ತು ನಮಗೆ ಇಲ್ಲಿ ಶುಭ ಕೋರುತ್ತಿದ್ದಾರೆ. ಅಲ್ಲಿ ಒಂದು ಬ್ಯಾನರಿನ ಮೇಲೆ ಬರೆಯಲಾಗಿತ್ತು. "ತನ್ನ ದೇಶದೊಡನೆ ಪ್ರೀತಿಯು ವಿಶ್ವಾಸದ ಒಂದು ಭಾಗವಾಗಿದೆ. ಇದರ ಬಗ್ಗೆ ಮಿರ್ಝಾ ಮಸ್‌ರೂರ್ ಅಹ್ಮದ್ ತನ್ನ ಭಾಷಣದಲ್ಲಿ ಒತ್ತು ನೀಡಿದರು. ಅಹ್ಮದಿ ಮುಸ್ಲಿಮರು ಉನ್ನತ ಮೌಲ್ಯಗಳನ್ನು ಎತ್ತಿ ಹಿಡಿಯುವವರಾಗಿದ್ದಾರೆ. ನಾವು ಯಾವಾಗಲೂ ಸೇವೆಗೆ ಬದ್ಧರಾಗಿದ್ದೇವೆ. ತಮ್ಮ ನೆರೆಹೊರೆಯವರಿಗೆ ಸಹಕರಿಸುವೆವು. ನಾವು ಸೌಹಾರ್ಧತೆ ಮತ್ತು ಪ್ರೀತಿಯ ವಾತಾವರಣ ನಿರ್ಮಿಸ ಬಯಸುತ್ತೇವೆ. ಯಾವ ರೀತಿಯ ಪಿತೂರಿ ನಡೆಸುವುದಿಲ್ಲ. ಖಲಿಫರು HANAU ಮಸೀದಿಯ ನಿರ್ಮಾಣದಲ್ಲಿ ಸಹಕಾರ ನೀಡಿದವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ಅನಂತರ ಲಾರ್ಡ್ ಮೇಯರ್‌ರ ಭಾಷಣವನ್ನು ಪ್ರಸ್ತಾಪಿಸಿದರು.

Gelenhauser neue zeitung ಪತ್ರಿಕೆ ಅಲ್‌ಡಿ (Aldi) ಎಂಬ ಸೂಪರ್‌ಮಾರ್ಕೆಟ್ ಇದೀಗ ಮಸೀದಿಯಲ್ಲಿ ಪರಿವರ್ತಿತಗೊಂಡಿದೆ. ಅದು ಜರ್ಮನ್ ಆದ್ಯಂತ ಪ್ರಖ್ಯಾತಗೊಂಡಿದೆ. ಒಂದು ಕಾಲದಲ್ಲಿ ಜನರು ಇಲ್ಲಿ ತಮ್ಮ ದಿನನಿತ್ಯದ ವಸ್ತುಗಳನ್ನು ಖರೀದಿಸಲು ಬರುತ್ತಿದ್ದರು. ಇದೀಗ ಇಲ್ಲಿ ಹಣವಿಲ್ಲದೆ ಖರೀದಿಸುವ ವಸ್ತುಗಳು ಪ್ರಸ್ತುತಪಡಿಸಲಾಗುವುದು. ಖಲೀಫ ಹಝ್ರತ್ ಮಿರ್ಝಾ ಮನ್ಸೂರ್ ಅಹ್ಮದ್, ಅವರು ಮುಸ್ಲಿಮ್ ಧಾರ್ಮಿಕ ಸಂಘಟನೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಧಾರ್ಮಿಕ ನೇತಾರರಾಗಿದ್ದಾರೆ. ಈ ವಿಷಯದೆಡೆ ಗಮನ ಸೆಳೆದರು. ಇದೀಗ ಆರಾಧನೆಗೋಸ್ಕರ ಒಟ್ಟುಗೂಡುವ ಈ ಸ್ಥಳವು ಮೊದಲು ಸೂಪರ್‌ಮಾರ್ಕೆಟ್ ಆಗಿದ್ದಿತು. ಅನಂತರ ಮಸೀದಿ ಮತ್ತು ಜಮಾಅತಿನ ಕುರಿತು ಸಂಕ್ಷಿಪ್ತ ಪರಿಚಯ ನೀಡಿದರು.

T.V. Channel RTL 29 ಮೇ 2015 ರ ಸಂಜೆ ಹುಝೂರ್ ಅನ್ವರ್ ಅವರ ಕಿರು ಸಂದರ್ಶನ ಪ್ರಸಾರಗೊಳಿಸಿತು.

ಅದರ ಮೇಲೆ 2 ನಿಮಿಷ 33 ಸೆಕೆಂಡ್ ಸುದ್ದಿ ಬಿತ್ತರವಾಯಿತು. ಆ ಸುದ್ದಿಯಲ್ಲಿ ಮಸೀದಿಯ ಉದ್ಘಾಟನೆಯ ದೃಶ್ಯಗಳನ್ನು ಜಮಾಅತ್ ಬಾಂಧವರನ್ನು ಮತ್ತು ಕವನಗಳನ್ನು ಓದುತ್ತಿರುವ ಬಾಲಕಿಯರನ್ನು ತೋರಿಸಲಾಯಿತು. ಹುಝೂರರ ಆಗಮನ, ಸಮಾರಂಭದಲ್ಲಿ ಭಾಗವಹಿಸುವಿಕೆ, ನಮಾಝ್ ನಿರ್ವಹಿಸುವ ದೃಶ್ಯಗಳಿವೆ. ಹುಝೂರರ ಈ ಹೇಳಿಕೆಯನ್ನು ತೋರಿಸಲಾಯಿತು. ನಾವು ಲೋಕದಾದ್ಯಂತ ಮತ್ತು ಯೂರೋಪಿನಲ್ಲಿ ಮಸೀದಿಗಳನ್ನು ನಿರ್ಮಿಸುತ್ತಿದ್ದೇವೆ. ಇದು ನಮ್ಮ ಉದ್ದೇಶವಾಗಿದೆ. ನಾವು ಆ ಮೂಲಕ ಇಸ್ಲಾಮಿನ ನಿಜವಾದ ಶಿಕ್ಷಣವನ್ನು ತಿಳಿಸ ಬಯಸುತ್ತೇವೆ. ಮೊದಲು ಇಲ್ಲಿ ಸೂಪರ್ ಮಾರ್ಕೆಟ್ ಇತ್ತು. ಈಗ ಮಸೀದಿ ನಿರ್ಮಾಣವಾಗಿದೆ ಎಂಬುದನ್ನು ತೋರಿಸಲಾಯಿತು.

ಈ ಮಸೀದಿಯ ಉದ್ಘಾಟನೆಯ ಬಗ್ಗೆ 50 ಸುದ್ದಿಗಳು ಬಿತ್ತರಗೊಂಡಿವೆ. ಹೆಚ್ಚಿನ ಪತ್ರಿಕೆಗಳು ಉದ್ಘಾಟನಾ ಪೂರ್ವದಲ್ಲಿಯೂ ಸುದ್ದಿ ನೀಡಿದ್ದವು. ಆನಂತರವು ನೀಡಿರುತ್ತದೆ.

**28 ಮೇ ಗುರುವಾರ 2015**

ಮುಂಜಾನೆ ಹುಝೂರ್ ಕಚೇರಿಯು ಅಂಚೆಗಳು ಮತ್ತು ಲೋಕದಾದ್ಯಂತ ವಿವಿಧ ದೇಶಗಳಿಂದ ಬಂದ ವರದಿಗಳು ಮತ್ತು ಪತ್ರಗಳನ್ನು ಪರಿಶಿಲಿಸಿದರು. ಹುಝೂರ್ ಜರ್ಮನಿಯಲ್ಲಿ ವಾಸಿಸುತ್ತಿರುವವರಿಗೆ, ಲೋಕದ ವಿವಿಧ ಜಮಾಅತುಗಳಿಂದ ದಿನನಿತ್ಯ ಬರುತ್ತಿರುವ Faxes ಮತ್ತು ಇ-ಮೇಲ್ ಮುಖಾಂತರ ಬರುತ್ತಿರುವ ಪತ್ರಗಳು ಹಾಗೂ ವರದಿಗಳು ಪಡೆಯುತ್ತಿದ್ದಾರೆ. ಅದೇ ರೀತಿ ಜರ್ಮನಿಯ ವಿವಿಧ ಜಮಾಅತ್‌ಗಳ ಜನರಿಂದಲೂ ನೂರಾರು ಸಂಖ್ಯೆಯಲ್ಲಿ ಪತ್ರಗಳು ಬರುತ್ತಿವೆ.

ಹುಝೂರ್ ಅದೇ ದಿನ ಇವೆಲ್ಲ ಅಂಚೆಗಳನ್ನು ಪರಿಶೀಲಿಸುತ್ತಾರೆ ಮತ್ತು ನಿರ್ದೇಶನಗಳನ್ನು ನೀಡುತ್ತಾರೆ. ಹೀಗೆ ಝೊಹರ್ ನಮಾಝಿನವರೆಗೆ ಹುಝೂರ್ ವಿವಿಧ ರೀತಿಯ ಕಚೇರಿ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ತೊಡಗಿದ್ದರು.

ಹುಝೂರ್ ಮಧ್ಯಾಹ್ನ ಎರಡು ಗಂಟೆಗೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿ ಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

ಸಾಯಂಕಾಲವು ಹುಝೂರ್ ವಿವಿಧ ಕಚೇರಿ ಕಾರ್ಯಗಳನ್ನು ನಿರ್ವಹಿಸುವುದರಲ್ಲಿ ತೊಡಗಿದ್ದರು.

**ಕುಟುಂಬಗಳ ಭೇಟಿ**

ಕಾರ್ಯಕ್ರಮದನ್ವಯ 6 ಗಂಟೆಗೆ ಹುಝೂರ್ ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬಗಳ ಹಾಗೂ ವೈಯುಕ್ತಿಕವಾಗಿ ಕೆಲವು ಸದಸ್ಯರ ಭೇಟಿಗಳನ್ನು ಪ್ರಾರಂಭಿಸಿದರು.

ಇಂದು ಸಂಜೆಯ ಈ ಅಧಿವೇಶನದಲ್ಲಿ 45 ಕುಟುಂಬಗಳ 157 ಜನರು ಮತ್ತು 27 ಜನರು ವೈಯಕ್ತಿಕವಾಗಿ ಹೀಗೆ ಒಟ್ಟು 164 ಜನರು ತಮ್ಮ ಪ್ರೀತಿಯ ನೇತಾರರೊಡನೆ ಭೇಟಿಯಾಗುವ ಭಾಗ್ಯ ಪಡೆದರು. ಅವೆಲ್ಲ ಕುಟುಂಬಗಳು ಮತ್ತು ಇತರ ಬಂಧುಗಳು ಹುಝೂರರ ಜೊತೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದವರು. ಫ್ರಂಕ್‌ಫರ್ಟ್ ಜಮಾಅತ್ತಿನಿಂದ ಬಂದ ಕುಟುಂಬಗಳು ಮತ್ತು ಇತರ ಬಂಧುಗಳಲ್ಲದೆ ಇತರ ವಿವಿಧ ಜಮಾಅತುಗಳಿಂದ KOLN, MARBURG, STADE, TRIER, BOCHOLT, HATTERSHEIM, AALEN, AHAUS, FRIEDBERG, FREINSHEIM, NEUFAHRN, WALDSHUT, VIERSEN, KREUZNACH, ERFURT, AUSUNGBERG, MUNICH, KASOL, KOBLENZ, WIESBARDEN ನಿಂದ ಬರುವ ಕುಟುಂಬಗಳು ಮತ್ತು ಬಂಧುಗಳು ಶಾಮೀಲಾಗಿದ್ದರು. ಇವರೆಲ್ಲರೂ ತಮ್ಮ ಪ್ರೀತಿಯ ನೇತಾರರನ್ನು ಭೇಟಿಯಾಗುವ ಭಾಗ್ಯ ಪಡೆದರು. ಪ್ರತಿಯೊಬ್ಬರೂ ಈ ಅನುಗ್ರಹಪೂರ್ಣ ಕ್ಷಣಗಳಿಂದ ಪ್ರೇರಿತರಾಗಿ ಹೊರ ಬಂದರು. ಸ್ವಾಸ್ಥದ ಪ್ರಾರ್ಥನೆ ಪಡೆದರು. ವಿವಿಧ ಸಂಕಷ್ಟಗಳಲ್ಲಿ ಮತ್ತು ಸಮಸ್ಯೆಗಳಲ್ಲಿ ಸಿಲುಕಿದ ಜನರು ತಮ್ಮ ಕಷ್ಟಗಳ ನಿವಾರಣೆಯ ದುಆ ಅಪೇಕ್ಷಿಸಿದರು. ನೆಮ್ಮದಿಗಳನ್ನು ಪಡೆದುಕೊಂಡು ಮುಗುಳ್ನಗುತ್ತಾ ಹೊರ ಬಂದರು. ಕೆಲವರು ತಮ್ಮ ವ್ಯಾಪಾರ ಮತ್ತು ವಿವಿಧ ಸಮಸ್ಯೆಗಳ ಕುರಿತು ಮಾರ್ಗದರ್ಶನ ಪಡೆದರು.

ವಿದ್ಯಾರ್ಥಿ ವಿದ್ಯಾರ್ಥಿಯರು ಶೈಕ್ಷಣಿಕ ಕ್ಷೇತ್ರದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ತಮ್ಮ ಪ್ರೀತಿಯ ಇಮಾಮರ ದುಆ ಅಪೇಕ್ಷಿಸಿದರು. ಒಟ್ಟಿನಲ್ಲಿ ಪ್ರತಿಯೊಬ್ಬರೂ ತಮ್ಮ ಪ್ರೀತಿಯ ಇಮಾಮರ ದುಆ ಪಡೆದು ದರ್ಶನದ ದಾಹ ನೀಗಿಸಿಕೊಂಡರು. ಈ ಪವಿತ್ರ ಕ್ಷಣಗಳು ಶಾಶ್ವತ ರೀತಿಯಲ್ಲಿ ಅವರನ್ನು ಸಂತೃಪ್ತಿ ನೀಡಿದಂತಾಯಿತು.

ಪಾಕಿಸ್ತಾನದಿಂದ ಬಂದ ಒಂದು ಕುಟಂಬ ಭೇಟಿ ಮಾಡಿ ಕಚೇರಿಯಿಂದ ಹೊರಗೆ ಬಂದಾಗ ಅವರ ಕಣ್ಣುಗಳು ಆಶ್ರುಭರಿತವಾಗಿದ್ದವು. ಮತ್ತು ಆ ಮಹಿಳೆ ಅವಿರತವಾಗಿ ಅಳುತ್ತಿದ್ದಳು. ಹೇಳತೊಡಗಿದಳು ಇಲ್ಲಿಯವರೆಗೆ ನಾವು ಹುಝೂರರನ್ನು ಟಿ.ವಿ ಯ ಮೇಲಷ್ಟೇ ನೋಡಿದ್ದೆವು. ಇಂದು ತಮ್ಮ ಜೀವನದಲ್ಲಿ ಮೊದಲ ಬಾರಿಗೆ ಅಷ್ಟು ಸಮೀಪದಿಂದ ನೋಡುವಂತಾಗಿದೆ. ಈ ಕ್ಷಣಗಳು ನನಗೆ ವಿವರಿಸಲು ಸಾಧ್ಯವಿಲ್ಲ. ನಾನು ಹುಝೂರರನ್ನು ನೋಡಿ ತುಂಬ ಧನ್ಯನಾಗಿದ್ದೇನೆ. ಅಲ್ಲಾಹನು ಈ ಭಾಗ್ಯ ಆ ಕುಟುಂಬದವರಿಗೆ ಶುಭಗೊಳಿಸಲಿ.

ತಮ್ಮ ಪ್ರೀತಿಯ ಇಮಾಮರ ದರ್ಶನ ಪಡೆಯುತ್ತಿರುವರು. ಸಾಮಿಪ್ಯ ಹೊಂದುತ್ತಿರುವವರು ತುಂಬ ಭಾಗ್ಯಶಾಲಿಗಳಾಗಿದ್ದಾರೆ. ಈ ಅನುಗ್ರಹ ಪೂರ್ಣ ಕೆಲ ಕ್ಷಣಗಳು ಜೀವನಪೂರ್ತಿಯ ಬಂಡವಾಳವಾಗಿದೆ. ಇವರ ಇಡೀ ಜೀವನ ಒಂದೆಡೆ ಮತ್ತು ಈ ಕೆಲ ಪವಿತ್ರ ಕ್ಷಣಗಳು ಒಂದೆಡೆಯಾಗಿವೆ. ಅದು ಅಮೂಲ್ಯವಾದುದು. ಅಲ್ಲಾಹನು ನಮಗೆ ಆ ಕ್ಷಣಗಳನ್ನು ರಕ್ಷಿಸಿಕೊಳ್ಳುವರು ಮತ್ತು ಅದರ ಮೌಲ್ಯ ಕಾಪಾಡಿಕೊಳ್ಳುವವರಾಗಿ ಮಾಡಲಿ. ಇದು ಕೇವಲ ನಮಗೆ ಮಾತ್ರವಲ್ಲ. ಬದಲು ಬರುವ ನಮ್ಮ ಮುಂದಿನ ಪೀಳಿಗೆಯ ಬಂಡವಾಳವೂ ಆಗಿದೆ. ಈ ಕ್ಷಣಗಳ ಅನುಗ್ರಹದಿಂದ ನಮ್ಮ ಪೀಳಿಗೆಗಳು ಅನುಗ್ರಹಿತವಾಗುವುವು ಮತ್ತು ಯಶಸ್ಸು ಸಾಧಿಸುವರು ಇನ್‌ಶಾಅಲ್ಲಾಹ್.

ಹುಝೂರ್ ವಿದ್ಯಾರ್ಥಿ, ವಿದ್ಯಾಥಿಯರಿಗೆ ಲೇಖನಿ ಮತ್ತು ಸಣ್ಣ ಮಕ್ಕಳಿಗೆ ಚಾಕ್ಲೇಟ್ ನೀಡಿದರು. ಭೇಟಿಗಳ ಈ ಕಾರ್ಯಕ್ರಮವು 9 ಗಂಟೆಯವರೆಗೆ ನಡೆದಿತ್ತು. ಅನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**(ಮುಂದುವರಿಯುವುದು)**

**Love for All, Hatred for None**

**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 12 November 2020, Issue No. 44

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**27 ಮೇ ಬುಧವಾರ 2015 (ಶೇಷ ವರದಿ)**

ಇಲೆಕ್ಟ್ರಾನಿಕ್ ಮತ್ತು ಪ್ರಿಂಟ್ ಮೀಡಿಯಾ **"ಬೈತುಲ್ ವಾಹಿದ್"** ಮಸೀದಿ ಉದ್ಘಾಟನಾ ಕಾರ್ಯಕ್ರಮದ ವರದಿಗಳನ್ನು ಬಿತ್ತರಿಸಿದರು.

**"ಬೈತುಲ್ ವಾಹಿದ್"** ಮಸೀದಿಯ ಉದ್ಘಾಟನಾ ಸುದ್ದಿ ಮಾಧ್ಯಮಗಳಲ್ಲಿ BIID ಪತ್ರಿಕೆಯು ಬೈತುಲ್ ವಾಹಿದ್ ಮಸೀದಿಯ ಉದ್ಘಾಟನೆ ನಿಮಿತ್ತ ಸುದ್ದಿಯು ನೀಡುತ್ತ ಹೀಗೆ ಬರೆದಿತ್ತು. (ಇದು ಜರ್ಮನಿಯ ಅತ್ಯಧಿಕ ಪ್ರಸಾರಗೊಳ್ಳುವ ದಿನ ಪತ್ರಿಕೆಯಾಗಿದೆ. ಅದು ತನ್ನ ಕ್ಷೇತ್ರದ ಬ್ಲಾಕಿನಲ್ಲಿ ಮಸೀದಿಯ ಉದ್ಘಾಟನಾ ಸುದ್ದಿ ನೀಡುತ್ತ ಬರೆದಿತ್ತು)

ಅಹ್ಮದಿಯಾ ಮುಸ್ಲಿಮ್ ಜಮಾಅತಿನ 64 ವರ್ಷಗಳು ತುಂಬಿದ ಆಧ್ಯಾತ್ಮಿಕ ನೇತಾರರಾದ ಖಲಿಫಾ ಮಿರ್ಝಾ ಮಸ್ರೂರ್ ಅಹ್ಮದ್ ಲಂಡನ್‌ನಿಂದ ಆಗಮಿಸಿದ್ದರು. ಲಾರ್ಡ್ ಮೇಯರ್ ಹೇಳಿದರು. ಮೊದಲು ಜನರಲ್ಲಿ ಭಯವಿತ್ತು. ಆದರೆ ಪಾರದರ್ಶಕತೆ (oppenness) ಮತ್ತು ಸಂಬಂಧಿತ ಜನರೊಂದಿಗೆ ಮಾತುಕತೆಯ ನಂತರ ನಾವು ಅದನ್ನು ಕೊನೆಗಾಣಿಸುವುದರಲ್ಲಿ ಯಶಸ್ವಿಯಾದೆವು ಮತ್ತು ಬರೆಯುತ್ತಾರೆ. ಮೇಯರ್ ಹೇಳಿದರು. ಅಲ್ಲಿ 127 ಸಮುದಾಯಗಳು ಮತ್ತು 20 ಧರ್ಮಗಳ ಹಾಗೂ ಪಂಗಡಗಳಿಂದ ಸಂಬಂಧಿತ ಜನರು ಮನಸಾಕ್ಷಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಬೆಂಬಲಿಸುತ್ತಾರೆ. ಸಮಾನತೆ ಒಂದು ಪಂಥಾಹ್ವಾನವಾಗಿದೆ. ಅದನ್ನು ಪ್ರತಿನಿತ್ಯ ನಮಗೆ ಹೊಸ ಹುರುಪಿನಿಂದ ಸ್ಥಾಪಿಸಬೇಕಾಗಿದೆ. ಪರಸ್ಪರ ಭೇಟಿಮಾಡಿ ಮತ್ತು ಪರಸ್ಪರ ಗೌರವಿಸಿ ದ್ವೇಷಗಳನ್ನು ಹೋಗಲಾಡಿಸಬಹುದಾಗಿದೆ.

His Holiness ಮಿರ್ಝಾ ಮಸ್ರೂರ್ ಅಹ್ಮದ್ ಹೇಳಿದರು. ಈಗ ಇಲ್ಲಿ ಯಾವ ಭೌತಿಕ ವಸ್ತುಗಳು ಮಾಡಲಾಗುವುದಿಲ್ಲ. ಈಗ ಅದು ಅಲ್ಲಾಹನ ಮನೆಯಾಗಿದೆ. ಅದರಲ್ಲಿ ಮಹೋನ್ನತವಾದ ಮತ್ತು ಅತಿ ಸುಂದರವಾದ ಮೌಲ್ಯಗಳನ್ನು ಪ್ರಸ್ತುತಪಡಿಸಲಾಗುವುದು. ಪ್ರೀತಿ ಸಹೋದರತೆ ಮತ್ತು ಕರುಣೆ ಈ ಮನೆಯಿಂದ ದೊರೆಯುವುದು. ನಾವು ಕಷ್ಟಗಳಲ್ಲಿ ಸಿಲುಕಿರುವ ಎಲ್ಲ ಮನುಷ್ಯರಿಗಾಗಿ ಉಪಸ್ಥಿತರಿದ್ದೇವೆ. ಈ ಮಸೀದಿ ಎಲ್ಲ ಮಾನವರಿಗಾಗಿ ಮತ್ತು ಧರ್ಮಗಳಿಗಾಗಿ ಮುಕ್ತವಾಗಿರುವುದು.

ಆದರೆ ಅವರು ಈ ಎಚ್ಚರಿಕೆಯನ್ನು ನೀಡಿದರು. ನಮ್ಮ ಮಧ್ಯೆ ಯಾರಾದರೂ ಕ್ಷೋಭೆ ಉಂಟು ಮಾಡಲು ಪ್ರಯತ್ನಿಸಿದರೆ ನಾವು ಅದರ ವಿರುದ್ಧ ದೇಶೀಯ ಕಾನೂನುಗಳ ಪ್ರಕಾರ ಕ್ರಮ ಕೈಗೊಳ್ಳುವೆವು. ಲೋಕಕ್ಕೆ ಹಿಂಸೆ ಮತ್ತು ದೌರ್ಜನ್ಯದ ಅವಶ್ಯಕತೆಯಿಲ್ಲ. ಶಾಂತಿ ಒಂದು ಅಮೂಲ್ಯ ಸಂಪತ್ತಾಗಿದೆ. ಅದು ನಮ್ಮ ಧ್ಯೇಯವಾಗಿದೆ.

ಪತ್ರಿಕೆಯು ಅದರ ಜೊತೆಯಲ್ಲಿ ಮಸೀದಿಯ ಚಿತ್ರ ಮತ್ತು ಹುಝೂರರ ಚಿತ್ರ ಪ್ರಕಟಿಸಿತ್ತು.

HANAU ವಿನ ಸ್ಥಳೀಯ ಪತ್ರಿಕೆ HANAVER Anzelger ತಮ್ಮ 29 ಮೇ 2015 ರ ಸಂಚಿಕೆಯಲ್ಲಿ ಸುಮಾರು ಅರ್ಧ ಪುಟದಷ್ಟು ಸುದ್ದಿ ಬರೆದಿದೆ.

ಸತ್ಯ ವಿಶ್ವಾಸಿಗಳಿಗೆ ಒಂದು ಮಹೋನ್ನತ ದಿನ ಎಂಬ ಶೀರ್ಷಿಕೆ ನೀಡಿ ಬರೆಯುತ್ತಾರೆ. ಖಲೀಫ, ಅವರಿಗೆ ಅವರ ಅನುಯಾಯಿಗಳು ಮತ್ತು ಲಾರ್ಡ್ ಮೇಯರ್ His Holiness ಎಂದು ಸಂಬೋಧಿಸುತ್ತಾರೆ. ಅವರು, ಅವರ ಜಮಾಅತ್ ಒಂದು ಶಾಂತಿಪ್ರಿಯ ಜಮಾಅತ್ ಆಗಿದೆ ಎಂದು ಒತ್ತಿ ಹೇಳಿದರು. ಈ ಜಮಾಅತಿನ ಪ್ರಮುಖ ಧ್ಯೇಯ (Motto) **"ಪ್ರೀತಿ ಎಲ್ಲರೊಂದಿಗೂ ದ್ವೇಷವಿಲ್ಲ ಯಾರೊಂದಿಗೂ"** ಎಂದು ಆಗಿದೆ. 200ಕ್ಕಿಂತ ಹೆಚ್ಚು ಅತಿಥಿಗಳು ಮತ್ತು ಅಷ್ಟೇ ಸಂಖ್ಯೆಯ ತಮ್ಮ ಅನುಯಾಯಿಗಳ ಮುಂದೆ ಬ್ರಿಟನಿಯಾದಿಂದ ಆಗಮಿಸಿದ ಖಲೀಫರು ಧರ್ಮ ಧರ್ಮಗಳ ಮಧ್ಯೆ ಮೈತ್ರಿ ಮತ್ತು ಸಮತೋಲನೆ ಕಾಪಾಡಲು ಉಪದೇಶ ನೀಡಿದರು. ಹೇಳಿದರು. ಮಾನವೀಯತೆಯ ಸೇವೆ ಮಾಡುವುದು ಅಹ್ಮದಿ ಮುಸ್ಲಿಮರ ಕರ್ತವ್ಯವಾಗಿದೆ. ನಮ್ಮ ಮಸೀದಿಗಳು ಮತ್ತು ಕೇಂದ್ರಗಳು ಅಮುಸ್ಲಿಮರಿಗೂ ಮುಕ್ತವಾಗಿವೆ. ಆದರೆ ಎಲ್ಲ ಲೌಕಿಕ ಸರಕಾರಗಳ ಕೆಲಸವೂ ಆಗಿದೆ. ಅವು ಎಲ್ಲರ ಆರಾಧನಾ ಸ್ಥಳಗಳನ್ನು ಸಂರಕ್ಷಿಸಬೇಕು, ಅದು ಕ್ರೈಸ್ತರದ್ದೇ ಆಗಿರಲಿ ಅಥವಾ ಯಹೂದಿರದ್ದೇ ಆಗಿರಲಿ, ಮುಸ್ಲಿಮ್, ಬುದ್ಧ ಅಥವಾ ಯಾರದ್ದೆ ಆಗಿರಲಿ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೇಳಿದರು. ಲೋಕಕ್ಕೆ ಯುದ್ಧ ಶೋಷಣೆ ಮತ್ತು ಉಗ್ರವಾದದ ಅವಶ್ಯಕತೆಯಿಲ್ಲ. ಲೋಕಕ್ಕೆ ಪ್ರೀತಿ ಮತ್ತು ಸಹಿಷ್ಣುತೆಯ ಅವಶ್ಯಕತೆಯಿದೆ. ಅದಾದ ನಂತರ ಜಮಾಅತಿನ ಕಾನೂನಿನ, ಶಾಲೆಗಳಲ್ಲಿ ಇಸ್ಲಮಿ ಶಿಕ್ಷಣಗಳ ಬಗ್ಗೆ ಮತ್ತು ಲಾರ್ಡ್ ಮೇಯರ್‌ರ ಭಾಷಣ ಇತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಿದರು. ಅಮೀರ್ ಸಾಹಿಬ್, ಮಸೀದಿಯ ಕಾರ್ಯಕರ್ತರ ವಿಭಾಗ, ಅದೇ ರೀತಿ ಮಸೀದಿಯ ನಿರ್ಮಾಣದ ಖರ್ಚು ವೆಚ್ಚ ಹಾಗೂ ಮಸೀದಿಯ ಇತರ ವಿವರಣೆಯನ್ನು ನೀಡಿದರು.

Echo ಪತ್ರಿಕೆಯು **"ಬೈತುಲ್ ವಾಹಿದ್"** ಮಸೀದಿಯ ಉದ್ಘಾಟನೆಯ ಸುದ್ದಿ ನೀಡುತ್ತಾ ಬರೆದಿದೆ. HESSEN ರಾಜ್ಯದ ವಿಶಾಲವಾದ ಮಸೀದಿಗಳಲ್ಲಿ ಒಂದಾದ ಮಸೀದಿಯ ಉದ್ಘಾಟನೆಯು ಬುಧವಾರದಂದು ನಡೆಯಿತು. ಅದರಲ್ಲಿ ಜಮಾಅತಿನ ಆಧ್ಯಾತ್ಮಿಕ ನೇತಾರರು ಭಾಗವಹಿಸಿದ್ದರು. ಖಲೀಫ ಹಝ್ರತ್ ಮಸ್‌ರೂರ್ ಅಹ್ಮದ್ ಲಂಡನ್ನಿನಿಂದ ಆಗಮಿಸಿದ್ದರು ಇದು ಅಹ್ಮದಿಯಾ ಮುಸ್ಲಿಮರ ಮಸೀದಿಯಾಗಿದೆ. ಅದು ಮೊದಲ ಮತ್ತು ಇಲ್ಲಿಯವರೆಗಿನ ಏಕೈಕ ಮುಸ್ಲಿಮ್ ಸಂಘಟನೆಯಾಗಿದೆ. ಅವರ ಬಳಿ ವಿಶಿಷ್ಟವಾದ ಕಾನೂನಿನ ಸ್ಥಾನಮಾನವಿದೆ. ಅದು ಕ್ರೈಸ್ತರ ಪಂಥಗಳ ಸಮಾನವಾಗಿದೆ. ಮಸೀದಿಯ ಕುರಿತು ಹೇಳಿದರು. ಅದರಲ್ಲಿ 500 ಜನರು ಆರಾಧನೆ ಮಾಡಬಹುದಾಗಿದೆ. ಖಲೀಫರು ನಮಾಝಿನ ನೇತೃತ್ವ ವಹಿಸಿದ್ದರು. ಅದಾದ ನಂತರ ಲಾರ್ಡ್ ಮೇಯರ್‌ರ ಜೊತೆ ಅಕ್‌ರೋಟಿನ ಎರಡು ಗಿಡಗಳನ್ನು ನೆಟ್ಟರು. ಲಾರ್ಡ್ ಮೇಯರ್ Kaminsky ಹೇಳಿದರು. ನನ್ನ ಮನೋಕಾಮನೆ ಎಂದರೆ ಈ ಮಸೀದಿಯು ವಿವಿಧ ಧರ್ಮಗಳ ಮಧ್ಯೆ ಮಾತುಕತೆಯ ಮೂಲಕ ಪರಸ್ಪರ ತಿಳಿದುಕೊಳ್ಳುವ ಒಂದು ಮಾರ್ಗವಾಗಬೇಕು ಮತ್ತು ದ್ವೇಷಗಳು ಮಟ್ಟಹಾಕಬೇಕು. ಜಮಾಅತ್ ಅಹ್ಮದಿಯಾ ವಿವರಣೆಯ ಪ್ರಕಾರ ಖುತುಬಾ ಜುಮಅ ಜರ್ಮನ್ ಭಾಷೆಯಲ್ಲಿ ನೀಡಲಾಗುವುದು. ಅದರ ತಾತ್ಪರ್ಯ ಅಹ್ಮದಿ ಮುಸ್ಲಿಮರು ಜರ್ಮನಿಯೊಂದಿಗೆ ಬೆರೆತು ಹೋಗಲು ಬಯಸುತ್ತಾರೆ ಎಂದು. HESSEN ರಾಜ್ಯದಲ್ಲಿ ಜಮಾಅತಿನ 15 ಮಸೀದಿಗಳಿವೆ.

HANAU ವಿನ ಇನ್ನೊಂದು ಸ್ಥಳೀಯ ಪತ್ರಿಕೆ HANAUER Post 29 ಮೇ 2015 ರ ಸಂಚಿಕೆಯಲ್ಲಿ ಸುಮಾರು ಅರ್ಧ ಪುಟಗಳ ಸುದ್ದಿ ಬಿತ್ತರಿಸಿದೆ.

**ಖಲೀಫರ ಆಗಮನ ಮತ್ತು ಮಸೀದಿಯ ಉದ್ಘಾಟನೆಯ ಸಂದರ್ಭ ಭಾವುಕತೆ.**

ನವೀದ್ ಅಹ್ಮದ್ ಎಂಬ ಒಬ್ಬ ಅಹ್ಮದಿ ಯುವಕನ ಕುರಿತು ಬರೆಯಲಾಗಿದೆ, ಅವನು ಕೇವಲ ಖಲೀಫರನ್ನು ನೋಡಲು, ತನ್ನ ಕೈಲಾಗುವ ಸೇವೆ ನೀಡಲು ಫ್ರೆಂಕ್‌ಫರ್ಟಿನಿಂದ ಬಂದಿದ್ದನು. ಏಕೆಂದರೆ ಅದುವೇ ಖಲೀಫರನ್ನು ನೋಡುವ ಒಂದು ಮಾರ್ಗವಾಗಿತ್ತು. ಅಹ್ಮದಿಯಾ ಜಮಾಅತಿನ ಜನರಿಗೆ ಅವರ ಜಾಗತಿಕ ನೇತಾರರ ಪ್ರವಾಸವು ತುಂಬ ಪ್ರಾಮುಖ್ಯತೆ ಹೊಂದಿರುತ್ತದೆ ಒಬ್ಬ ಯುವಕನು ಹೇಳಿದನು. ನನ್ನ ಇಲ್ಲಿನ ಬರುವಿಕೆ ಮತ್ತು ಅವರ ದರ್ಶನ ನನಗೆ ಸರ್ವಸ್ವವಾಗಿದೆ. ಇದೊಂದು ತುಂಬ ಭಾವುಕತೆಯ ವಿಷಯವಾಗಿದೆ. ಖಲೀಫನನ್ನು ಅಲ್ಲಾಹನು ನಿಯುಕ್ತಗೊಳಿಸುವನು ಎಂಬುದು ನಮ್ಮ ವಿಶ್ವಾಸವಾಗಿದೆ.

ಮಸೀದಿಯಲ್ಲಿ ನಮಾಝ್ ಮಾಡುವಾಗ ತಮ್ಮ ನೇತಾರರ ಜೊತೆಯಲ್ಲಿ ಹೊಸ ಕಾರ್ಪೆಟ್‌ಗಳ ಮೇಲೆ ಮೊಳಕಾಲುಗಳನ್ನು ಹಾಕುತ್ತಿರುವಾಗ ಮತ್ತು ತನ್ನ ಅಲ್ಲಾಹನೊಡನೆ ಸಂಪರ್ಕಿಸುವಾಗ ಹಲವು ಪುರುಷರ ಕಣ್ಣುಗಳು ತೇವಗೊಂಡಿದ್ದವು.

ಪತ್ರಿಕೆಯು ಮಸೀದಿಯ ವಿವರ ಮತ್ತು ಅತಿಥಿಗಳ ಕುರಿತು ಬರೆದಿತ್ತು.

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.